Swabhimani Sahakari
Pages : 40 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 17
Issue - 08
August - 2020

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ




23 ಜುಲೈ 1856 – 1 ಆಗಸ್ಟ್ 1920
ಲೋಕಮಾನ್ಯ ಬಾಲ ಗಂಗಾಧರ ತಿಲಕರ
100ನೇ ವರ್ಷದ ಪುಣ್ಯತಿಥಿ




ಭಾರತೀಯ
ವಾಯುಸೇನೆ ಸೇರಿದ
ರಫೇಲ್ ಯುದ್ಧ ವಿಮಾನಗಳು





ಆಗಸ್ಟ್ 21-22:
ಗೌರಿ-ಗಣೇಶ



ಆಗಸ್ಟ್ 05:

ಅಯೋಧ್ಯೆ ರಾಮ ಜನ್ಮಭೂಮಿಯಲ್ಲಿ
ಭವ್ಯ ರಾಮ ಮಂದಿರಕ್ಕೆ
ಪ್ರಧಾನಿ ಮೋದಿ ಭೂಮಿ ಪೂಜೆ

ಏಕದಂತಾಯ ವಕ್ರತುಂಡಾಯ ಗೌರಿ ತನಯಾಯ ಧೀಮಹಿ
ಗಜೇಶಾನಾಯ ಬಾಲಚಂದ್ರಾಯ ಶ್ರೀ ಗಣೇಶಾಯ ಧೀಮಹಿ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5062

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1341



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಕೊರೋನಾ ಮಹಾಮಾರಿಯಿಂದಾಗಿ ದೇಶದ ಆರ್ಥಿಕ ವ್ಯವಸ್ಥೆಗೆ ಹಿನ್ನಡೆಯಾಗುವುದರ ಜೊತೆಗೆ ಸಹಕಾರಿ ಕ್ಷೇತ್ರವೂ ಕಷ್ಟದ ದಿನಗಳನ್ನು ಎದುರಿಸುತ್ತಿದೆ. ಕೇಂದ್ರ ಸರಕಾರ ಸಹಕಾರ ಕ್ಷೇತ್ರದ ಸ್ವಾಯತ್ತತೆಯನ್ನು ರಕ್ಷಿಸುವಲ್ಲಿ ಕ್ರಮವಿಡಬೇಕಿದೆ. ಆರ್ಥಿಕ ಸುಭದ್ರತೆಯ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ತೆಗೆದುಕೊಳ್ಳುತ್ತಿರುವ ಕೆಲವು ಕಾರ್ಯಗಳು ಸಹಕಾರ ಕ್ಷೇತ್ರದ ಸ್ವಾಯತ್ತತೆಗೆ ಹಿನ್ನಡೆಯಾಗುವಂತಿವೆ. ಈ ಬಗ್ಗೆ ಸಂಬಂಧಿಸಿದ ಸಹಕಾರಿಗಳು ಒಕ್ಕಟ್ಟಾಗಿ ಸಾಮೂಹಿಕವಾಗಿ ಸಂಬಂಧಿಸಿದವರೊಡನೆ ವ್ಯವಹರಿಸಿ ಸಮಸ್ಯೆಗಳನ್ನು ಬಗೆ ಹರಿಸಬೇಕಿದೆ.

# ಸಹಕಾರಿ ಕ್ಷೇತ್ರದ ಅಭಿವೃದ್ಧಿ ಉತ್ತಮ ಕ್ರಿಯಾಯೋಜನೆ, ಸಹಕಾರಿಗಳ ಸಕಾರಾತ್ಮಕ ಸ್ಪಂದನೆ ಹಾಗೂ ಕ್ರಿಯಾಶೀಲ ಮಾನಸಿಕತೆಯಿಂದ ಸಾಧ್ಯ.

**ಆತ್ಮೀಯ ಸಹಕಾರಿ ಬಂಧುಗಳೆ,**

ರಾಜ್ಯದ ಎಲ್ಲ ಸಹಕಾರಿಗಳಿಗೆ ಕೃಷ್ಣಾಷ್ಟಮಿ, ದೇಶದ 74ನೇ ಸ್ವಾತಂತ್ರೋತ್ಸವ, ಗೌರಿ ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು. ಕೊರೋನಾ ಕಾಯಿಲೆಯ ಸಂದರ್ಭದಲ್ಲಿ ಈ ವರ್ಷದ ಸ್ವಾತಂತ್ರೋತ್ಸವ ದೇಶಕ್ಕೆ ಸಹಕಾರಿ ಕ್ಷೇತ್ರಕ್ಕೆ ಒಂದು ದೊಡ್ಡಸವಾಲನ್ನು ಎದುರಿಸುವ ಜೊತೆಗೆ ಅವಕಾಶಗಳನ್ನು ಹೇಗೆ ಸದುಪಯೋಗ ಮಾಡಿಕೊಳ್ಳಬೇಕು ಎಂಬ ಬಗ್ಗೆ ಚಿಂತನೆ ಪ್ರಾರಂಭಿಸಿದೆ. ಸರ್ವರಕ್ಷಕ ಸರ್ವಾಂತರಯಾಮಿ ಶ್ರೀ ಕೃಷ್ಣದೇವರು, ಸರ್ವ ವಿಘ್ನ ನಿವಾರಕ ವಿಘ್ನೇಶ್ವರ, ಆದಿಶಕ್ತಿ ಸರ್ವ ಮಂಗಳೆ ಗೌರಿ ತಮ್ಮೆಲ್ಲರಿಗೂ ಹೆಚ್ಚಿನ ಶಕ್ತಿಯನ್ನು ನೀಡಲಿ. ಹೆಚ್ಚಿನ ಅವಕಾಶಗಳನ್ನು ಒದಗಿಸಲಿ ಎಂದು ಪ್ರಾರ್ಥಿಸುತ್ತೇನೆ.

ಕೊರೋನಾ ಮಹಾಮಾರಿಯಿಂದಾಗಿ ದೇಶದ ಆರ್ಥಿಕ ವ್ಯವಸ್ಥೆಗೆ ಹಿನ್ನಡೆಯಾಗುವುದರ ಜೊತೆಗೆ ಸಹಕಾರಿ ಕ್ಷೇತ್ರವೂ ಕಷ್ಟದ ದಿನಗಳನ್ನು ಎದುರಿಸುತ್ತಿದೆ. ಕೇಂದ್ರ ಸರಕಾರ ಸಹಕಾರ ಕ್ಷೇತ್ರದ ಸ್ವಾಯತ್ತತೆಯನ್ನು ರಕ್ಷಿಸುವಲ್ಲಿ ಕ್ರಮವಿಡಬೇಕಿದೆ. ಆರ್ಥಿಕ ಸುಭದ್ರತೆಯ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ತೆಗೆದುಕೊಳ್ಳುತ್ತಿರುವ ಕೆಲವು ಕಾರ್ಯಗಳು ಸಹಕಾರ ಕ್ಷೇತ್ರದ ಸ್ವಾಯತ್ತತೆಗೆ ಹಿನ್ನಡೆಯಾಗುವಂತ್ತಿವೆ. ಈ ಬಗ್ಗೆ ಸಂಬಂಧಿಸಿದ ಸಹಕಾರಿಗಳು ಒಕ್ಕಟ್ಟಾಗಿ ಸಾಮೂಹಿಕವಾಗಿ ಸಂಬಂಧಿಸಿದವರೊಡನೆ ವ್ಯವಹರಿಸಿ ಸಮಸ್ಯೆಗಳನ್ನು ಬಗೆ ಹರಿಸಬೇಕಿದೆ.

ಕೊರೋನಾ ಹೆಮ್ಮಾರಿಯ ಹೊಡೆತದಿಂದ ಅಧೀರರಾಗದೆ ಸರಕಾರದ ಸೂಚನೆಗಳನ್ನು ಪಾಲಿಸುತ್ತ ಈ ಹೆಮ್ಮಾರಿಯನ್ನು ತಡೆಗಟ್ಟುವಲ್ಲಿ ಸರಕಾರದ ಜೊತೆಗೆ ಸಹಕರಿಸುತ್ತ ಸಾಗೋಣ. ಇದರ ಜೊತೆಗೆ ಸಹಕಾರಿಗಳು ಈಗ ಸಹಕಾರ ಕ್ಷೇತ್ರದ ಅಭಿವೃದ್ಧಿಯತ್ತ ಗಮನ ಹರಿಸುವುದು ಅಗತ್ಯ. 2020ರಲ್ಲಿ ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು ಸಹಕಾರಿ ಕ್ಷೇತ್ರ ಸಂಕಷ್ಟ ಸಮಯದಲ್ಲಿಯೂ ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲವು ಎಂಬ ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ಹಾಗೂ ವಿಶ್ವ ಸಂಸ್ಥೆಯವರು ಸಹಕಾರಿ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಬಲ್ಲವು ಎಂಬ ಸಂದೇಶಗಳಿಂದ ಹೊಸ ಚೈತನ್ಯವನ್ನು ತುಂಬಿಕೊಳ್ಳೋಣ. ಸಹಕಾರಿಗಳಾದ ನಾವು ಅಧೀರರಾಗದೇ ಉತ್ತಮ ಕ್ರಿಯಾ ಯೋಜನೆಗಳನ್ನು ರೂಪಿಸಿ ಮೊದಲಿಗಿಂತಲೂ ಉತ್ತಮವಾಗಿ ಕಾರ್ಯನಿರ್ವಹಿಸೋಣ. ಇದಕ್ಕಾಗಿ ನಾವು ಸಕಾರಾತ್ಮಕ ನಡೆ, ಉತ್ತಮ ಚಿಂತನೆಗಳನ್ನು ಪ್ರಾರಂಭಿಸಿ ಆರ್ಥಿಕ ಶಿಸ್ತು ರೂಡಿಸಿಕೊಂಡು ಉತ್ತಮ ಕಾರ್ಯಗಳನ್ನು ಮಾಡುವಂತೆ ಹೆಜ್ಜೆ ಹಾಕೋಣ.

ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಾರಂಭಿಕ ದಿನಗಳಿಂದಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತ ಬಂದಿವೆ. ಎಲ್ಲೂ ಒಂದೆರಡು ಸಹಕಾರಿಗಳು ಸ್ವಾಯತ್ತತೆಯನ್ನು ಶ್ವೇಚ್ಛಾಚಾರಕ್ಕಾಗಿ ಬಳಸಿವೆ. ಇವುಗಳ ಬಗ್ಗೆ ಸಂಯುಕ್ತ ಸಹಕಾರಿ ಗಮನ ಹರಿಸಿದೆ. ಕಾನೂನು ಕ್ರಮ ಜಾರಿಯಲ್ಲಿದೆ. ಈ ಸಮಯದಲ್ಲಿ ಸೌಹಾರ್ದ ಸಹಕಾರಿಗಳು ನಿರಾಶಾಭಾವವನ್ನು ಹೊಂದಿ ನಿಷ್ಕ್ರೀಯರಾಗದೆ ಧೈರ್ಯದಿಂದ ಹೆಚ್ಚಿನ ಉತ್ಸಾಹದಿಂದ ಸಂಘಟಿತರಾಗಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಹೊಸ ಹೊಸ ಯೋಜನೆಗಳನ್ನು ಜಾರಿಗೊಳಿಸುವುದರ ಜೊತೆಗೆ ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಸಾರ್ವಜನಿಕರಲ್ಲಿ ಸದಸ್ಯರಲ್ಲಿ ಹೆಚ್ಚಿನ ತಿಳುವಳಿಕೆ ಮೂಡಿಸಿ ಈ ಕ್ಷೇತ್ರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜಿ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ....................................... 2
ಸಂಪಾದಕೀಯ....................................... 3
ಸರ್ಕಾರದ ಸುತ್ತೋಲೆ ....................... 5–6
ಹೆಚ್.ವಿ. ರಾಜೀವ್ ಸ್ನೇಹ ಬಳಗದ ನೇತೃತ್ವದಲ್ಲಿ ಲಕ್ಷವೃಕ್ಷ ಆಂದೋಲನದ ಸಂದರ್ಶನ ....................................... 7–8
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ....................................... 9–20
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ....................................... 21–33
ಲೇಖನ....................................... 34–37
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–4) ................................. 38–40

# ಸಂಪಾದಕೀಯ

## ಪರಿಸರ ಸಂರಕ್ಷಣೆಯ ಜೊತೆಗೆ ವೃಕ್ಷಸಂಪತ್ ಅಭಿವೃದ್ಧಿಯಲ್ಲಿ ಸೌಹಾರ್ದ ಸಹಕಾರಿಗಳ ಪಾತ್ರ ಹೆಚ್ಚಿಸಲು ಕ್ರಮ ಅಗತ್ಯ. ಮೈಸೂರಿನ ಲಕ್ಷವೃಕ್ಷ ಆಂದೋಲನ ಹಾಗೂ ಹಸಿರು ಮೈಸೂರು ಅಭಿಯಾನ ಮಾದರಿ

ರಾಜ್ಯದ ಸೌಹಾರ್ದ ಸಹಕಾರಿಗಳು ಸಹಕಾರ ಕ್ಷೇತ್ರದಲ್ಲಿ ಅನೇಕ ಹೊಸ ಹೊಸ ಯೋಜನೆಗಳನ್ನು ಅಳವಡಿಸಿ ಸಹಕಾರ ಕ್ಷೇತ್ರದಲ್ಲಿ ಹೊಸ ಚೈತನ್ಯವನ್ನು ಮೂಡಿಸಲು ಯಶಸ್ವಿಯಾಗಿರುವುದು ಸರಿಯಷ್ಟೆ. ಪ್ರಸ್ತುತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕ್ರಿಯಾಯೋಜನೆಯ ಅನುಷ್ಠಾನದಲ್ಲಿ ಪರಿಸರ ಸಂರಕ್ಷಣೆ ಜೊತೆಗೆ ಹೆಚ್ಚು ಹೆಚ್ಚಾಗಿ ಮರಗಳನ್ನು ನೆಡುವ ಕಾರ್ಯಕ್ರಮವೊಂದನ್ನು ಹಾಕಿಕೊಳ್ಳಲಾಗಿದೆ ಎಂಬುದರ ಬಗ್ಗೆ ರಾಜ್ಯದ ಸೌಹಾರ್ದ ಸಹಕಾರಿಗಳು ಗಮನ ಹರಿಸುವುದು ಮತ್ತು ಈ ಬಗ್ಗೆ ಕ್ರಮವಿಡುವುದು ಅಗತ್ಯತೆಯೆನಿಸಿದೆ.

ರಾಜ್ಯದಲ್ಲಿ 5000ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ನೊಂದಣೆಯಾಗಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳ ಸಂಖ್ಯೆ 60 ರಿಂದ 65 ಸಾವಿರವಾಗುತ್ತದೆ. ಒಬ್ಬ ನಿರ್ದೇಶಕರು ಒಂದು ವರ್ಷದಲ್ಲಿ ಕನಿಷ್ಟ ಒಂದು ಮರವನ್ನು ನೆಡೆಸಿದರೆ ರಾಜ್ಯದಲ್ಲಿ ಮರಗಳ ಸಂಖ್ಯೆ ಹೆಚ್ಚಾಗುವುದರಲ್ಲಿ ಎರಡು ಮಾತಿಲ್ಲ. ಹೀಗಾಗಿ ರಾಜ್ಯದ ಸೌಹಾರ್ದ ಸಹಕಾರಿಗಳು ಈ ಕಾರ್ಯಕ್ರಮವನ್ನು ಸಾಮಾಜಿಕ ಕಳಕಳಿ ಮತ್ತು ಜವಾಬ್ದಾರಿಯಲ್ಲಿ ವಿಶೇಷ ಕಾರ್ಯಯೋಜನೆಯಡಿ ಜಾರಿಮಾಡಬೇಕೇಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಇದು ನಮ್ಮ ರಾಜ್ಯದ ವೃಕ್ಷ ಸಂಪತ್ ಅನ್ನು ಹೆಚ್ಚಿಸುತ್ತದೆ. ಸೌಹಾರ್ದ ಸಹಕಾರಿಗಳ ಕಾರ್ಯವ್ಯಾಪ್ತಿಯಲ್ಲಿ ಜನರಿಗೆ ಸದಸ್ಯರಿಗೆ ಉತ್ತಮ ಆರೋಗ್ಯ ಹೊಂದಲು ಸಹಕಾರಿಯಾಗುತ್ತದೆ. ನಿರ್ದೇಶಕರ ಜೊತೆಗೆ ಆಸಕ್ತ ಸದಸ್ಯರು ಪ್ರಗತಿಪರ ಚಿಂತಕರನ್ನು ಭಾಗವಹಿಸಲು ಪ್ರೇರೇಪಿಸಬಹುದಾಗಿದೆ ಹಾಗೂ ಸೌಹಾರ್ದ ಸಹಕಾರಿಗಳು ಸ್ಥಳೀಯ ಸಹಕಾರ ಸಂಸ್ಥೆಗಳ ಹಾಗೂ ಉಳಿದ ಸ್ವಯಂ ಸೇವಾ ಸಂಸ್ಥೆಗಳಿಗೂ ಈ ಬಗ್ಗೆ ಮಾಹಿತಿ ನೀಡಿ ಅವರ ಸಹಕಾರವನ್ನೂ ಪಡೆದುಕೊಂಡು ಈ ಕಾರ್ಯಕ್ರಮವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಬಹುದಾಗಿದೆ.

ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಉಪಾಧ್ಯಕ್ಷರು, ಹಾಲಿ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವರವರ ಜೊತೆಯಲ್ಲಿ ಸಮಾನ ಮನಸ್ಕರೊಂದಿಗೆ ಕೂಡಿಕೊಂಡು ರಾಜೀವ ಸ್ನೇಹ ಬಳಗ ರಚಿಸಿ ಅದರ ಜೊತೆಗೆ ಕೆಲವು ಸಂಸ್ಥೆಗಳ ಸಹಯೋಗದೊಂದಿಗೆ ಮೈಸೂರಿನಲ್ಲಿ ಪ್ರಾರಂಭಿಸಿರುವ ಲಕ್ಷವೃಕ್ಷ ಆಂದೋಲನ ಹಾಗೂ ಹಸಿರು ಮೈಸೂರು ಅಭಿಯಾನವನ್ನು ಪ್ರಾರಂಭಿಸಿರುವುದು ಶ್ಲಾಘನೀಯ ಹಾಗೂ ಅದು ಅನುಕರಣೀಯವೂ ಆಗಿದೆ. ಶ್ರೀ ಹೆಚ್.ವಿ ರಾಜೀವರವರು ಪ್ರತಿ ವರ್ಷ ವಿವಿಧ ಮರಗಳ ದೀರ್ಘಾವಧಿ ಬಾಳಿಕೆ ಬರುವ 15000 ಸಸಿಗಳನ್ನು ವಿತರಿಸುವ ಹಾಗೂ ಅವುಗಳ ಪೋಷಣೆ ಮಾಡುವ ಜವಾಬ್ದಾರಿಯೊಂದಿಗೆ ವಿತರಣೆ ಮಾಡುವ ಕ್ರಮವಿಡುತ್ತಿರುವುದನ್ನು ಮತ್ತು ಅವರ ಕಾರ್ಯಯೋಜನೆಯನ್ನು ಅಧ್ಯಯನ ಮಾಡಿ ಸೌಹಾರ್ದ ಸಹಕಾರಿಗಳು ಮುಂದಿನ ಕ್ರಮವಿಡಬಹುದಾಗಿದೆ.

ಇದರಿಂದಾಗಿ ದೇಶದ ಸಹಕಾರ ಕ್ಷೇತ್ರದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ಹೊಸತನ್ನು ಪ್ರಾರಂಭಿಸಿ ಪರಿಸರ ಸಂರಕ್ಷಣೆ ಹಾಗೂ ದೇಶದ ವೃಕ್ಷಬಲವನ್ನು ಹೆಚ್ಚಿಸುವುದು ಹೆಮ್ಮೆಯ ವಿಷಯ. ಈ ನಿಟ್ಟಿನಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ಸ್ಪಂದಿಸುತ್ತಾರೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

## "ಗುಪ್ತ ಗಾಮಿನಿಯೋಃ ಋಣ"

ಶ್ರೇಣಿ 52



## ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ದೈವ ಸೃಷ್ಟಿಯಲ್ಲಿ ಉದಿಸಿ ಬಂದ 84 ಲಕ್ಷ ಜೀವ ಪ್ರಭೇದಗಳಲ್ಲಿ ಮಾನವನು ಅತ್ಯುನ್ನತ ಪರಮ ಜೀವಿಯಾಗಿರುವುದು ಪರಮಾತ್ಮನ ಕೃಪಾಕಟಾಕ್ಷ ವಿಶೇಷ. ಪರಮೋನ್ನತ ಸೃಷ್ಠಿಯಾದ ಮಾನವನು ತನ್ನ ಆರೋಗ್ಯವರ್ಧನೆಗೆ ಉತ್ತಮ ಆಹಾರ, ಜೀವನೋತ್ಕೃಷ್ಟತೆಗಾಗಿ ಆಧುನಿಕ ವಿಜ್ಞಾನ ಉತ್ಪನ್ನಗಳನ್ನು ಬಳಸುತ್ತಾನೆ. ತಾನು ತಿನ್ನುವ ಅನ್ನದ ಮೂಲವಾದ ಅಕ್ಕಿಯನ್ನು ಬೆಳೆಸಿದವರು ಯಾರು? ಆ ಭತ್ತವನ್ನು ಬೆಳೆಸಲು ಯಾವ್ಯಾವ ಗೊಬ್ಬರ ಹಾಕಲಾಯ್ತು? ಆ ಬೆಳೆಗೆ ನೀರು ಹಾಯಿಸಿದವರು ಯಾರು? ಎಂಬ ರಹಸ್ಯಗಳ ಮೂಲಕ್ಕೆ ಹೋದಾಗ ತನಗೆ ದೊರೆಯುವ ಪ್ರತಿಯೊಂದು ವಸ್ತುವೂ ಕೂಡಾ ಋಣದ ಆಧಾರದ ಮೇಲೆ ಎಂಬ ಅಂಶವನ್ನು ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಈ ಕೆಳಗಿನ ಪದ್ಯದಲ್ಲಿ ಋಣಗಳ ರಹಸ್ಯಗಳನ್ನು ಹೊರಗಡೆವಿದ್ದಾರೆ. ಪದ್ಯದ ಓಟ ಈ ಕೆಳಗಿನಂತಿದೆ.

ಭುಕ್ತಿ ವಿನಗೆಲ್ಲಿಯದೋ? ಭತ್ತ ತಾನೆಲ್ಲಯದೋ?
ಎತ್ತಲ್ಲಿನ ಗೊಬ್ಬರವೋ? ಎತ್ತಲಿನ ನೀರೋ?
ಭಕ್ತವಾರಾರ ದುಡಿತದಿನೊ ನಿನಗಾಗಹುದು
ಗುಪ್ತ ಗಾಮಿನಿಯೋಃ ಋಣ ॥ ಮುಂಕುತಿಮ್ಮ ॥

ಗಂಗಾವತಿಯಿಂದ ಬಂದ ಅಕ್ಕಿಯನ್ನು ಯಾರು ಬೆಳೆದರೋ? ಆ ಬೆಳೆಗೆ ಡ್ಯಾಮಿನ ಕಾಲುವೆಯ ನೀರನ್ನು ಬಿಟ್ಟವರು ಯಾರೋ ? ಬೆಳೆಗೆ ಗೊಬ್ಬರವನ್ನು ಯಾರು ಸುರಿದರೋ? ಸಿದ್ಧವಾದ ಅಕ್ಕಿಯಿಂದ ಅನ್ನವನ್ನು ಮಾಡಲು ಶ್ರಮಿಸಿದವರು ಯಾರೋ? ಸುಖಾಸೀನರಾಗಿ ಕುಳಿತು ಗಾಳಿ ಬೀಸುವ ಫ್ಯಾನನ್ನು ಯಾರು ತಯಾರು ಮಾಡಿದರೋ ? ಅಂತೆಯೇ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿದವರು ಯಾರೋ ?

ಹೀಗೆ ನಮ್ಮ ಜೀವನದ ಸರ್ವ ಲಭ್ಯತೆಗಳನ್ನು ಅವಲೋಕಿಸಲಾಗಿ ಇವುಗಳಲ್ಲವೋ ನಮಗೆ ಗುಪ್ತಗಾಮಿನಿಯ ರೂಪದಲ್ಲಿ ಕಾಣಿಸದಂತೆ ಒಂದೊದಗುತ್ತಿವೆ. ಆದ್ದರಿಂದ ಸೌಲಭ್ಯಗಳನ್ನು ಸ್ವೀಕರಿಸಿದ ನಾವುಗಳಿಗೆ ಸಹ ಸಮಾಜದ ಸಹೋದರ ಆತ್ಮಗಳಿಗೆ ನಮ್ಮ ನಮ್ಮ ಕೈಲಾಗುವ ಸೇವೆಗಳನ್ನು ಸಲ್ಲಿಸುವ ಮೂಲಕ ಇತರರ ಶುಭವನ್ನು ಕೋರುತ್ತಾ ಅಷ್ಟೊಂದು ಸೌಲಭ್ಯಗಳನ್ನು ದೊರಕಿಸಿದ ಸರ್ವೇಶ್ವರ ಭಗವಂತನಿಗೆ ಋಣಿಯಾಗರೋಣವೆನ್ನುವುದೇ ಈ ಪದ್ಯದ ಸಾರಾಂಶವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 14,142 ಆಗಿರುತ್ತದೆ. ಇವುಗಳ ಪೈಕಿ 6,233 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,873.

**ಜುಲೈ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 164, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 36, ಮಧ್ಯಸ್ಥದಾರರಿಗೆ ವಹಿಸಿದ ಪ್ರಕರಣಗಳು 27.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,462 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 226 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,066 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 998 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 91 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 430 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಜುಲೈ ತಿಂಗಳಿನಲ್ಲಿ 15 ಪ್ರಕರಣಗಳು ದಾಖಲಾಗಿರುತ್ತವೆ.

# ಸೌಹಾರ್ದ ಸಹಕಾರಿಗಳ ಚುನಾವಣೆಯನ್ನು ಡಿಸೆಂಬರ್ 2020ರ ವರೆಗೆ ಮುಂದೂಡುವ ಬಗ್ಗೆ ಹಾಗೂ ಆಡಳಿತ ಮಂಡಲಿಗಳ ಅವಧಿ ಮುಕ್ತಾಯಗೊಂಡಿರುವ / ಮುಕ್ತಾಯಗೊಳ್ಳಲಿರುವ ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಯನ್ನು ನೇಮಿಸುವ ಕುರಿತು ಸರ್ಕಾರದ ಆದೇಶ

**ಕರ್ನಾಟಕ ಸರ್ಕಾರದ ನಡವಳಿಗಳು**

| | |
|---|---|
| **ವಿಷಯ:** | ಸೌಹಾರ್ದ ಸಹಕಾರಿಗಳ ಚುನಾವಣೆಯನ್ನು ಡಿಸೆಂಬರ್ 2020ರ ವರೆಗೆ ಮುಂದೂಡುವ ಬಗ್ಗೆ ಹಾಗೂ ಆಡಳಿತ ಮಂಡಳಿಗಳ ಅವಧಿ ಮುಕ್ತಾಯಗೊಂಡಿರುವ/ ಮುಕ್ತಾಯಗೊಳ್ಳಲಿರುವ ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸುವ ಬಗ್ಗೆ. |
| **ಓದಲಾಗಿದೆ:** | ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/279/2019-20, ದಿನಾಂಕ:13.07.2020. |

****

**ಪ್ರಸ್ತಾವನೆ:**

ಮೇಲೆ ಓದಲಾದ (2)ರ ನಿಬಂಧಕರ ಪ್ರಸ್ತಾವನೆಯಲ್ಲಿ ರಾಜ್ಯದಲ್ಲಿ ಕೊರೋನಾ ವೈರಸ್ (ಕೋವಿಡ್-19) ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ, ಎಲ್ಲಾ ಸಹಕಾರ ಸಂಘಗಳು/ಸಹಕಾರ ಬ್ಯಾಂಕುಗಳ (ಪ್ರಾಥಮಿಕ, ಮಾಧ್ಯಮಿಕ/ಒಕ್ಕೂಟಗಳ (ಫೆಡರಲ್ ಸಂಸ್ಥೆ) ಮತ್ತು ಅಪೆಕ್ಸ್ ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ) ಚುನಾವಣೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಡಿಸೆಂಬರ್ 2020ರ ಅಂತ್ಯದವರೆಗೆ ಮುಂದೂಡಲು ಹಾಗೂ ಈಗಾಗಲೇ ಚುನಾವಣಾ ವೇಳಾ ಪಟ್ಟಿ (Calender of events) ಹೊರಡಿಸಿ ಚುನಾವಣೆ ಪ್ರಕ್ರಿಯೆ ಬಾಕಿ ಇದ್ದಲ್ಲಿ ಅದನ್ನು ತಕ್ಷಣದಿಂದ ರದ್ದುಪಡಿಸುವುದು ಮತ್ತು ಈಗಾಗಲೇ ಆಡಳಿತ ಮಂಡಳಿ ಅವಧಿ ಮುಕ್ತಾಯಗೊಂಡಿರುವ/ಮುಕ್ತಾಯಗೊಳ್ಳಲಿರುವ ಸಹಕಾರ ಸಂಸ್ಥೆಗಳ/ ಸೌಹಾರ್ದ ಸಹಕಾರಿಗಳಿಗೆ ಆಡಳಿತಾಧಿಕಾರಿ/ವಿಶೇಷಾಧಿಕಾರಿಗಳನ್ನು ನೇಮಿಸಲು ಸಂಬಂಧಪಟ್ಟ ಸಕ್ಷಮ ನಿಬಂಧಕರುಗಳು (Jurisdictional Registrars) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 28(ಎ)(5) ರೀತ್ಯಾ ಆಡಳಿತಾಧಿಕಾರಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 38(ಎ)(1) ರೀತ್ಯಾ ಕರ್ನಾಟಕ ಸೌಹಾರ್ದ ಸಂಯುಕ್ತ ಸಹಕಾರಿಯು ವಿಶೇಷಾಧಿಕಾರಿ ನೇಮಕಾತಿಗೆ ಕ್ರಮವಿಡಲು ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ ಸಿಒ 32 ಸಿಎಲ್‌ಎಂ 2020, ಬೆಂಗಳೂರು, ದಿನಾಂಕ: 14.07.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸೌಹಾರ್ದ ಸಹಕಾರಿಗಳ ಚುನಾವಣೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಆದೇಶಿಸಿದೆ.

..2

-2-

1. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1977ರ ಪ್ರಕರಣ 70ರ ಅವಕಾಶದಂತೆ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಪ್ರಕರಣ 26ಕ್ಕೆ ವಿನಾಯಿತಿ ನೀಡಿ ಎಲ್ಲಾ ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಡಿಸೆಂಬರ್ 2020ರ ಅಂತ್ಯದವರೆವಿಗೆ ಮುಂದೂಡಲಾಗಿದೆ.
2. ಈಗಾಗಲೇ ಸೌಹಾರ್ದ ಸಹಕಾರಿಗಳ ಚುನಾವಣಾ ವೇಳಾ ಪಟ್ಟಿ (Calender of events) ಹೊರಡಿಸಿ, ಚುನಾವಣೆ ಪ್ರಕ್ರಿಯೆ ಜಾರಿಯಲ್ಲಿದ್ದಲ್ಲಿ ಅದನ್ನು ಸಹ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.
3. ಆಡಳಿತ ಮಂಡಳಿ ಅವಧಿ ಮುಕ್ತಾಯಗೊಂಡಿರುವ/ಮುಕ್ತಾಯಗೊಳ್ಳಲಿರುವ ಸೌಹಾರ್ದ ಸಹಕಾರಿಗಳಿಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವಾದ ಕರ್ನಾಟಕ ಸೌಹಾರ್ದ ಸಂಯುಕ್ತ ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 38(ಎ)(1) ರೀತ್ಯಾ ವಿಶೇಷಾಧಿಕಾರಿಯ ನೇಮಕಾತಿಗೆ ಕ್ರಮವಿಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಎಂ. ಆಶಾ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

## ಚುನಾವಣೆ ಮುಂದೂಡಿಕೆ : ರಾಜ್ಯದ ಕೆಲವು ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳ ನೇಮಕ

ರಾಜ್ಯದಲ್ಲಿ ಕೊರೋನಾ ಹೆಮ್ಮಾರಿಯ ಕುಣಿತದಿಂದಾಗಿ ನಿರ್ದೇಶಕ ಮಂಡಳಿಯ ಅವಧಿ ಪೂರ್ಣಗೊಂಡಿರುವ ಸಹಕಾರಿ ಸಂಸ್ಥೆಗಳ ಚುನಾವಣೆಗಳನ್ನು ರಾಜ್ಯ ಸರಕಾರ ಮುಂದೆ ಹಾಕಿದೆ. ಇದೇ ರೀತಿಯಲ್ಲಿ ರಾಜ್ಯದ ಕೆಲವು ಸೌಹಾರ್ದ ಸಹಕಾರಿಗಳಿಗೆ ನಡೆಯಬೇಕಿದ್ದ ಚುನಾವಣೆಗಳನ್ನು ಸಹ ರಾಜ್ಯ ಸರಕಾರ ದಿನಾಂಕ 14.07.2020 ರಂದು ಪ್ರತ್ಯೇಕ ಆದೇಶವೊಂದನ್ನು ಹೊರಡಿಸಿ ಚುನಾವಣೆಗಳನ್ನು ಡಿಸೆಂಬರ 2020 ರ ವರೆಗೆ ಮುಂದೂಡಿದೆ.

ರಾಜ್ಯದಲ್ಲಿ ಈಗಾಗಲೇ 31 ಸೌಹಾರ್ದ ಸಹಕಾರಿಗಳಿಗೆ 31 ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳಿದ್ದು ಜುಲೈ ಅಂತ್ಯದ ವರೆಗೆ 152 ಸೌಹಾರ್ದ ಸಹಕಾರಿಗಳಿಗೆ ಹಾಗೂ ಡಿಸೆಂಬರ ಅಂತ್ಯದ ವರೆಗೆ 177 ಸೌಹಾರ್ದ ಸಹಕಾರಿಗಳಿಗೆ ಒಟ್ಟಾರೆ 360 ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳ ನೇಮಕವಾಗುತ್ತದೆ. ಇನ್ನೂ ಕೆಲವು ಈ ಪಟ್ಟಿಗೆ ಸೇರುವ ಸಾಧ್ಯತೆ ಇದೆ.

ಈ ಸಂದರ್ಭಗಳಲ್ಲಿ ಸೌಹಾರ್ದ ಸಹಕಾರಿಗಳ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ತೊಂದರೆ ಉಂಟಾಗದಂತೆ ವಿಶೇಷಾಧಿಕಾರಿಗಳು ಕಾರ್ಯನಿರ್ವಹಿಸುವಂತೆ ಸಂಯುಕ್ತ ಸಹಕಾರಿಯು ಮಾರ್ಗದರ್ಶಿ ಸುತ್ತೋಲೆಯನ್ನು ನೀಡಲಾಗಿದೆ. ಸಾಲ ವಸೂಲಾತಿ ಸಾಲ ನೀಡಿಕೆ ದೈನಂದಿನ ಕಾರ್ಯಚಟುವಟಿಕೆಗಳ ನಿರ್ವಹಣೆಯನ್ನು ಯಾವುದೇ ತೊಂದರೆಯಾಗದಂತೆ ಆಯಾ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಅಭಿಪ್ರಾಯವನ್ನು ಪಡೆದು ಸಂಯುಕ್ತ ಸಹಕಾರಿಯು ನೇಮಿಸಿರುವ ವಿಶೇಷಾಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ.

ಈ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳ ಸದಸ್ಯರು, ಹಿಂದಿನ ಆಡಳಿತ ಮಂಡಲಿ ಸದಸ್ಯರು ಹಾಗೂ ಸಹಕಾರಿಯ ಸಿಬ್ಬಂದಿಯವರು ಸಂಯುಕ್ತ ಸಹಕಾರಿಯಿಂದ ನೇಮಕವಾಗುವ ವಿಶೇಷಾಧಿಕಾರಿಗಳ ಜೊತೆಗೆ ಅವರ ಕಾರ್ಯಗಳಲ್ಲಿ ಸಂಪೂರ್ಣ ಸಹಕಾರ ನೀಡುವ ಅಗತ್ಯ ಇದೆ. ಸಂವಿಧಾನಿಕ ಬಿಕ್ಕಟ್ಟಿನ ಸಂದರ್ಭವನ್ನು ಅರ್ಥೈಸಿಕೊಂಡು ಸಹಕಾರಿಯ ಅಭಿವೃದ್ಧಿಗೆ ತೊಂದರೆಯಾಗದಂತೆ ಸಹಕರಿಸುವಿರಾಗಿ ಸಂಯುಕ್ತ ಸಹಕಾರಿಯು ಆಶಿಸುತ್ತದೆ.

– ವ್ಯವಸ್ಥಾಪಕ ನಿರ್ದೇಶಕರು

## ಸಂದರ್ಶನ

# ಹೆಚ್.ವಿ. ರಾಜೀವ ಸ್ನೇಹ ಬಳಗದ ನೇತೃತ್ವದಲ್ಲಿ "ಲಕ್ಷವೃಕ್ಷ ಆಂದೋಲನ" ದ ಮೂಲಕ "ಹಸಿರು ಮೈಸೂರು" ಅಭಿಯಾನ

### ಶಿಕ್ಷಣ ಹಾಗೂ ಪರಿಸರ ಪ್ರೇಮಿ, ಉದ್ಯಮಿ, ಸಹಕಾರಿ ಹಾಗೂ ಹವ್ಯಾಸಿ ರಾಜಕಾರಣಿ – ಶ್ರೀ ಹೆಚ್.ವಿ. ರಾಜೀವ್ ನೇತೃತ್ವದಲ್ಲಿ "ಲಕ್ಷವೃಕ್ಷ ಆಂದೋಲನ"



**( ಸಂಯುಕ್ತ ಸಹಕಾರಿಯ ನಿರ್ದೇಶಕ, ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ, ಮೈಸೂರಿನ ಜ್ಞಾನಗಂಗಾ ಗೃಹನಿರ್ಮಾಣ ಸಹಕಾರಿ ಸಂಘದ ಅಧ್ಯಕ್ಷ ಶ್ರೀ ಹೆಚ್.ವಿ.ರಾಜೀವ ಇವರು ಮೈಸೂರಿನಲ್ಲಿ ಲಕ್ಷ ವೃಕ್ಷ ಅಭಿಯಾನದ ಮೂಲಕ ಹಸಿರು ಮೈಸೂರು ಆಂದೋಲನವನ್ನು ಹಮ್ಮಿಕೊಂಡು ಮೈಸೂರನ್ನು ಹೆಚ್ಚು ಹಸಿರು ನಗರವನ್ನಾಗಿ ಕಾಣಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಸ್ವಾಭಿಮಾನಿ ಸಹಕಾರಿಯು ಶ್ರೀಯುತರನ್ನು ಸಂಪರ್ಕಿಸಿ ಸಂದರ್ಶನವನ್ನು ಮಾಡಿದೆ. ಅವರ ಈ ಅಭಿಯಾನದ ಉದ್ದೇಶ, ಕಾರ್ಯ ಯೋಜನೆಯನ್ನು ರಾಜ್ಯದ ಇತರ ಸಹಕಾರ ಸಂಸ್ಥೆಗಳು ವಿಶೇಷವಾಗಿ ಸೌಹಾರ್ದ ಸಹಕಾರಿಗಳು ಅಳವಡಿಸಿಕೊಳ್ಳಲು ಸಾಧ್ಯವಾಗಬಹುದೆಂಬ ಉದ್ದೇಶದಿಂದ ಸಂದರ್ಶನವನ್ನು ಪ್ರಕಟಿಸಿದೆ.)**

**ಸಂಪಾದಕ :** ಸರ್ ನಮಸ್ಕಾರ. "ಹಸಿರು ಮೈಸೂರು" "ಲಕ್ಷ ವೃಕ್ಷ" ಅಭಿಯಾನವನ್ನು ಹಮ್ಮಿಕೊಂಡು ಮೈಸೂರನ್ನು ಇನ್ನೂ ಹೆಚ್ಚು ಹಸಿರು ವಲಯವನ್ನಾಗಿ ಮಾಡಬೇಕೆಂಬ ತಮ್ಮ ಈ ಅಭಿಯಾನದ ತಮಗೆ ಹಾಗೂ ತಮ್ಮೆಲ್ಲ ಸ್ನೇಹಿತರಿಗೆ ತಮ್ಮ ಜೊತೆಗೆ ಕೈ ಜೋಡಿಸುತ್ತಿರುವ ಸಂಸ್ಥೆಗಳಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸಂತೋಷವನ್ನು ತಿಳಿಸುತ್ತ ಸ್ವಾಭಿಮಾನಿ ಸಹಕಾರಿ ಪತ್ರಿಕೆಯ ಸಂಪಾದಕ ಮಂಡಳಿಯ ಪರವಾಗಿ ಅಭಿನಂದನೆಗಳು.

**ಹೆಚ್.ವಿ.ರಾಜೀವ :** ಸ್ವಾಭಿಮಾನಿ ಸಹಕಾರಿ ಪತ್ರಿಕೆಯವರು ಈ ಬಗ್ಗೆ ಆಸಕ್ತಿ ತೋರಿರುವುದಕ್ಕೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಗೆ ಹಾಗೂ ಸ್ವಾಭಿಮಾನಿ ಸಹಕಾರ ಪತ್ರಿಕೆಯ ಸಂಪಾದಕ ಮಂಡಳಿಗೆ ಧನ್ಯವಾದಗಳು.

**ಸಂಪಾದಕ :** ಸರ್ ನಿಮಗೆ ಈ ಅಭಿಯಾನವನ್ನು ಹಮ್ಮಿಕೊಳ್ಳುವ ಉದ್ದೇಶ ಮತ್ತು ಪ್ರೇರಣೆ ಹೇಗೆ ಪ್ರಾರಂಭವಾಯಿತು?

**ಹೆಚ್.ವಿ.ರಾಜೀವ :** ಮೈಸೂರು ನಗರ ಮಹಾರಾಜರ ಕಾಲದಿಂದಲೂ ಪರಿಸರ ಸಂರಕ್ಷಣೆಯನ್ನು ಹೊಂದಿದೆ. ಮೈಸೂರು ನಗರದಲ್ಲಿರುವ ವೃಕ್ಷಗಳು ಮೈಸೂರಿನ ಮಹಾರಾಜರು ವಿದೇಶದಿಂದ ಸಹ ಅನೇಕ ವಿಧವಾದ ತಳಿಗಳನ್ನು ತರಿಸಿ ನೆಟ್ಟಿ ಬೆಳೆಸಿದ್ದಾರೆ. ವಿದೇಶಗಳಲ್ಲಿ ವಿಶೇಷವಾಗಿ ಜರ್ಮನಿಯಂತಹ ದೇಶಗಳಲ್ಲಿ ಪರಿಸರದ ಬಗ್ಗೆ ಅಲ್ಲಿನ ನಾಗರಿಕರಿಗೆ ಹೆಚ್ಚಿನ ಪ್ರಜ್ಞೆ ಇದ್ದು ಪ್ರವಾಸಿಗರಿಗೆ ಮೊದಲು ಈ ಪರಿಸರದ ಬಗ್ಗೆ ವಿಶೇಷವಾಗಿ ಹೆಚ್ಚು ವೃಕ್ಷಗಳನ್ನು ನೆಟ್ಟು ಪೋಷಿಸುವ ಬಗ್ಗೆ ಹೆಚ್ಚಿನ ಜ್ಞಾನವನ್ನು ನೀಡುವ ಕೆಲಸ ಮಾಡುತ್ತಾರೆ. ಹಸಿರು ಇದ್ದರೆ ಜೀವನ ಉತ್ತಮವಾಗಿರುತ್ತದೆ ಎಂಬ ಬಗ್ಗೆ ಹೆಚ್ಚಿನ ಗಮನವನ್ನು ನೀಡಲಾಗುತ್ತದೆ. ಮೈಸೂರು ಐತಿಹಾಸಿಕ ನಗರ. ಶತಮಾನದಿಂದಲೂ ಪ್ರವಾಸಿಗರ ಆಕರ್ಷಣೆ ಇರುವ ಈ ನಗರವನ್ನು ಇನ್ನೂ ಹೆಚ್ಚು ಹಸಿರು ಮಾಡುವ ಉದ್ದೇಶವನ್ನು ರಾಜೀವ ಬಳಗ ಯೋಚನೆ ಮಾಡಿ ಈ ಯೋಜನೆಯನ್ನು ಹಮ್ಮಿಕೊಂಡಿದೆ. ಇದೇ ನಮ್ಮ ಹೆಚ್ಚಿನ ಪ್ರೇರಣೆ. ನಮ್ಮ ಬಳಗ ನೇತೃತ್ವದಲ್ಲಿ ಮೈಸೂರಿನಲ್ಲಿ ಹೆಚ್ಚು ಸಸಿಗಳನ್ನು ನೆಡುವ ಕಾರ್ಯಕ್ರಮ ಮಾಡಿ ಮರಗಳನ್ನು ಬೆಳೆಸುವ ಕಾರ್ಯ ಮಾಡುವ ಉದ್ದೇಶ ಈ ಬಳಗ ಹೊಂದಿದೆ.

**ಸಂಪಾದಕ :** ಈ ಅಭಿಯಾನದಲ್ಲಿ ತಮ್ಮ ಜೊತೆಗೆ ಕೈಜೋಡಿಸುತ್ತಿರುವವರು ಯಾರು ಎಂಬುದನ್ನು ತಿಳಿಸುತ್ತಿರಾ?

**ಹೆಚ್.ವಿ.ರಾಜೀವ :** ನಮ್ಮ ದೇಶದ ಪ್ರಧಾನ ಮಂತ್ರಿಯವರಾದ ಶ್ರೀ ನರೇಂದ್ರಮೋದಿಯವರು ಸ್ವಚ್ಛ ಭಾರತ ಅಭಿಯಾನದ ಹಮ್ಮಿಕೊಳ್ಳಲು ಕರೆ ನೀಡಿದಾಗ ಮೈಸೂರಿನ ಸಮಾನ ಮನಸ್ಕ ಗೆಳೆಯರು ಕೂಡಿ ರಾಜೀವ ಸ್ನೇಹ ಬಳಗವನ್ನು ರಚಿಸಿಕೊಂಡು ಮೈಸೂರಿನಾದ್ಯಂತ ಪ್ರತಿ ಭಾನುವಾರ ಒಂದೊಂದು ಪ್ರದೇಶವನ್ನು ಆಯ್ಕೆ ಮಾಡಿ ಸ್ವಚ್ಛತಾ ಕಾರ್ಯಕ್ರಮವನ್ನು ಮಾಡುವುದರ





ಜೊತೆಗೆ ಜನಸಾಮಾನ್ಯರಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಯಶಸ್ವಿಯಾಗಿ ನಡೆಸಲಾಯಿತು. ಈ ಬಳಗದಲ್ಲಿ ಸುಮಾರು 200 ಕ್ಕೂ ಹೆಚ್ಚು ಸ್ನೇಹಿತರು ಕಾರ್ಯನಿರ್ವಹಿಸಿದರು. 342 ಸ್ವಚ್ಛ ಮೈಸೂರು ಕಾರ್ಯಕ್ರಮವನ್ನು ಈ ಬಳಗ ಹಮ್ಮಿಕೊಂಡಿತ್ತು. ರಾಷ್ಟ್ರಮಟ್ಟದಲ್ಲಿ ಈ ಬಳಗದ ಕಾರ್ಯವನ್ನು ಗುರುತಿಸಲಾಯಿತು. ಈ ಬಳಗದವರು ಈ ಅಭಿಯಾನವನ್ನು ಹಮ್ಮಿಕೊಳ್ಳಲು ಆಸಕ್ತಿ ತೋರಿಸಿದನಂತರ ಈ ಕಾರ್ಯದಲ್ಲಿ ಧರ್ಮಸ್ಥಳ ವೀರೇಂದ್ರ ಹೆಗ್ಗಡೆಯವರ ಆಸಕ್ತಿಯಿಂದಾಗಿ ಅವರ ಸಂಸ್ಥೆ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆ ಸಹಕಾರ ಇದೆ. ಜೆ.ಎಸ್.ಎಸ್. ಸ್ವಾಮಿಜಿಯವರ ಆಸಕ್ತಿ ಅವರ ಶುಭ ಹಾರೈಕೆ ಹಾಗೂ ಸಹಕಾರ, ಮೈಸೂರು ಪತ್ರಕರ್ತರ ಸಂಘ, ಮೈಸೂರು ನಗರದ ಪತಂಜಲಿ ಸಂಸ್ಥೆ ಹಾಗು ಇನ್ನೂ ಅನೇಕ ಸಮಾನ ಮನಸ್ಕ ಸ್ನೇಹಿತರು ಈ ಅಭಿಯಾನದಲ್ಲಿ ಸಹಕಾರ ನೀಡುತ್ತಿದ್ದಾರೆ ಹಾಗೂ ಭಾಗವಹಿಸುತ್ತಿದ್ದಾರೆ ಲಕ್ಷ ವೃಕ್ಷ ಯೋಜನೆಯನ್ನು ಖ್ಯಾತ ವಿಚಾರವಾದಿ ಧಾರ್ಮಿಕತಾವಾದಿ ಶ್ರೀ ಜಗ್ಗಿ ವಾಸುದೇವ, ಡಾ ವೀರೇಂದ್ರ ಹೆಗ್ಗಡೆಯವರು, ಜಗದ್ಗುರು ಸುತ್ತೂರು ಮಠ ಸ್ವಾಮೀಜಿ ಹಾಗು ಅನೇಕ ಗಣ್ಯರು ಭಾಗವಹಿಸಿ ಶುಭಹಾರೈಸಿದ್ದಾರೆ.

**ಸಂಪಾದಕ :** ಈ ಅಭಿಯಾನದ ಕಾರ್ಯಚಟುವಟಿಕೆಗಳ ರೂಪುರೇಷೆಗಳ ಬಗ್ಗೆ ಮಾಹಿತಿ ನೀಡುವಿರಾ.?

**ಹೆಚ್.ವಿ.ರಾಜೀವ :** ಈ ಯೋಜನೆಯಡಿಯಲ್ಲಿ ಅತ್ತಿ, ಆಲ, ಅರಳೆ, ಹೊಂಗೆ, ಬೇವು, ಹಲಸು, ಬಿಲ್ವಪತ್ರೆ, ಶಿವನಿ ಹೀಗೆ ವಿವಿಧ ವರ್ಗದ ಹಲವಾರು ವರ್ಷಗಳ ಕಾಲ ಬಾಳಿಕೆ ಬರುವ ಗಿಡಗಳನ್ನು 1 ಲಕ್ಷ ವೃಕ್ಷ ಬೆಳೆಸುವ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ. ಕಳೆದ ವರ್ಷ 15000 ಗಿಡಗಳನ್ನು ವಿತರಿಸಲಾಗಿದೆ. ಇದೇ ಯೋಜನೆಯಡಿಯಲ್ಲಿ ಒಂದು ಸಾವಿರ ಜನ ಒಂದು ಸಾವಿರ ಗಿಡ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು ಇದರಲ್ಲಿ 1700 ಜನರು ಭಾಗವಹಿಸಿ ಕಾರ್ಯಕ್ರಮನ್ನು ಯಶಸ್ವಿಯಾಗಿಸುವಲ್ಲಿ ಸಹಕರಿಸಿದರು. ಪ್ರಸಕ್ತ ಸಾಲಿಗೆ 15000 ವಿವಿಧ ರೀತಿಯ ಮರಗಳ ಸಸಿಗಳನ್ನು ವಿತರಿಸಲಾಗಿದೆ. ಈ ಬಾರಿ ಮೈಸೂರಿನವರಲ್ಲದೆ ಗ್ರಾಮಾಂತರ ಪ್ರದೇಶಗಳಿಂದ ರೈತರು ಈ ಸಸಿಗಳಿಗಾಗಿ ಬೇಡಿಕೆ ಸಲ್ಲಿಸಿರುವುದನ್ನು ಗಮನಿಸಿ ರೈತರಿಗೆ ಉಚಿತವಾಗಿ ಸಸಿಗಳನ್ನು ವಿತರಿಸುವ ವ್ಯವಸ್ಥೆ ಮಾಡಲಾಗುತ್ತಿದೆ.

**ಸಂಪಾದಕ :** ಈ ಯೋಜನೆಯ ನಿರ್ವಹಣೆಗೆ ತಗಲಬಹುದಾದ ಅಂದಾಜು ವೆಚ್ಚ ಹಾಗೂ ಈ ಯೋಜನೆಯ ಅವಧಿ ವಿವರಗಳ ಬಗ್ಗೆ ವಿವರಿಸಿ?

**ಹೆಚ್.ವಿ.ರಾಜೀವ :** ಈ ಯೋಜನೆ ಅಂದಾಜು 7 ವರ್ಷಗಳ ಅವಧಿಯದ್ದಾಗಿದೆ. ಈ ಅವಧಿಯಲ್ಲಿ ಅಂದಾಜು 1 ರಿಂದ 1.5 ಕೋಟಿ ರೂಗಳ ವೆಚ್ಚವಾಗಬಹುದು ಎಂದು ಅಂದಾಜು ಇದೆ.

**ಸಂಪಾದಕ :** ನಿಮ್ಮ ಈ ವೃಕ್ಷ ಲಕ್ಷ ಆಂದೋಲನ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಹಕಾರಿ ಕಾರ್ಯಕರ್ತರುಗಳಿಗೆ ನಿಮ್ಮ ಸಂದೇಶವೇನು ?

**ಹೆಚ್.ವಿ.ರಾಜೀವ :** ಸಹಕಾರಿ ಕ್ಷೇತ್ರ ಸಾಮಾನ್ಯ ಜನರ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ. ಸಮಾಜದ ಕಟ್ಟ ಕಡೆಯ ಕನಿಷ್ಠ ಜನರನ್ನು ತಲುಪುವ ಅವಕಾಶ ಹೊಂದಿದೆ. ಸಮಾಜದ ಎಲ್ಲ ವರ್ಗಗಳನ್ನು ಎಲ್ಲ ಆಯಾಮಗಳ ಮೂಲಕ ತಲುಪುವ ಪ್ರಯತ್ನ ನಡೆದಿದೆ. ಸಾಕಷ್ಟು ಸಾಧನೆ ಆಗಿದೆ. ಸಾಧಿಸಬೇಕಾದುದು ಇನ್ನೂ ಇದೆ. ನನ್ನ ದೃಷ್ಟಿಯಲ್ಲಿ ಇದೊಂದು ನಿರಂತರವಾಗಿ ನಡೆಯುತ್ತಿರುವ ಸಹಕಾರಿ ಆಂದೋಲನ. ಸಹಕಾರಿ ಸಂಸ್ಥೆಗಳು ಆರ್ಥಿಕ ಚಟುವಟಿಕೆಗಳ ಕೇಂದ್ರವಾಗಿವೆ. ನಮ್ಮ ದೇಶದ ಜನರ ಜೀವನ ಪದ್ಧತಿಯಾಗಿದೆ.

ಈ ಕ್ಷೇತ್ರದ ಮೂಲಕ ಇಂತಹ ಅಭಿಯಾನವನ್ನು ಹಮ್ಮಿಕೊಳ್ಳಬಹುದಾಗಿದೆ. ಸದಸ್ಯರಲ್ಲಿ ಪರಿಸರ ಪ್ರಜ್ಞೆ, ವೃಕ್ಷ ನೆಡುವ ಆಂದೋಲನವನ್ನು ಹಮ್ಮಿಕೊಂಡಲ್ಲಿ ಪರಿಸರದಲ್ಲಿ ಹಸಿರು ಹೆಚ್ಚುತ್ತದೆ. ಆರೋಗ್ಯ ಅಭಿವೃದ್ಧಿ ಆಗುತ್ತದೆ. ವಿವಿಧ ರೀತಿಯ ಕೈಗಾರಿಕೆಗಳು ಹುಟ್ಟಿಕೊಳ್ಳುತ್ತವೆ. ಉದ್ಯೋಗಾವಕಾಶಗಳು ಹೆಚ್ಚುತ್ತವೆ. ಸಮಾಜದ ಆರೋಗ್ಯ ಹೆಚ್ಚುತ್ತದೆ. ಇವೆಲ್ಲವುಗಳನ್ನು ಸಹಕಾರಿ ಕ್ಷೇತ್ರದಲ್ಲಿ ಮಾಡಬಹುದಾಗಿದೆ. ವಿಶೇಷವಾಗಿ ಯುವಕರು ಸಮಾನ ಮನಸ್ಕ ವೇದಿಕೆಯನ್ನು ರಚಿಸಿಕೊಂಡು ಮತ್ತು ಸಹಕಾರ ಕ್ಷೇತ್ರದ ಮೂಲಕವೂ ಇಂತಹ ಅಭಿಯಾನಗಳನ್ನು ಹಮ್ಮಿಕೊಳ್ಳಬಹುದಾಗಿದೆ ಎಲ್ಲ ಸಹಕಾರಿ ಸಂಸ್ಥೆಗಳು ಸಹ ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ವಿನಂತಿಸುತ್ತೇನೆ. ಈ ಬಗ್ಗೆ ವಿವರಗಳು ಅಗತ್ಯವೆನಿಸಿದರೆ ನನ್ನನ್ನು ಸಂಪರ್ಕಿಸಬಹುದಾಗಿದೆ.

**ಸಂಪಾದಕ :** ಲಕ್ಷ ವೃಕ್ಷ ಅಭಿಯಾನದ ಮೂಲಕ ಹಸಿರು ಮೈಸೂರು ಆಂದೋಲನದ ಹರಿಕಾರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಹೆಚ್.ವಿ.ರಾಜೀವರವರಿಗೆ ಸ್ವಾಭಿಮಾನಿ ಸಹಕಾರಿ ಪತ್ರಿಕೆಗೆ ಈ ಎಲ್ಲ ಮಾಹಿತಿಗಳನ್ನು ಹಂಚಿಕೊಂಡದ್ದಕ್ಕಾಗಿ ಧನ್ಯವಾದಗಳು. ಈ ಯೋಜನೆಯು ಯಶಸ್ವಿಕಾರ್ಯಗತವಾಗಲಿ ಎಂದು ರಾಜ್ಯದ ಸಹಕಾರಿಗಳು ಹಾಗೂ ಸಂಯುಕ್ತ ಸಹಕಾರಿಯು ಆಶಿಸುತ್ತದೆ.



# ಸಂಯುಕ್ತ ಸಹಕಾರಿಯ ಆನ್ ಲೈನ್ ತರಬೇತಿ ಕಾರ್ಯಕ್ರಮಗಳು

### ಕಲಬುರಗಿ ವಿಭಾಗ

## ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆಯ ಕುರಿತು ತರಬೇತಿ ಕಾರ್ಯಕ್ರಮ

**ಬೀದರ** : ದಿನಾಂಕ 10.07.2020 ರಂದು ಕಲಬುರಗಿ ಪ್ರಾಂತೀಯ ಕಛೇರಿಯ ವತಿಯಿಂದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರುಗಳಿಗೆ "ಆಡಳಿತ ಮಂಡಲಿ ಸದಸ್ಯರ ಜವಾಬ್ದಾರಿ ಮತ್ತು ಕರ್ತವ್ಯಗಳು" ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಇವರು ಈ ತರಬೇತಿಯ ಅಧ್ಯಕ್ಷತೆಯನ್ನು ವಹಿಸಿ ತರಬೇತಿಯ ವಿಷಯದ ಕುರಿತು ಉಪನ್ಯಾಸ ನೀಡಿದರು. ಪ್ರಾಂತೀಯ ವ್ಯವಸ್ಥಾಪಕರ ಉಪಸ್ಥಿತಿಯಲ್ಲಿ ತರಬೇತಿಯನ್ನು ಏರ್ಪಡಿಸಲಾಗಿತ್ತು. ಈ ಅನ್‌ಲೈನ್ ತರಬೇತಿಯ ಕಾರ್ಯಕ್ರಮದಲ್ಲಿ ಒಟ್ಟು 75 ಪ್ರತಿನಿಧಿಗಳು ಭಾಗವಹಿಸಿದ್ದರು.

**ಯಾದಗಿರಿ** : ದಿನಾಂಕ 14.07.2020 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷಕರಿಗೆ ಹಾಗೂ ಆಡಳಿತ ಮಂಡಳಿಯ ನಿರ್ದೇಶಕರುಗಳಿಗಾಗಿ "ಆಡಳಿತ ಮಂಡಳಿಯ ಸದಸ್ಯರುಗಳ ಕರ್ತವ್ಯ ಮತ್ತು ಜವಾಬ್ದಾರಿ"ಯ ಕುರಿತು ಆನ್ ಲೈನ್ ತರಬೇತಿಯನ್ನು ನಡೆಸಲಾಯಿತು.

ತರಬೇತಿ ಕಾರ್ಯಗಾರದ ಆನ್‌ಲೈನ್ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿ ಇಂದು ವಿಶ್ವಕ್ಕೆ ಕೋವಿಡ್–19 ಮಹಾಮಾರಿಯಿಂದ ಎಲ್ಲಾ ಕಾರ್ಯಚಟುವಟಿಕೆಗಳು ಸ್ತಬ್ಧವಾಗಿವೆ, ಇದರ ಪ್ರಭಾವ ಸಹಕಾರಿಯ ಕಾರ್ಯಗಳ ಮೇಲೆ ಬೀರಿದೆ ಎಂದು ತಿಳಿಸಿದರು. ಬದಲಾದ ಪರಿಸ್ಥಿತಿಯಲ್ಲಿ ಸಹಕಾರಿಗಳಾದ ನಾವು ಆನ್‌ಲೈನ್ ತರಬೇತಿಗೆ ಮೊರೆ ಹೋಗಲಾಗಿದೆ ಇದರ ಪ್ರಯೋಜನ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಾಯ್.ಟಿ. ಪಾಟೀಲ್ ಇವರು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳು ಕೋವಿಡ್–19 ಸಂದರ್ಭದಲ್ಲಿ ತಮ್ಮ ಸದಸ್ಯರಿಗೆ ನಿರಂತರ ಸೇವೆಯನ್ನು ನೀಡುತ್ತಿರುವುದು ಶ್ಲಾಘನೀಯ ಇನ್ನು ಹೆಚ್ಚಿನ ಮಾರ್ಗದರ್ಶನವನ್ನು ಮನಗಂಡು ಸಂಯುಕ್ತ ಸಹಕಾರಿಯು ಆನ್‌ಲೈನ್ ತರಬೇತಿ ಆಯೋಜಿಸಿದೆ ಇದರ ಸದುಪಯೋಗ ಪಡೆದುಕೊಳ್ಳುವಂತೆ ಕೋರಿದರು.

ಈ ಆನ್‌ಲೈನ್ ಸಭೆಯ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್. ಪ್ರಾಸ್ತಾವಿಕ ನುಡಿ ನುಡಿದರು. ವಂದನಾರ್ಪಣೆಯನ್ನು ಶ್ರೀ ವೀರಶೆಟ್ಟಿ ಕೆ. ಜಿಲ್ಲಾ ಸಂಯೋಜಕರು ನೇರವೇರಿಸಿದರು. ಯಾದಗಿರಿ ಜಿಲ್ಲೆಯ ಒಟ್ಟು 35 ಸೌಹಾರ್ದ ಸಹಕಾರಿಗಳು ತರಬೇತಿಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.

## ಲೆಕ್ಕಪರಿಶೋಧನಾ ಪೂರ್ವ ತಯಾರಿ ಮತ್ತು ಸಹಕಾರಿಗಳಿಗೆ ಅನ್ವಯಿಸುವ ಆದಾಯ ತೆರಿಗೆ ಮತ್ತು ಜಿಎಸ್‌ಟಿ ಕುರಿತು ತರಬೇತಿ ಕಾರ್ಯಕ್ರಮ

**ಕೊಪ್ಪಳ** : ದಿನಾಂಕ 15.07.2020 ರಂದು ಕಲಬುರಗಿ ಪ್ರಾಂತದ ಕೊಪ್ಪಳ ಜಿಲ್ಲೆಯ ತಾಲ್ಲೂಕುವಾರು ಸೌಹಾರ್ದ ಸಹಕಾರಿಯ ಅಧ್ಯಕ್ಷರು / ಮುಖ್ಯಕಾರ್ಯನಿರ್ವಾಹಕರುಗಳಿಗೆ "ಲೆಕ್ಕಪರಿಶೋಧನಾ ಪೂರ್ವ ತಯಾರಿ ಮತ್ತು ಸಹಕಾರಿಗಳಿಗೆ ಅನ್ವಯಿಸುವ ಆದಾಯ ತೆರಿಗೆ ಮತ್ತು ಜಿಎಸ್‌ಟಿ " ಕುರಿತು ಅನ್‌ಲೈನ್ ತರಬೇತಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಇವರ ಅಧ್ಯಕ್ಷತೆಯಲ್ಲಿ ಈ ತರಬೇತಿಯನ್ನು ಏರ್ಪಡಿಸಲಾಗಿತ್ತು. ತರಬೇತಿ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಿ.ವಿ ರವೀಂದ್ರನಾಥ ಸನ್ನದು ಲೆಕ್ಕಪರಿಶೋಧಕರು ಸಾಗರ ಇವರು ಆಗಮಿಸಿ ವಿಷಯದ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ, ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ, ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಉಪಸ್ಥಿತರಿದ್ದರು. ಸೌಹಾರ್ದ ಸಹಕಾರಿಗಳಿಂದ ಒಟ್ಟು 126 ಪ್ರತಿನಿಧಿಗಳು ಭಾಗವಹಿಸಿದ್ದರು.

**ರಾಯಚೂರು** : ದಿನಾಂಕ 09.07.2020ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ರಾಯಚೂರು ಜಿಲ್ಲೆಯ ತಾಲೂಕವಾರು ಸೌಹಾರ್ದ ಸಹಕಾರಿಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕ–ರಿಗಾಗಿ "ಲೆಕ್ಕಪರಿಶೋಧನೆಯ ಪೂರ್ವ ತಯಾರಿ" ಕುರಿತು ಅನ್‌ಲೈನ್

ತರಬೇತಿಯನ್ನು ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಚಂದ್ರಶೇಖರ ಪಾಟೀಲ ಸನ್ನದು ಲೆಕ್ಕಪರಿಶೋಧಕರು ಇವರು ಉಪನ್ಯಾಸ ನೀಡಿದರು. ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರ ಉಪಸ್ಥಿತಿಯಲ್ಲಿ ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಅನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 135 ಪ್ರತಿನಿಧಿಗಳು ಭಾಗವಹಿಸಿದರು.

## ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆಯ ಕುರಿತು ತರಬೇತಿ ಕಾರ್ಯಕ್ರಮ

**ಬಳ್ಳಾರಿ :** ದಿನಾಂಕ 08.07.2020ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿ ವತಿಯಿಂದ ಬಳ್ಳಾರಿ ಜಿಲ್ಲೆಯ ತಾಲ್ಲೂಕವಾರು ಸೌಹಾರ್ದ ಸಹಕಾರಿಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರಿಗಾಗಿ "ಸಹಕಾರಿಯ ಲೆಕ್ಕಪತ್ರಗಳ ನಿರ್ವಹಣೆಯ" ಕುರಿತು ಅನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠ ಅಧ್ಯಕ್ಷತೆಯಲ್ಲಿ ಜರುಗಿತು. ತರಬೇತಿಯ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಮಧುಕರ ಹೆಗಡೆ ಸನ್ನದು ಲೆಕ್ಕಪರಿಶೋಧಕರು ಬೆಂಗಳೂರು ಇವರು ಉಪನ್ಯಾಸ ನೀಡಿದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರ ಉಪಸ್ಥಿತಿಯಲ್ಲಿ ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಅನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 79 ಪ್ರತಿನಿಧಿಗಳು ಭಾಗವಹಿಸಿದರು.

## ಆಡಳಿತ ಮಂಡಳಿಯ ಸಭೆ ಜರುಗಿಸುವುದರ ಕುರಿತು ತರಬೇತಿ ಕಾರ್ಯಕ್ರಮ

**ಕಲಬುರಗಿ :** ದಿನಾಂಕ 07.07.2020ರಂದು ಮಂಗಳವಾರ ನಡೆದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರಿಗಾಗಿ ಆಡಳಿತ ಮಂಡಳಿಯ ಸಭೆಗಳನ್ನು ಯಾವ ರೀತಿ ಜರುಗಿಸುವುದು ಮತ್ತು ನಡವಳಿಯನ್ನು ಬರೆಯುವುದರ ಕುರಿತು ತರಬೇತಿಯನ್ನು ಆಯೋಜಿಸಲಾಗಿದ್ದು. ಈ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಅಧ್ಯಕ್ಷತೆಯ ಭಾಷಣದಲ್ಲಿ ಕೋವಿಡ್–19 ನಿಂದ ಇಡೀ ದೇಶವೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು ಅದರಲ್ಲಿ ಸಹಕಾರ ಕ್ಷೇತ್ರವು ಸಹ ಒಂದು ಈಗಾಗಲೇ ಸಹಕಾರಿ ಕ್ಷೇತ್ರಕ್ಕೆ ಆರ್ಥಿಕವಾಗಿ ಬಹಳಷ್ಟು ನಷ್ಟವಾಗಿದೆ ಕೋವಿಡ್–19 ಹೆಚ್ಚು ಹರಡುತ್ತಿರುವ ಪರಿಣಾಮ ಅನ್‌ಲೈನ್ ಮೂಲಕ ಸಂಯುಕ್ತ ಸಹಕಾರಿ ನಡೆಸುವ ತರಬೇತಿ ಕಾರ್ಯಕ್ರಮಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸಿ ಅದರ ಲಾಭವನ್ನು ತಾವೆಲ್ಲಾ ಪಡೆದುಕೊಳ್ಳಬೇಕು ಎಂದು ತಿಳಿಸಿದರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ ಹಿರೇಮಠರವರು ಈ ತರಬೇತಿ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಭಾಗವಹಿಸಿ ಸಹಕಾರಿಗಳಿಗೆ ಆಡಳಿತ ಮಂಡಳಿಯ ಸಭೆ ಯಾವ ರೀತಿ ಜರಗಿಸುವುದು, ಸಭೆಯ ನೋಟಿಸ್ ಮತ್ತು ನಡುವಳಿಗಳನ್ನು ಬರೆಯುವುದರ ಕುರಿತು ವಿವರವಾಗಿ ತಿಳಿಸಿರುತ್ತಾರೆ. ಈ ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಮಾನ್ಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿರವರು ಹಾಗೂ ಬಸವೇಶ್ವರ ಸುದ್ದಿ ಮಹಾಮಂಡಳದ ಮಾನ್ಯ ನಿರ್ದೇಶಕರಾದ ಶ್ರೀ ಎಸ್‌ಎಸ್ ಪಾಟೀಲರವರು ಹಾಗೂ ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಇವರು ಉಪಸ್ಥಿತರಿದ್ದರು.

ಈ ಸಭೆಯಲ್ಲಿ ಒಟ್ಟು 70 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಪ್ರಾಸ್ತವಿಕ ಮಾತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಇವರು ನೇರವೇರಿಸಿದರು. ಸ್ವಾಗತ & ನಿರೂಪಣೆ ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಇವರು ನೇರವೇರಿಸಿದರು.

## ಬೆಳಗಾವಿ ವಿಭಾಗ

**ಧಾರವಾಡ ಮತ್ತು ಗದಗ :** ಧಾರವಾಡ ಮತ್ತು ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಹಕರಿಗಾಗಿ ಆನ್ ಲೈನ್ ತರಬೇತಿ ಕಾರ್ಯಕ್ರಮವನ್ನು" Go to Meeting App" ಮೂಲಕ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಸನ್ನದು ಲೆಕ್ಕಪರಿಶೋಧಕರಾದ ಮಾನ್ಯ ಶ್ರೀ ಮಧುಕರ್ ಹೆಗಡೆ ರವರು ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು.

ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪಡಚಣ್ಣನವರ ರವರು ವಹಿಸಿದರು. ತಾಂತ್ರಿಕ ನೆರವನ್ನು ಶ್ರೀಮತಿ ಪ್ರತಿಭಾ ಮಠ ಸಹಾಯಕಿ ಬೆಳಗಾವಿ ರವರು ನೀಡಿದರು. ಧಾರವಾಡ ಮತ್ತು ಗದಗ ಜಿಲ್ಲೆಯಿಂದ ಒಟ್ಟು 41 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದರು.

ಮೈಸೂರು ವಿಭಾಗ

## "ಡಿಜಿಟಲ್ ಸರ್ವಿಸ್- ಸೇವಾ ಸಿಂಧು ಮತ್ತು ಇ-ಸ್ಟಾಂಪಿಂಗ್" ಕುರಿತು ತರಬೇತಿ ಕಾರ್ಯಕ್ರಮ

**ಮೈಸೂರು ಮತ್ತು ಕೊಡಗು :** ಮೈಸೂರು ಮತ್ತು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹರಗಳಿಗೆ "ಡಿಜಿಟಲ್ ಸರ್ವಿಸ್– ಸೇವಾ ಸಿಂಧು ಮತ್ತು ಇ–ಸ್ಟಾಂಪಿಂಗ್" ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ 02.07.2020 ಗುರುವಾರ ಮಧ್ಯಾಹ್ನ 03:00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು.

ಸ್ವಾಗತ ಭಾಷಣವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ನಂತರ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರಿ ಮಂಜುನಾಥರವರು ಪ್ರಾಸ್ತಾವಿಕ ನುಡಿಯನ್ನು ಮತ್ತು ಡಿಜಿಟಲ್ ಸರ್ವಿಸ್ ಬಗ್ಗೆ ಹಾಗೂ ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಂತೆ ಸೌಹಾರ್ದ ಸಹಕಾರಿಗಳಿಗೆ ಮಾರ್ಗದರ್ಶನ ಮಾಡಿದರು. ಶ್ರೀ ಚೇತನ್ ಎಂ, ಜಿಲ್ಲಾ ಪ್ರಾಜೆಕ್ಟ್ ಮ್ಯಾನೇಜರ್, ಸೇವಾ ಸಿಂಧು ವಿಭಾಗ, ಜಿಲ್ಲಾಧಿಕಾರಿ ಕಛೇರಿ, ಮೈಸೂರು. ಇವರು "ಡಿಜಿಟಲ್ ಸರ್ವಿಸ್– ಸೇವಾ ಸಿಂಧು" ಕುರಿತು ಉಪನ್ಯಾಸ ನೀಡಿದರು. ನಂತರ ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಇದರ ಸಿಬ್ಬಂದಿಯಾದ ಕುಮಾರಿ ಸರೋಜರವರು ಕಾವೇರಿ ಮತ್ತು ಭೂಮಿ ಅನ್‌ಲೈನ್ ಸರ್ವಿಸ್ ಬಗ್ಗೆ ಮಾಹಿತಿ ನೀಡಿದರು. ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಯಾದ ಶ್ರೀಮತಿ ಅನಿತಾರವರು ಇ–ಸ್ಟಾಂಪಿಂಗ್ ಕುರಿತು ಮಾಹಿತಿ ನೀಡಿದರು. ಮೈಸೂರು ಮತ್ತು ಕೊಡಗು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 37 ಸೌಹಾರ್ದ ಸಹಕಾರಿಗಳಿಂದ 48 ಪ್ರತಿನಿಧಿಗಳು ಭಾಗವಹಿಸಿದ್ದರು.

## ಕರ್ನಾಟಕ ಸೌಹಾರ್ದ ಕಾಯ್ದೆ 1997ರ ಆಶಯ ಮತ್ತು ಸಾಧನೆಗಳ ಕುರಿತು ತರಬೇತಿ ಕಾರ್ಯಕ್ರಮ

**ಚಾಮರಾಜನಗರ ಮತ್ತು ಮಂಡ್ಯ :** ದಿನಾಂಕ 16.07.2020ರಂದು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಹಕಾರಿಗಳ ಅಧ್ಯಕ್ಷರು ಹಾಗೂ ನೂತನವಾಗಿ ಷೇರು ಮೊತ್ತವನ್ನು ಸಂಗ್ರಹಿಸುತ್ತಿರುವ ಸಹಕಾರಿಗಳ ಮುಖ್ಯಪ್ರವರ್ತಕರಿಗೆ "ಕರ್ನಾಟಕ ಸೌಹಾರ್ದ ಕಾಯ್ದೆ–1997ರ ಆಶಯ ಮತ್ತು ಸಾಧನೆಗಳು" ವಿಷಯದ ಬಗ್ಗೆ 'ವೀಡಿಯೋ ಕಾನ್ಫೆರೆನ್ಸ್' ಮೂಲಕ ತರಬೇತಿ ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ 25 ಸೌಹಾರ್ದ ಸಹಕಾರಿಗಳಿಂದ 33 ಪ್ರತಿನಿಧಿಗಳು, ಷೇರು ಮೊತ್ತವನ್ನು ಸಂಗ್ರಹಿಸುತ್ತಿರುವ 05 ಉದ್ದೇಶಿತ ಸಹಕಾರಿಗಳಿಂದ 08 ಪ್ರತಿನಿಧಿಗಳು ಮತ್ತು ಇತರೇ ಆಸಕ್ತ 10 ಪ್ರತಿನಿಧಿಗಳು ಸೇರಿ ಒಟ್ಟು 56 ಜನರು ಭಾಗವಹಿಸಿದ್ದರು.

ಸದರಿ ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಶ್ರೀ ಶಿವಕುಮಾರ ಬಿರಾದರ್, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು ಮಾಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಇವರು ಮಾರ್ಗದರ್ಶನ ಮಾಡಿದರು. ನಂತರದಲ್ಲಿ ಪ್ರತಿನಿಧಿಗಳ ಕೇಳಿದ ಪ್ರಶ್ನೆಗಳಿಗೆ ಸಂಪನ್ಮೂಲ ವ್ಯಕ್ತಿಗಳು ವಿವರಣೆ ಸಹಿತ ಉತ್ತರವನ್ನು ನೀಡಿದರು. ಚಂದ್ರಶೇಖರಯ್ಯ ಎಂ ಜಿಲ್ಲಾ ಸಂಯೋಜಕರು ವಂದನಾರ್ಪಣೆ ಮಾಡಿದರು. ತರಬೇತಿ ವಿಭಾಗದಿಂದ ಶ್ರೀಮತಿ ರೇಣುಕಾ ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು ಮತ್ತು ಅವಕಾಶಗಳ ಕುರಿತು ತರಬೇತಿ ಕಾರ್ಯಕ್ರಮ

**ಚಾಮರಾಜನಗರ ಮತ್ತು ಮಂಡ್ಯ :** ದಿನಾಂಕ 30.07.2020 ರಂದು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಲಿ ಸದಸ್ಯರಿಗಾಗಿ "ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು & ಅವಕಾಶಗಳು" ವಿಷಯದ ಕುರಿತು "ವೀಡಿಯೋ ಕಾನ್ಫರೆನ್ಸ್" ಮೂಲಕ ತರಬೇತಿಯನ್ನು ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ 22 ಸೌಹಾರ್ದ ಸಹಕಾರಿಗಳಿಂದ 32 ಪ್ರತಿನಿಧಿಗಳು,

ನೋಂದಣಿಗಾಗಿ ಷೇರು ಸಂಗ್ರಹಿಸುತ್ತಿರುವ 06 ಸಹಕಾರಿಗಳಿಂದ 08 ಪ್ರತಿನಿಧಿಗಳು ಹಾಗೂ 06 ಆಸಕ್ತ ಪ್ರತಿನಿಧಿಗಳು ಒಟ್ಟು 46 ಜನರು ಭಾಗವಹಿಸಿದ್ದರು.

ಸದರಿ ತರಬೇತಿಯ ಸ್ವಾಗತ ಮತ್ತು ಪರಿಚಯವನ್ನು ಶ್ರೀ ಶಿವಕುಮಾರ ಬಿರಾದರ್, ಪ್ರಾಂತೀಯ ವ್ಯವಸ್ಥಾಪಕರು, ಮೈಸೂರು ಇವರು ನಡೆಸಿಕೊಟ್ಟರು. ತರಬೇತಿಯ ಪ್ರಾಸ್ತಾವಿಕವನ್ನು ಶ್ರೀ ಮಂಜುನಾಥ .ಎಸ್.ಕೆ ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಕೋವಿಡ್-19 ಸಂಕಷ್ಟ ಸಂದರ್ಭದಲ್ಲಿ ಸಹಕಾರಿಗಳ ಮುಂದಿರುವ ಸವಾಲುಗಳು & ಅವಕಾಶಗಳ ಬಗ್ಗೆ ತಿಳಿಸಿದರು. "ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು & ಅವಕಾಶಗಳು" ವಿಷಯದ ಸಂಪನ್ಮೂಲ ವ್ಯಕ್ತಿಯಾಗಿ ಪ್ರೊ. ಯಶವಂತ್ ಡೋಂಗ್ರೆ, ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮಾದರಿ\ನಮೂನೆಗಳ (ಸ್ಲೈಡ್ ಷೋ) ಮೂಲಕ ಮಾಹಿತಿಯನ್ನು ನೀಡಿ ನಂತರದಲ್ಲಿ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದರು.

ಶ್ರೀ ಎಂ. ಚಂದ್ರಶೇಖರಯ್ಯ, ಸೌಹಾರ್ದ ಜಿಲ್ಲಾ ಸಂಯೋಜಕರು ಇವರು ವಂದನಾರ್ಪಣೆ ಮಾಡಿದರು. ತರಬೇತಿ ವಿಭಾಗದ ಶ್ರೀಮತಿ ರೇಣುಕಾ "ವೀಡಿಯೋ ಕಾನ್ಫರೆನ್ಸ್" ತರಬೇತಿಯನ್ನು ನಿರ್ವಹಿಸಿದರು.

---

**ಹಾಸನ ಮತು ಚಿಕ್ಕಮಗಳೂರು :** ದಿನಾಂಕ 31.07.2020 ರಂದು ಹಾಸನ ಮತು ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರಿಗೆ ಆಯೋಜಿಸಲಾಗಿದ್ದ ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ 'ಸೌಹಾರ್ದ ಸಹಕಾರಿಗಳ ಮುಂದಿರುವ ಸವಾಲುಗಳು ಮತ್ತು ಅವಕಾಶಗಳು' ಎಂಬ ವಿಷಯದ ಮೇಲೆ ಮಾನ್ಯ ಶ್ರೀ ಯಶವಂತ ಡೋಂಗ್ರೆ, ನಿವೃತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ ಇವರು ಉಪನ್ಯಾಸ ನೀಡಿದರು, ಸಭೆಯ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ ಎಸ್.ಕೆ ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಬೆಂಗಳೂರು ಇವರು ವಹಿಸಿದ್ದರು, ಸಭೆಗೆ ಶ್ರೀ ಶಿವಕುಮಾರ ಬಿರಾದಾರ್ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಮೈಸೂರು ವಿಭಾಗ ಇವರು ಸ್ವಾಗತ ಕೋರಿದರು, ಸಭೆಯ ಕೊನೆಯಲ್ಲಿ ಶ್ರೀ ಸಂತೋಷ್ ಕುಮಾರ್ ಎಂ.ಜೆ ವಂದನಾರ್ಪಣೆ ಮಾಡಿದರು ಸದರಿ ಸಭೆಯಲ್ಲಿ 78 ಸೌಹಾರ್ದ ಸಹಕಾರಿಗಳಿಂದ 45 ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.

---

### ಬೆಂಗಳೂರು ವಿಭಾಗ

## ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ತರಬೇತಿ ಕಾರ್ಯಕ್ರಮ

**ಬೆಂಗಳೂರು :** ದಿನಾಂಕ 09.07.2020 ರಂದು ಬೆಂಗಳೂರು ಪ್ರಾಂತದ ವಿವಿದೋದ್ಧೇಶ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಸೌಹಾರ್ದ ಸಹಕಾರಿಗಳ ವಿವಿದೋದ್ಧೇಶ ಕಾರ್ಯಚಟುವಟಿಕೆಗಳ ವಿಷಯದ ಕುರಿತು ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಟಿ.ಎಸ್.ಎಸ್ ಕೋ-ಆಪರೇಟಿವ್ ಸೊಸೈಟಿ ಶಿರಸಿ, ಉತ್ತರ ಕನ್ನಡ ಜಿಲ್ಲೆ ಇದರ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ರವೀಶ್ ಹೆಗಡೆ ರವರು ಭಾಗವಹಿಸಿ ವಿವಿದೋದ್ಧೇಶ ಚಟುವಟಿಕೆಗಳ ಮೂಲಕ ಸಹಕಾರಿಯ ಅಭಿವೃದ್ಧಿಯಲ್ಲಿ ಮುಖ್ಯಕಾರ್ಯನಿರ್ವಾಹಕರ ಪಾತ್ರ ಹಾಗೂ ಕಾರ್ಯಯೋಜನೆ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಶಿವಮೊಗ್ಗ ಜಿಲ್ಲೆಯ ಮಾನ್ಯ ನಿರ್ದೇಶಕರಾದ ಶ್ರೀ ಎ,ಆರ್ ಪ್ರಸನ್ನಕುಮಾರ್ ರವರು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು, ಸದರಿ ಕಾರ್ಯಕ್ರಮದಲ್ಲಿ ತುಮಕೂರು ಜಿಲ್ಲೆಯ ಮಾನ್ಯ ನಿರ್ದೇಶಕರಾದ ಶ್ರೀ ಬಿ, ಗಂಗಾಧರಯ್ಯನವರು, ಉತ್ತರ ಕನ್ನಡ ಜಿಲ್ಲೆಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ರವರು, ಮಾಜಿ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಬೆಂಗಳೂರು ಪ್ರಾಂತೀಯ ಮಾನ್ಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ನೆರವೇರಿಸಿದರು. ಬೆಂಗಳೂರು ಪ್ರಾಂತದ ಎಲ್ಲಾ ಜಿಲ್ಲಾ ಸಂಯೋಜಕರು ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ 63 ಜನ ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು.

---

### ರಾಜ್ಯದ ಸೌಹಾರ್ದ ಸಹಕಾರಿಗಳ ಗಮನಕ್ಕೆ

**ಸಂಯುಕ್ತ ಸಹಕಾರಿಯ ಆಗಸ್ಟ್ ತಿಂಗಳ ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆಯಲ್ಲಿ ಸರ್ಕಾರದ ಆದೇಶಗಳು, ಸಂಯುಕ್ತ ಸಹಕಾರಿಯ ಸುತ್ತೋಲೆಗಳು ಹಾಗೂ ಲೇಖನಗಳನ್ನು ಮುದ್ರಿಸಿ ಕಳುಹಿಸಲಾಗಿದೆ. ಉಳಿದಂತೆ ಸೌಹಾರ್ದ ಸಹಕಾರಿಗಳು ಆಶಾ ಕಾರ್ಯಕರ್ತೆಯರಿಗೆ ನೀಡಿದ ಗೌರವ ಧನದ ಮಾಹಿತಿ ಹಾಗೂ ಇತರೆ ಮಾಹಿತಿಯನ್ನು ಡಿಜಿಟಲ್ ಮೂಲಕ ಕಳುಹಿಸಲಾಗಿದೆ.**

– ಸಂಪಾದಕರು

## ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ

ಸೌಹಾರ್ದ ಸಹಕಾರ ಕ್ಷೇತ್ರದ ಗುಣಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯು ಹಿರಿಯ ಸಹಕಾರಿಗಳ ಹಾಗೂ ತಜ್ಞರ ಸಲಹೆಯನ್ನು ಪಡೆದು ಆರ್ಥಿಕ ಸಬಲತೆಯ ಮಾನದಂಡಗಳ ಕರಡು ಸುತ್ತೋಲೆಯನ್ನು ಸಿದ್ಧಪಡಿಸಿದೆ. ಹಾಗೂ ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಶಾಖೆ ತೆರೆಯುವ ಕುರಿತು ಸುತ್ತೋಲೆಯಲ್ಲಿ ಬದಲಾವಣೆಗಳನ್ನು ಮಾಡಿ ಪರಿಷ್ಕೃತ ಕರಡು ಸುತ್ತೋಲೆಯನ್ನು ಸಿದ್ಧಪಡಿಸಿದೆ.

ಈ ಎರಡು ಕರಡು ಸುತ್ತೋಲೆಯನ್ನು, ಸೌಹಾರ್ದ ಸಹಕಾರಿಗಳಿಂದ ಸಲಹೆ/ಅಭಿಪ್ರಾಯಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸುವುದಕ್ಕಾಗಿ ಪ್ರಕಟಿಸಿದೆ. ತಮ್ಮ ಸಲಹೆ/ಅಭಿಪ್ರಾಯ/ಆಕ್ಷೇಪಣೆಗಳಿದ್ದಲ್ಲಿ 30 ದಿನಗಳ ಒಳಗಾಗಿ kssfcladmin@souharda.coop ಗೆ ಮೇಲ್ ಮಾಡುವ ಮೂಲಕ ಅಥವಾ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಲಿಖಿತ ಪತ್ರ ಕಳುಹಿಸುವ ಮೂಲಕ ಸಲ್ಲಿಸಲು ತಿಳಿಸಿದೆ.

– ವ್ಯವಸ್ಥಾಪಕ ನಿರ್ದೇಶಕರು

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

## ಪ್ರಸ್ತಾವನೆ

ಸೌಹಾರ್ದ ಸಹಕಾರ ಕ್ಷೇತ್ರದ ಗುಣಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ, ಸಂಯುಕ್ತ ಸಹಕಾರಿಯು ನಿಯಮಿತವಾಗಿ ಅನೇಕ ಸುತ್ತೋಲೆಗಳನ್ನು ನೀಡಿರುತ್ತದೆ. ಸೌಹಾರ್ದ ಸಹಕಾರಿ ಕಾಯ್ದೆಯಲ್ಲಾದ ತಿದ್ದುಪಡಿಗಳು, ಆದಾಯ ತೆರಿಗೆ ಕಾಯ್ದೆ, ಜಿಎಸ್‌ಟಿ ಕಾಯ್ದೆ ಇತ್ಯಾದಿ ಸೇರಿದಂತೆ ವಿವಿಧ ಶಾಸನಗಳಲ್ಲಿ ಆದ ಬದಲಾವಣೆಗನುಗುಣವಾಗಿ ಸಂಯುಕ್ತ ಸಹಕಾರಿಯ ಸುತ್ತೋಲೆಗಳನ್ನು ಪರಿಷ್ಕರಿಸಬೇಕಿದೆ. ಅಲ್ಲದೆ, ಕೆಲವು ಸೌಹಾರ್ದ ಸಹಕಾರಿಗಳು ಆಕರ್ಷಕ ಬಡ್ಡಿದರದ ಆಮೀಷ ತೋರಿಸಿ ಹಣ ಸಂಗ್ರಹಿಸಿ ಪತ್ತೇತರ ಉದ್ದೇಶಗಳಿಗೆ ಸಮೂಹ ಸಂಸ್ಥೆಗಳಲ್ಲಿ ತೊಡಗಿಸುತ್ತಿರುವುದು, ಹೂಡಿಕೆಗಳನ್ನು ಕಾಯ್ದೆಗನುಗುಣವಾಗಿ ಮಾಡದಿರುವುದು, ಲೆಕ್ಕಪದ್ಧತಿಯಲ್ಲಿ ಸೂಕ್ತ ಲೆಕ್ಕಾಚಾರ ಬಳಸದ ಕಾರಣದಿಂದ ವಾಸ್ತವಿಕ ಆರ್ಥಿಕ ಸ್ಥಿತಿಯ ಅರಿವುಂಟಾಗದಿರುವುದು ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಿರುತ್ತದೆ. ಅಲ್ಲದೆ, ಸೌಹಾರ್ದ ಸಹಕಾರ ಕ್ಷೇತ್ರದ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಕೂಡ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆ ಹಾಗೂ ಸಾಮಾನ್ಯ ಸಭೆಗಳಲ್ಲಿ ಚರ್ಚೆಯಾಗಿರುತ್ತದೆ. ಸೌಹಾರ್ದ ಸಹಕಾರಿಗಳ ಆರ್ಥಿಕ ಸಬಲತೆಯ ಮಾನದಂಡಗಳ ರಚನೆಯನ್ನು ಮಾಡುವ ಕುರಿತು ಸಹಕಾರ ಇಲಾಖೆಯೊಂದಿಗಿನ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದೊಂದಿಗಿನ ಸಭೆಗಳಲ್ಲಿ ನೀಡಲಾದ ಸಲಹೆ/ಅಭಿಪ್ರಾಯಗಳು ಪರಿಗಣಿಸಲಾಗಿದೆ.

ಈ ಎಲ್ಲ ಅಂಶಗಳನ್ನು ಪರಿಗಣಿಸಿ, ಸಂಯುಕ್ತ ಸಹಕಾರಿಯು ಈ ಹಿಂದೆ ನೀಡಿದ್ದ – ದ್ರವ್ಯಾಸ್ತಿ ನಿರ್ವಹಣಾ ಮಾರ್ಗಸೂಚಿ, ಲಾಭಾಂಶ ವಿಲೇವಾರಿ ಮಾರ್ಗಸೂಚಿ, ನಿಧಿಗಳ ಹೂಡಿಕೆ ಕುರಿತ ಮಾರ್ಗಸೂಚಿ, ಪತ್ತಿನ ಸಹಕಾರಿಗಳ ಆರ್ಥಿಕ ಸಬಲತೆ ಮಾನದಂಡಗಳು – ಈ ಸುತ್ತೋಲೆಗಳಲ್ಲಿನ ಅಂಶಗಳನ್ನು ಅಗತ್ಯ ಬದಲಾವಣೆಗಳೊಂದಿಗೆ ಏಕೀಕೃತಗೊಳಿಸಿ ಒಂದೇ ಸುತ್ತೋಲೆಯನ್ನು ನೀಡಲು ಸಂಯುಕ್ತ ಸಹಕಾರಿಯು ಉದ್ದೇಶಿಸಿದೆ. ಅದರಂತೆ ಆರ್ಥಿಕ ಸಬಲತೆಯ ಮಾನದಂಡಗಳನ್ನು ನಿಗದಿಪಡಿಸಿ ಈ ಕೆಳಗಿನಂತೆ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

### ಆರ್ಥಿಕ ಸಬಲತೆಯ ಮಾನದಂಡಗಳು
### ಕಾಯ್ದೆ ಕಲಂ.53(7)(ಹೆಚ್) ರಡಿಯ ಪ್ರಾವಧಾನದಂತೆ

ಸಂಖ್ಯೆ: ---/--/--/2019-20 ದಿನಾಂಕ: --/--/----

**ಎ. ನಿಧಿಗಳ ಸಂಗ್ರಹ ಮಿತಿ :**

1. ಸಹಕಾರಿಯು ಸ್ವೀಕರಿಸಬಹುದಾದ ಠೇವಣಿ ಮತ್ತು ಸಾಲದ ಮೊತ್ತವು ಸಹಕಾರಿಯ ಪಾವತಿಯಾದ ಶೇರು ಬಂಡವಾಳ, ಮೀಸಲು ನಿಧಿ ಮತ್ತು ಕಟ್ಟಡ ನಿಧಿಗಳ ಒಟ್ಟು ಮೊತ್ತದ ಐವತ್ತು ಪಟ್ಟು ಮೊತ್ತದಿಂದ ಕ್ರೋಢೀಕೃತ ನಷ್ಟವನ್ನು ಕಳೆದಾಗ ಬರುವ ಮೊತ್ತವನ್ನು ದಾಟುವಂತಿಲ್ಲ. (ಸೌಹಾರ್ದ ಸಹಕಾರಿ ನಿಯಮ ಸಂಖ್ಯೆ 3(4)(ಸಿ)).

**ಬಿ. ದ್ರವ್ಯಾಸ್ತಿ ನಿರ್ವಹಣೆ :**

1. ಸಹಕಾರಿಯ ಸಂಗ್ರಾಹಿತ ಠೇವಣಿಯ ಶೇಕಡಾ 20 ಅನ್ನು ದ್ರವ್ಯಾಸ್ತಿಯಾಗಿ ನಿರ್ವಹಿಸತಕ್ಕದ್ದು. ನಗದನ್ನು ಹೊರತುಪಡಿಸಿ ಉಳಿದ ಮೊತ್ತವನ್ನು ಬ್ಯಾಂಕ್ ಖಾತೆಗಳಲ್ಲಿ ಅಥವಾ ಸೌಹಾರ್ದ ಸಹಕಾರಿ ಕಾಯ್ದೆ ಕಲಂ.18ರ ಪ್ರಾವಧಾನದಡಿ ಹೂಡಿಕೆ ಮಾಡತಕ್ಕದ್ದು. ಆದರೆ ತಕ್ಷಣಕ್ಕೆ ನಗದು ಲಭ್ಯತೆಯಾಗದ ಹೂಡಿಕೆಗಳನ್ನು (ದೀರ್ಘಕಾಲಿನ ಹೊಡಿಕೆ) ಮಾಡತಕ್ಕದ್ದಲ್ಲ.
2. ಕಂಡಿಕೆ 1ರಲ್ಲಿ ಹೇಳಿರುವ ದ್ರವ್ಯಾಸ್ತಿ ಹೂಡಿಕೆಯ ಆಧಾರದಲ್ಲಿ ಯಾವುದೇ ಸಾಲ ಪಡೆಯುವಂತಿಲ್ಲ. ಪರಂತು, ಅನಿವಾರ್ಯ ಸಂದರ್ಭದಲ್ಲಿ ಮೂರು ತಿಂಗಳ ಅವಧಿ ಮೀರದಂತೆ ಓವರ್ ಡ್ರಾಫ್ಟ್ ಸಾಲವನ್ನು ಪಡೆಯಬಹುದು, ಆದರೆ ಇದನ್ನು ಠೇವಣಿ ಮರುಪಾವತಿಗೆ ಹೊರತುಪಡಿಸಿ ಉಳಿದ ಕಾರಣಗಳಿಗೆ ಬಳಸತಕ್ಕದ್ದಲ್ಲ.
3. ಠೇವಣಿ ಆಧಾರದ ಸಾಲ ನೀಡಿಕೆ ಸಂದರ್ಭದಲ್ಲಿ ಸಾಲದ ಮೊತ್ತವು ಠೇವಣಿ ಮೊತ್ತದ ಶೇಕಡಾ 90ನ್ನು ಮೀರುವಂತಿಲ್ಲ. ಈ ಉದ್ದೇಶಕ್ಕಾಗಿ ಸದರಿ ಠೇವಣಿಯ ಕ್ರೋಢೀಕೃತ ಬಡ್ಡಿಯನ್ನು ಪರಿಗಣಿಸುವಂತಿಲ್ಲ.
4. ಸಹಕಾರಿಯ ಆಡಳಿತ ಮಂಡಲಿಯು ತಮ್ಮ ವ್ಯವಹಾರದ ಅವಶ್ಯಕತೆಯನ್ನು ಗಮನದಲ್ಲಿರಿಸಿಕೊಂಡು, ಸಹಕಾರಿಯ ಕ್ರೋಢೀಕೃತ ನಗದು ಮಿತಿ ದುಡಿಯುವ ಬಂಡವಾಳದ ಶೇಕಡಾ 2 ಅನ್ನು ಮೀರದಂತೆ ಶಾಖಾವಾರು ನಗದು ಮಿತಿಯನ್ನು ನಿಗದಿಗೊಳಿಸತಕ್ಕದ್ದು.
5. ಸಹಕಾರಿಯು ಸ್ವೀಕರಿಸಿದ ಠೇವಣಿಯನ್ನು ಸಾಲ ನೀಡಿಕೆ ಅಥವಾ ಕಲಂ.18ರಡಿ ಹೂಡಿಕೆ ಅಥವಾ ದ್ರವ್ಯಾಸ್ತಿಯಾಗಿ ಮಾತ್ರ ಉಪಯೋಗಿಸತಕ್ಕದ್ದು, ಯಾವುದೇ ಕಾರಣಕ್ಕೂ ಠೇವಣಿ ಮೊತ್ತವನ್ನು ರಿಯಲ್ ಎಸ್ಟೇಟ್ ಒಡಂಬಡಿಕೆಗಳಿಗೆ ಸಹಕಾರಿಯ ಆಸ್ತಿಗಳಲ್ಲಿ ಹೂಡಿಕೆ ಮಾಡುವಂತಿಲ್ಲ ಹಾಗೂ ಪತ್ತೇತರ ಚಟುವಟಿಕೆಗಳಿಗೆ ಬಳಸುವಂತಿಲ್ಲ.

**ಸಿ. ಬಡ್ಡಿದರ, ಠೇವಣಿ ಸ್ವೀಕೃತಿ ಕುರಿತಂತೆ ಮಾರ್ಗದರ್ಶಿಗಳು**

1. ಯಾವುದೇ ಸಹಕಾರಿಯು ನಾಮಮಾತ್ರ ಸದಸ್ಯರಿಂದ ಹಾಗೂ ಸದಸ್ಯೇತರರಿಂದ ಠೇವಣಿಯನ್ನು ಸಂಗ್ರಹಿಸಲು ಅವಕಾಶವಿಲ್ಲ. ಹಾಗು ಠೇವಣಿ ಸಂಗ್ರಹದ ಉದ್ದೇಶಕ್ಕಾಗಿ ಯಾವುದೇ ಸ್ವರೂಪದ ಜಾಹೀರಾತುಗಳನ್ನು ನೀಡತಕ್ಕದ್ದಲ್ಲ.
2. ಯಾವುದೇ ಅವಧಿ ಠೇವಣಿಗಳ ಸಂಗ್ರಹಕ್ಕಾಗಿ ಏಜೆಂಟರುಗಳನ್ನು ನೇಮಕ ಮಾಡತಕ್ಕದ್ದಲ್ಲ ಹಾಗೂ ಠೇವಣಿ ಸಂಗ್ರಹಿಸಲು ಕಮೀಷನ್/ಇನ್ಸೆಂಟೀವ್/ಗಿಫ್ಟ್/ಇನ್ನಾವುದೇ ಸ್ವರೂಪದ ಆಮಿಷ ಒಡ್ಡತಕ್ಕದ್ದಲ್ಲ ಹಾಗೂ ವೆಚ್ಚ ಮಾಡತಕ್ಕದ್ದಲ್ಲ.
3. ಸೌಹಾರ್ದ ಸಹಕಾರಿಗಳು ನೀಡುವ ಯಾವುದೇ ಸ್ವರೂಪದ ಸಾಲದ ಬಡ್ಡಿ ದರ ಶೇ.18ನ್ನು ಮೀರತಕ್ಕದ್ದಲ್ಲ.
4. ಸೌಹಾರ್ದ ಸಹಕಾರಿಗಳು ಅವಧಿ ಠೇವುಗಳ ಮೇಲೆ ಕೊಡುವ ಗರಿಷ್ಠ ಬಡ್ಡಿದರ ಹಾಗು ಸಾಲದ ಮೇಲಿನ ಗರಿಷ್ಠ ಬಡ್ಡಿದರದ ಅಂತರ ಕನಿಷ್ಠ ಶೇ.6 ಇರತಕ್ಕದ್ದು.
5. ನಿರ್ದಿಷ್ಟ ಅವಧಿಯ ದ್ವಿಗುಣ ಯೋಜನೆಗಳನ್ನು ಹೊರತುಪಡಿಸಿ, ಯಾವುದೇ ಸಹಕಾರಿಯು 5 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಯನ್ನು ಸ್ವೀಕರಿಸತಕ್ಕದ್ದಲ್ಲ.
6. ಪಿಗ್ಮಿ ಠೇವುಗಳ ಮೇಲೆ ಗರಿಷ್ಠ ಅವಧಿಗೆ (3 ವರ್ಷ ಹಾಗೂ ಮೆಲ್ಪಟ್ಟು) ಕೊಡುವ ಬಡ್ಡಿದರ ಶೇ.5ನ್ನು ಮೀರತಕ್ಕದ್ದಲ್ಲ ಹಾಗೂ ಪಿಗ್ಮಿ ಸಂಗ್ರಾಹಕರಿಗೆ ನೀಡುವ ಕಮಿಷನ ದರವು ಶೇ.3ನ್ನು ಮೀರತಕ್ಕದ್ದಲ್ಲ.
7. ಯಾವುದೇ ಠೇವಣಿದಾರನು ಅವಧಿಗೆ ಮುಂಚಿತವಾಗಿ ಠೇವಣಿ ಮರುಪಾವತಿ ಕೋರಿದಲ್ಲಿ, ಆ ಅವಧಿಯ ಠೇವಣಿಗೆ ಕೊಡುತ್ತಿದ್ದ ಬಡ್ಡಿದರದಲ್ಲಿ ಗರಿಷ್ಠ ಶೇ.2ನ್ನು ಕಡಿತಗೊಳಿಸಬಹುದು. ಯಾವುದೇ ಕಾರಣಕ್ಕೂ ಠೇವಣಿಯ ಅಸಲನ್ನು ಕಡಿತಗೊಳಿಸತಕ್ಕದ್ದಲ್ಲ.

**ಡಿ. ನಿವ್ವಳ ಲಾಭ ಗುರುತಿಸುವಿಕೆ.**

1. ಸಹಕಾರಿಯ ನಿವ್ವಳ ಲಾಭವನ್ನು ಈ ಕೆಳಗಿನಂತೆ ಲೆಕ್ಕಾಚಾರ ಮಾಡತಕ್ಕದ್ದು –

1) ಅವಧಿ ಠೇವಣಿಗೆ ಪಾವತಿಸಬೇಕಾದ ಬಡ್ಡಿಗೆ ಪೂರ್ಣ ಪ್ರಮಾಣದಲ್ಲಿ ಪ್ರಾವಧಾನ ಮಾಡಿರತಕ್ಕದ್ದು.
2) ಎಲ್ಲಾ ರೀತಿಯ ಸ್ಥಿರಾಸ್ಥಿಗಳಿಗೆ ಆದಾಯ ತೆರಿಗೆ ಕಾಯ್ದೆಯನ್ವಯ ಸವಕಳಿಯನ್ನು ಲೆಕ್ಕಾಚಾರ ಮಾಡಿ ವೆಚ್ಚದ ಬಾಬ್ತಿಗೆ ಸೇರಿಸತಕ್ಕದ್ದು.
3) ಆರ್ಥಿಕ ವರ್ಷದಲ್ಲಿ ವೆಚ್ಚಾಗಿರುವ ಆದರೆ ಪಾವತಿ ಮಾಡಿರದ ಪ್ರಕರಣಗಳಿಗೆ ಹಾಗೂ ಸದರಿ ಆರ್ಥಿಕ ವರ್ಷದ ಲೆಕ್ಕಪರಿಶೋಧನಾ ವೆಚ್ಚಕ್ಕೆ ಅಗತ್ಯ ಪ್ರಾವಧಾನ ಮಾಡತಕ್ಕದ್ದು.
4) ಬಾಡಿಗೆ, ವೇತನ, ವಿಮೆ ಸೇರಿದಂತೆ ಪಾವತಿಯಾಗಿರದ ಎಲ್ಲ ಆಡಳಿತಾತ್ಮಕ ವೆಚ್ಚಗಳಿಗೆ ಅಗತ್ಯ ಪ್ರಾವಧಾನ ಕಲ್ಪಿಸತಕ್ಕದ್ದು.
5) ಯಾವುದೇ ಶಾಸನಾತ್ಮಕ ಪಾವತಿಗಳಿಗೆ ಸಂಬಂಧಿಸಿದಂತೆ ಅಗತ್ಯ ಪ್ರಾವಧಾನ ಕಲ್ಪಿಸತಕ್ಕದ್ದು.
6) ನೀಡಿರುವ ಸಾಲಗಳಿಗೆ ಸಂಬಂಧಿಸಿದಂತೆ, ವಾಸ್ತವವಾಗಿ ಸ್ವೀಕೃತವಾದ ಬಡ್ಡಿಯನ್ನು ಮಾತ್ರ ಆದಾಯಕ್ಕೆ ಪರಿಗಣಿಸತಕ್ಕದ್ದು. ಬರಬೇಕಾದ ಬಡ್ಡಿಯನ್ನು

ಪರಿಗಣಿಸತಕ್ಕದ್ದಲ್ಲ. ಪರಂತು ಅನುತ್ಪಾದಕ ಆಸ್ತಿಗೆ ಪ್ರಾವಧಾನ ಮಾಡಿದ್ದಲ್ಲಿ ಈ ನಿಯಮ ಅನ್ವಯವಾಗತಕ್ಕದ್ದಲ್ಲ.

**ಇ. ಲಾಭಾಂಶ ವಿಲೇವಾರಿ**

1. ಕಾಯ್ದೆ ಕಲಂ 10(2)(xxi) ರಡಿ ಈ ಕೆಳಗಿನ ಕಂಡಿಕೆ 2(ಅ) ದಿಂದ 2(ಈ)ವರೆಗಿನ ನಿಧಿಗಳಿಗೆ ನಿವ್ವಳ ಲಾಭ ವಿಲೇವಾರಿ ಮಾಡುವಾಗ ನೇರ ಪದ್ಧತಿಯಲ್ಲಿಯೇ (Straight Line Method) ಮಾಡತಕ್ಕದ್ದು. ಇಳಿಕೆ ಪದ್ಧತಿಯನ್ನು (Diminishing Method) ಬಳಸತಕ್ಕದ್ದಲ್ಲ.
2. ಕಾಯ್ದೆ ಕಲಂ 10(2)(xxi) ರಡಿ ಲಾಭವನ್ನು ಈ ಕೆಳಗಿನಂತೆ ವಿಲೇವಾರಿ ಮಾಡತಕ್ಕದ್ದು.

ಅ. ನಿವ್ವಳ ಲಾಭದ ಶೇ. 25 – ಮೀಸಲು ನಿಧಿ

– ಸಹಕಾರಿಯ ಮೀಸಲು ನಿಧಿಯನ್ನು ಕಲಂ 18ರಂತೆ ಹೂಡಿಕೆ ಮಾಡತಕ್ಕದ್ದು. ಈ ಹೂಡಿಕೆಯ ಆಧಾರದಲ್ಲಿ ಯಾವುದೇ ಸಾಲ ಪಡೆಯತಕ್ಕದ್ದಲ್ಲ.

ಆ. ನಿವ್ವಳ ಲಾಭದ ಶೇ.2 – ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ.

– ಸಾಮಾನ್ಯ ಸಭೆ ನಡೆದ ದಿನಾಂಕದಿಂದ 30 ದಿನಗಳೊಳಗೆ ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು, ಶಿಕ್ಷಣ ನಿಧಿಗೆ ಪಾವತಿ ಮಾಡದೆ ಸದಸ್ಯರಿಗೆ ಲಾಭಾಂಶ (ಡಿವಿಡೆಂಡ್) ಸಂದಾಯ ಮಾಡತಕ್ಕದ್ದಲ್ಲ.

ಇ. ನಿವ್ವಳ ಲಾಭದ ಶೇ.0.5 – ಸಹಕಾರ ಅಕಾಡಮಿ ಮೈಸೂರು ಇದರ ನಿಧಿಗೆ ಪಾವತಿಸಬೇಕು.

ಇ. ನಿವ್ವಳ ಲಾಭದ ಶೇ.20 – ಕಾರ್ಯಾಚರಣಾ ಮೀಸಲು ನಿಧಿ

– ಈ ನಿಧಿಯನ್ನು ಸಾಮಾನ್ಯ ಸಭೆಯ ಅನುಮೋದನೆ ಪಡೆದು ಅನಿರೀಕ್ಷಿತ ನಷ್ಟಗಳು ಮತ್ತು ಸಾದಿಲ್ವಾರು ವೆಚ್ಚಗಳನ್ನು ಭರಿಸಲು ಬಳಸಬಹುದು.

**ಈ. ನಿವ್ವಳ ಲಾಭದ ಶೇ.5 – ಸಾಮಾನ್ಯ ಕ್ಷೇಮನಿಧಿ**

– ಇದನ್ನು ಸದಸ್ಯರು, ನೌಕರರಿಗೆ ವೈದ್ಯಕೀಯ ಹಾಗೂ ಶೈಕ್ಷಣಿಕ ಸೇವೆಯು ಸೇರಿದಂತೆ ಸಾಮಾನ್ಯ ಸಭೆ ಅನುಮೋದಿಸಿದ ಅಗತ್ಯ ಅಭಿವೃದ್ಧಿ ಕಾರ್ಯಗಳಿಗೆ ಬಳಸಬಹುದು. ಈ ಹಣವನ್ನು ಸಾಮಾನ್ಯ ಸಭೆಯು ರೂಪಿಸಿದ ನಿಯಮಗಳಂತೆ ಮಂಡಳಿಯು ಮಂಜೂರು ಮಾಡುವ ಅಧಿಕಾರ ಹೊಂದಿರುತ್ತದೆ.

ಉ. ಇದನ್ನು ಹೊರತುಪಡಿಸಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಇನ್ನಾವುದೇ ನಿಧಿಗಳಿಗೆ ಉಪವಿಧಿಯನ್ವಯ ಹಂಚಿಕೆ ಮಾಡತಕ್ಕದ್ದು.

ಊ. ಉಳಿದ ನಿವ್ವಳ ಲಾಭದಲ್ಲಿ ಸಾಮಾನ್ಯ ಸಭೆಯು ಅನುಮೋದಿಸಿದಂತೆ ಸದಸ್ಯರಿಗೆ ಡಿವಿಡೆಂಡ್ ಹಾಗೂ ಸಿಬ್ಬಂದಿಗಳಿಗೆ ಎರಡು ತಿಂಗಳ ವೇತನ ಮೀರದಂತೆ ಬೋನಸ್ ನೀಡಬಹುದು.

ಋ. ಮೇಲ್ಕಂಡಂತೆ ಲಾಭ ಹಂಚಿಕೆಯ ನಂತರ ಉಳಿದ ನಿವ್ವಳ ಲಾಭವನ್ನು ಮೀಸಲು ನಿಧಿಗೆ ವರ್ಗಾಯಿಸತಕ್ಕದ್ದು.

**ಎಫ್. ಹೂಡಿಕೆ ಕುರಿತ ಮಾರ್ಗಸೂಚಿ :**

1. ಸೌಹಾರ್ದ ಸಹಕಾರಿಗಳು ತಕ್ಷಣದ ಬಳಕೆಗೆ ಅಗತ್ಯವಿರದ ನಿಧಿಗಳನ್ನು ಹಾಗೂ ಮೀಸಲು ನಿಧಿಯನ್ನು ಸರ್ಕಾರದಿಂದ ಅನುಮೋದಿತವಾದ ಭದ್ರತೆಗಳಲ್ಲಿ ಅಥವಾ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕ್‌ನಲ್ಲಿ ಮಾತ್ರ ಹೂಡಿಕೆ ಮಾಡತಕ್ಕದ್ದು.
2. ಸಹಕಾರಿಗಳು ಹೆಚ್ಚಿನ ಮೊತ್ತವನ್ನು ಒಂದೇ ಬ್ಯಾಂಕ್/ಸರ್ಕಾರಿ ಭದ್ರತೆಯಲ್ಲಿ ಹೂಡಿಕೆ ಮಾಡುವ ಬದಲು ತಮ್ಮ ಸಹಕಾರಿಯಲ್ಲಿ ಲಭ್ಯವಿರುವ ಮೊತ್ತದ 1/10 ರಷ್ಟು ಮೊತ್ತವನ್ನು ಒಂದು ಬ್ಯಾಂಕ್‌ನಲ್ಲಿ ಹೊಡಿಕೆ ಮಾಡಿದ ಮೊತ್ತ ಆದರಿಂದ ಹೆಚ್ಚು ಬ್ಯಾಂಕ್/ಸರ್ಕಾರಿ ಭದ್ರತೆಗಳಲ್ಲಿ ಅಲ್ಪ ಮೊತ್ತವನ್ನು ಹೂಡಿಕೆ ಮಾಡುವುದು.
3. ಸೌಹಾರ್ದ ಸಹಕಾರಿಗಳು ಪ್ರಾಥಮಿಕ ಸಹಕಾರಿ/ಸಹಕಾರ ಸಂಘ/ಸಕ್ಕರೆ ಕಾರ್ಖಾನೆ ಅಥವಾ ಇತರೆ ಯಾವುದೇ ಸಂಸ್ಥೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
4. ಸೌಹಾರ್ದ ಸಹಕಾರಿಗಳು ಶೇರು ಮಾರುಕಟ್ಟೆ/ಮ್ಯೂಚುವಲ್ ಫಂಡ್/ಬಿಟ್ ಕಾಯಿನ್/ಕ್ರಿಪ್ಟೊ ಕರೆನ್ಸಿ/ಯುಲಿಫ್ ಲಿಂಕ್ಡ್ ಯೋಜನೆಗಳಲ್ಲಿ ಹೂಡಿಕೆ ಮಾಡತಕ್ಕದ್ದಲ್ಲ.
5. ಸೌಹಾರ್ದ ಸಹಕಾರಿಗಳು ಹೂಡಿಕೆಯಿಂದ ಬಂದಿರುವ ಲಾಭ/ನಷ್ಟವನ್ನು ಆದಾಯ/ವೆಚ್ಚ ತಖ್ತೆಯಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

**ಜಿ. ಸಾಲದ ಕುರಿತು ಮಾನದಂಡಗಳು :**

1. ಓರ್ವ ಸದಸ್ಯನಿಗೆ ನೀಡುವ ಸಾಲದ ಒಟ್ಟು ಮೊತ್ತವು ಸಹಕಾರಿಯ ಒಟ್ಟು ದುಡಿಯುವ ಬಂಡವಾಳದ ಶೇಕಡಾ 5 ಅನ್ನು ಮೀರುವಂತಿಲ್ಲ.
2. ಸಹಕಾರಿಯ ಎಲ್ಲಾ ನಿರ್ದೇಶಕರು ಹಾಗೂ ಅವರ ಎಲ್ಲಾ ಸಂಬಂಧಿಕರಿಗೆ ನೀಡಿದ ಸಾಲದ ಒಟ್ಟು ಮೊತ್ತವು ಸಹಕಾರಿಯ ದುಡಿಯುವ ಬಂಡವಾಳದ ಶೇಕಡಾ 10 ಅನ್ನು ಮೀರುವಂತಿಲ್ಲ.

– 'ಸಂಬಂಧಿ' ಎಂದರೆ ತಂದೆ, ತಾಯಿ, ಗಂಡ. ಹೆಂಡತಿ ಗಂಡುಮಕ್ಕಳು. ಗಂಡುಮಕ್ಕಳ ಹೆಂಡಂದಿರು, ಹೆಣ್ಣುಮಕ್ಕಳು, ಹೆಣ್ಣುಮಕ್ಕಳ ಗಂಡಂದಿರು, ಪಾಲು ಆಗದ ಅಣ್ಣತಮ್ಮಂದಿರುವ ಇವರನ್ನೆಲ್ಲ ಒಳಗೊಂಡಿರುತ್ತದೆ.

3. ಸಹಕಾರಿಯ ನಿರ್ದೇಶಕರು ಪಾಲ್ಗೊಂಡಿರುವ ಸಂಸ್ಥೆಗಳಿಗೆ ಭದ್ರತಾ ಸಾಲವನ್ನು ನೀಡಬಹುದಾಗಿದ್ದು, ಇಂತಹ ಸಾಲದ ಒಟ್ಟೂ ಮೊತ್ತವು ಸಹಕಾರಿಯ ದುಡಿಯುವ ಬಂಡವಾಳದ ಶೇಕಡಾ 10ನ್ನು ಮೀರತಕ್ಕದ್ದಲ್ಲ.

4. ಸದಸ್ಯನು ಹೊಂದಿರುವ ಠೇವಣಿ ಅಥವಾ ಬಂಗಾರ ಅಡಮಾನ ಸೇರಿದಂತೆ ತಕ್ಷಣ ನಗದೀಕರಣಗೊಳ್ಳಬಹುದಾದ ಭದ್ರತೆಗಳ ಆಧಾರದ ಮೇಲೆ ನೀಡಿದ ಸಾಲವನ್ನು ಮೇಲಿನ ಮೂರು ಪ್ರಕರಣಗಳಿಗೆ ಪರಿಗಣಿಸತಕ್ಕದ್ದಲ್ಲ.

5. ಯಾವುದೇ ಸದಸ್ಯನಿಗೆ ನೀಡುವ ಆಧಾರ ರಹಿತ ಸಾಲದ ಮೊತ್ತವು ರೂ.1,00,000/– ದಾಟುವಂತಿಲ್ಲ. ಆಧಾರ ರಹಿತ ಸಾಲ ನೀಡುವಾಗ ಕನಿಷ್ಠ ಇಬ್ಬರ ಜಾಮೀನಿನೊಂದಿಗೆ ಸಾಲ ನೀಡತಕ್ಕದ್ದು, ಯಾವುದೇ ಸದಸ್ಯನು ಇಬ್ಬರಿಗಿಂತ ಹೆಚ್ಚಿನ ಸದಸ್ಯರಿಗೆ ಜಾಮೀನು ನೀಡುವಂತಿಲ್ಲ. ಹಾಗೂ ಯಾವುದೇ ಹಂತದಲ್ಲಿ ಯಾವುದೇ ಸದಸ್ಯನ ಆಧಾರರಹಿತ ಸಾಲದ ಒಟ್ಟು ಬಾಧ್ಯತೆಯು ರೂ2,00,000/– ದಾಟುವಂತಿಲ್ಲ.

ಪರಂತು, ಸಂಪೂರ್ಣವಾಗಿ ವೇತನ ಆಧಾರಿತ ಸಾಲ ನೀಡುತ್ತಿರುವ ನೌಕರರ ಸೌಹಾರ್ದ ಸಹಕಾರಿಗಳಿಗೆ ಈ (5) ನಿಯಮ ಅನ್ವಯವಾಗತಕ್ಕದ್ದಲ್ಲ.

6. ಯಾವುದೇ ಸದಸ್ಯನು ಪಡೆದ ಅಥವಾ ಜಾಮೀನುದಾರನಾದ ಚಾಲ್ತಿ ಸಾಲ ಸುಸ್ತಿಯಾಗಿದ್ದಲ್ಲಿ ಅದೇ ವ್ಯಕ್ತಿಗೆ ಹೊಸ ಸಾಲ ನೀಡುವಂತಿಲ್ಲ.

### ಹೆಚ್. ಅನುತ್ಪಾದಕ ಆಸ್ತಿ :

| ಅವಧಿ | ಆಧಾರ/ಭದ್ರತಾ ರಹಿತ ಸಾಲ | ಆಧಾರ/ಭದ್ರತಾ ಸಹಿತ ಸಾಲ | |
|---|---|---|---|
| | | ಸುಸ್ಥಿರವಲ್ಲದ ಸಾಲ | ಸುಸ್ಥಿರವಾದ ಸಾಲ |
| ಒಂದು ವರ್ಷಕ್ಕಿಂತ ಕಡಿಮೆ | 100% | 50% | 30% |
| ಒಂದರಿಂದ ಎರಡು ವರ್ಷದ ಅವಧಿ | – | 80% | 50% |
| ಎರಡರಿಂದ ಮೂರು ವರ್ಷದ ಅವಧಿ | – | 100% | 75% |
| ಮೂರು ವರ್ಷಕ್ಕಿಂತ ಮೇಲ್ಪಟ್ಟ ಅವಧಿ | – | – | 100% |

1. ಯಾವುದೇ ಸಾಲವು ಮೂರು ತಿಂಗಳಿಗಿಂತ ಹೆಚ್ಚು ಅವಧಿಗೆ ಸುಸ್ತಿಯಾಗಿದ್ದಲ್ಲಿ ಅಂತಹ ಸಾಲವನ್ನು ಅನುತ್ಪಾದಕ ಆಸ್ತಿ ಎಂದು ವರ್ಗೀಕರಿಸತಕ್ಕದ್ದು.

2. ಆಧಾರ ಸಹಿತ ಸಾಲಕ್ಕೆ ಸಾಕಷ್ಟು ಭದ್ರತೆಯಿದ್ದಲ್ಲಿ ಅಂತಹ ಸಾಲವನ್ನು ಸುಸ್ಥಿರ ಸಾಲ ಎಂದೂ ಸಾಕಷ್ಟು ಭದ್ರತೆಯಿಲ್ಲದಿದ್ದಲ್ಲಿ ಸುಸ್ಥಿರವಲ್ಲದ ಸಾಲವೆಂದೂ ವರ್ಗೀಕರಿಸತಕ್ಕದ್ದು.

3. ಅನುತ್ಪಾದಕ ಆಸ್ತಿಗೆ ಈ ಕೆಳಗಿನ ಕೋಷ್ಟಕದಂತೆ ಪ್ರಾವಧಾನ ಕಲ್ಪಿಸತಕ್ಕದ್ದು. ಪರಂತು, ಈ ಕೋಷ್ಟಕದಂತೆ ಅನುತ್ಪಾದಕ ಆಸ್ತಿ ಪ್ರಾವಧಾನ ಇದುವರೆಗೆ ಕಲ್ಪಿಸದಿರುವ ಸಹಕಾರಿಗಳು ಸುತ್ತೋಲೆಯ ದಿನಾಂಕದಿಂದ ಎರಡು ವರ್ಷದ ಮಿತಿಗೊಳಪಟ್ಟು ಅಗತ್ಯ ಪ್ರಾವಧಾನವನ್ನು ಕಲ್ಪಿಸತಕ್ಕದ್ದು.

### ಐ. ಆರ್ಥಿಕ ಸಂಕಷ್ಟ ಎಂದು ಪರಿಗಣನೆ :

1. ಸಹಕಾರಿಯ ಕ್ರೋಢೀಕೃತ ನಷ್ಟವು ಯಾವುದೇ ಹಂತದಲ್ಲಿ ಸಹಕಾರಿಯ ಸ್ವಂತ ಬಂಡವಾಳದ ಶೇಕಡಾ 50 ಕ್ಕಿಂತ ಹೆಚ್ಚಾದಲ್ಲಿ.

2. ಸಹಕಾರಿಯ ಒಟ್ಟು ಠೇವಣಿಗಳ ಶೇಕಡಾ 5 ಕ್ಕಿಂತ ಕಡಿಮೆ ದ್ರವ್ಯಾಸ್ತಿ ಇರುವ ಸಹಕಾರಿ.

3. ಸಹಕಾರಿಯ ಅನುತ್ಪಾದಕ ಆಸ್ತಿಯ ಪ್ರಮಾಣವು ಒಟ್ಟು ಸಾಲಕ್ಕೆ ಶೇಕಡಾ 10 ದಾಟಿದಲ್ಲಿ.

– ಅಂತಹ ಸಹಕಾರಿಗಳನ್ನು ಆರ್ಥಿಕ ಸಂಕಷ್ಟದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ಈ ಸಹಕಾರಿಗಳು, ಆರ್ಥಿಕವಾಗಿ ಸಬಲರಾಗುವ ಕುರಿತು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ 3 ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

### ಜೆ. ತೀವ್ರ ನಿಗಾ ಇರಿಸಲಾಗುವ ಸಹಕಾರಿಗಳು :

1. ಸತತ ಮೂರು ವರ್ಷಗಳು ನಷ್ಟದಲ್ಲಿರುವ ಸಹಕಾರಿ

2. ಸಹಕಾರಿಯ ಕ್ರೋಢೀಕೃತ ನಷ್ಟವು ಯಾವುದೇ ಹಂತದಲ್ಲಿ ಸಹಕಾರಿಯ ಸ್ವಂತ ಬಂಡವಾಳಕ್ಕಿಂತ ಹೆಚ್ಚಾದಲ್ಲಿ.

3. ಆರ್ಥಿಕ ಸಂಕಷ್ಟದಲ್ಲಿರುವ ಸಹಕಾರಿಯು ಸತತ ಎರಡು ವರ್ಷಗಳು ಅದೇ ಸ್ಥಿತಿಯಲ್ಲಿ ಇದ್ದಲ್ಲಿ.

4. ಸಹಕಾರಿಯ ಅನುತ್ಪಾದಕ ಆಸ್ತಿಯ ಪ್ರಮಾಣವು ಶೇಕಡಾ 20 ದಾಟಿದಲ್ಲಿ.

– ಅಂತಹ ಸಹಕಾರಿಗಳನ್ನು ತೀವ್ರ ನಿಗಾದಲ್ಲಿರುವ ಸಹಕಾರಿಗಳೆಂದು ಪರಿಗಣಿಸಲಾಗುವುದು.

ಈ ಸಹಕಾರಿಗಳು, ತೀವ್ರ ನಿಗಾದಿಂದ ಹೊರಬರುವ ಕುರಿತು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

**ಕೆ. ದುರ್ಬಲ ಸಹಕಾರಿ**

1. ನೂತನವಾಗಿ ನೋಂದಾಯಿತವಾದ ಸಹಕಾರಿಗಳ ಸಂದರ್ಭದಲ್ಲಿ ಮೊದಲ ಎರಡು ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಕಂಡಿಕೆಗಳು ಅನ್ವಯವಾಗತಕ್ಕದ್ದಲ್ಲ.
2. ನೂತನ ಸಹಕಾರಿಯು ಮೂರನೇ ಆರ್ಥಿಕ ವರ್ಷಾಂತ್ಯಕ್ಕೆ ಲಾಭ ಗಳಿಸದಿದ್ದಲ್ಲಿ ಅಂತಹ ಸಹಕಾರಿಯನ್ನು ದುರ್ಬಲ ಸಹಕಾರಿಯೆಂದು ಪರಿಗಣಿಸಲಾಗುವುದು.
3. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಲ್ಲಿ ಚಟುವಟಿಕೆಯನ್ನು ನಡೆಸಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ಪರಿವರ್ತಿತಗೊಂಡ ಯಾವುದೇ ಸಹಕಾರಿಯು ಪರಿವರ್ತನೆಯ ನಂತರ ಸತತ ಎರಡು ವರ್ಷ ನಷ್ಟವನ್ನು ಅನುಭವಿಸಿದರೆ ಅಂತಹ ಸಹಕಾರಿಯನ್ನು ದುರ್ಬಲ ಸಹಕಾರಿ ಎಂದು ಗುರುತಿಸಲಾಗುವುದು.
4. ದುರ್ಬಲ ಸಹಕಾರಿಗಳು ದುರ್ಬಲತೆಯಿಂದ ಹೊರಬರಲು ಸೂಕ್ತ ಯೋಜನೆಯನ್ನು ರೂಪಿಸಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಸದರಿ ಯೋಜನೆಗಳು ಸರಿಯಾಗಿ ಜಾರಿಯಾಗುತ್ತಿರುವುದನ್ನು ಸಹಕಾರಿಯ ಮಂಡಲಿ ಅಥವಾ ಮಂಡಲಿಯಿಂದ ರಚಿತವಾದ ಉಪಸಮಿತಿಯು ಪ್ರತಿ ತಿಂಗಳಿಗೊಮ್ಮೆ ಪರಿಶೀಲಿಸತಕ್ಕದ್ದು. ಹಾಗೂ ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸತಕ್ಕದ್ದು.

**ಎಲ್. ಇತರೆ ಅಂಶಗಳು :**

1. ಸಹಕಾರಿಯು ಲಾಭ ಗಳಿಸಿದಾಗ ಸದಸ್ಯರಿಗೆ ನೀಡುವ ಲಾಭಾಂಶವು, ಶೇಕಡಾ 25ನ್ನು ಮೀರುವಂತಿಲ್ಲ.
2. ಸಹಕಾರಿಯ ಒಟ್ಟು ಆಡಳಿತಾತ್ಮಕ ವೆಚ್ಚವು ದುಡಿಯುವ ಬಂಡವಾಳದ ಶೇ.2 ಅನ್ನು ದಾಟುವಂತಿಲ್ಲ.
3. ಸಹಕಾರಿಯು ಯಾವುದೇ ರೂಪದಲ್ಲಿ ನೀಡುವ ದೇಣಿಗೆಯ ಮೊತ್ತವು ಸಹಕಾರಿಯು ಹಿಂದಿನ ಆರ್ಥಿಕ ವರ್ಷದಲ್ಲಿ ಗಳಿಸಿದ ನಿವ್ವಳ ಲಾಭದ ಶೇ.10ನ್ನು ಮೀರತಕ್ಕದ್ದಲ್ಲ.
4. ಸಹಕಾರಿಯು ಯಾವುದೇ ರಾಜಕೀಯ ಪಕ್ಷಕ್ಕೆ, ಮತೀಯ ನಂಬಿಕೆಯ ಸಂಸ್ಥೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಥವಾ ವಸ್ತುಗಳ ರೂಪದಲ್ಲಿ ಯಾವುದೇ ವಂತಿಗೆದೇಣಿಗೆಯನ್ನು ನೀಡತಕ್ಕದ್ದಲ್ಲ.
5. ಸಹಕಾರಿಗೆ ಸ್ಥಿರಾಸ್ತಿ(ನಿವೇಶನ/ಕಟ್ಟಡ) ಖರೀದಿಸುವುದಿದ್ದಲ್ಲಿ/ನಿರ್ಮಾಣ ಮಾಡುವುದಾದಲ್ಲಿ ಅದಕ್ಕಾಗಿ ಸಹಕಾರಿಯ ಕಟ್ಟಡ ನಿಧಿಯನ್ನು ಮಾತ್ರ ಉಪಯೋಗಿಸಬೇಕು. ಅಗತ್ಯವಿದ್ದಲ್ಲಿ, ಮೀಸಲು ನಿಧಿಯ ಶೇಕಡಾ 80 ಅನ್ನು ಮೀರದ ಮೊತ್ತವನ್ನು ಸಾಮಾನ್ಯ ಸಭೆಯ ಪೂರ್ವಾನುಮೋದನೆಯೊಡನೆ ಬಳಸಬಹುದು. ಈ ರೀತಿ ಬಳಸಿದಲ್ಲಿ, ಸದರಿ ಮೊತ್ತವನ್ನು ಮುಂದಿನ ವರ್ಷಗಳ ಲಾಭದಿಂದ ಭರ್ತಿ ಮಾಡತಕ್ಕದ್ದು. ಸಾಮಾನ್ಯ ಸಭೆಯಲ್ಲಿ, ಪ್ರತಿವರ್ಷ ನಿವ್ವಳ ಲಾಭದಲ್ಲಿ ಲಾಭಾಂಶ ವಿಂಗಡಣೆಗೂ ಪೂರ್ವದಲ್ಲಿ ಮೀಸಲು ನಿಧಿಗೆ ವರ್ಗಾಯಿಸಬೇಕಾದ ಮೊತ್ತದ ಕುರಿತು ಸ್ಪಷ್ಟವಾಗಿ ನಿರ್ಣಯಿಸಬೇಕು.
6. ಸಹಕಾರಿಗೆ ಸ್ಥಿರಾಸ್ತಿ(ನಿವೇಶನ/ಕಟ್ಟಡ) ಖರೀದಿ/ನಿರ್ಮಾಣಕ್ಕೆ ಅಗತ್ಯವಿದ್ದಲ್ಲಿ ಸಾಲ ಪಡೆಯಬಹುದಾಗಿದ್ದು, ಯಾವುದೇ ಕಾರಣಕ್ಕೂ ಶೇರು ಹಣ ಹಾಗೂ ಠೇವಣಿ ಹಣವನ್ನು ಬಳಸುವಂತಿಲ್ಲ.
7. ಈ ಸುತ್ತೋಲೆಗೆ ಸಂಬಂಧಪಟ್ಟಂತೆ, ಯಾವುದೇ ವರ್ಗದ ಸಹಕಾರಿಗಳಿಗೆ ಅಥವಾ ಯಾವುದೇ ಸಹಕಾರಿಗೆ ಸಂಬಂಧಿಸಿದಂತೆ, ಲಿಖಿತದಲ್ಲಿ ಸೂಕ್ತ ಕಾರಣವನ್ನು ದಾಖಲಿಸಿ, ಸುತ್ತೋಲೆಯ ಯಾವುದೇ ಅಂಶಗಳನ್ನು ಮಾರ್ಪಡಿಸಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಸಕ್ಷಮವಾಗಿರುತ್ತದೆ.

ಈ ಸುತ್ತೋಲೆಯು ಎಲ್ಲ ಪತ್ತಿನ ಚಟುವಟಿಕೆ ನಡೆಸುತ್ತಿರುವ (ವಿವಿದೋದ್ದೇಶ ಎಂದು ಹೆಸರಿಟ್ಟುಕೊಂಡು ಪತ್ತಿನ ಕಾರ್ಯಚಟುವಟಿಕೆ ನಡೆಸುವ ಸಹಕಾರಿಗಳು ಒಳಗೊಂಡಿವೆ) ಎಲ್ಲ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುತ್ತದೆ.

ಈ ಮಾನದಂಡಗಳನ್ನು ನನ್ನ ಮೊಹರು ಮತ್ತು ಸಹಿಯೊಂದಿಗೆ ಇಂದು ಅಂದರೆ ** ** **** ರಂದು ನೀಡಲಾಗಿದೆ.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ದ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

## ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆಗೆ ತಿದ್ದುಪಡಿಯಾಗಿದ್ದು, ದಿನಾಂಕ 11.02.2013ರಿಂದ ತಿದ್ದುಪಡಿ ಅಧಿನಿಯಮವು ಜಾರಿಗೆ ಬಂದಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, ಕಲಂ 23ಎರಂತೆ ಯಾವುದೇ ಸಹಕಾರಿಯು ತನ್ನ ಕಾರ್ಯಕ್ಷೇತ್ರದಲ್ಲಿ ಸದಸ್ಯರ ಉಪಯೋಗಕ್ಕಾಗಿ ಮಾತ್ರ ಶಾಖೆಗಳನ್ನು, ಉಪ ಶಾಖೆಗಳನ್ನು, ಪಾವತಿ ಕಛೇರಿಗಳನ್ನು ಅಥವಾ ಯಾವುದೇ ಹೆಸರಿನಿಂದ ಕರೆಯಲ್ಪಡುವ ಕಛೇರಿಗಳನ್ನು ಸಂಯುಕ್ತ ಸಹಕಾರಿಯ ಮತ್ತು ತನ್ನ ಸಾಮಾನ್ಯ ಸಭೆಯ ಪೂರ್ವಾನುಮತಿಯೊಡನೆ ಆರಂಭಿಸಬಹುದು. ಈ ಹಿನ್ನೆಲೆಯಲ್ಲಿ ಯಾವುದೇ ಸೌಹಾರ್ದ ಸಹಕಾರಿಯು ಶಾಖೆಯನ್ನು ತೆರೆಯುವ ಪ್ರಸ್ತಾವನೆಯನ್ನು ಸಂಯುಕ್ತ ಸಹಕಾರಿಯ ಅನುಮೋದನೆಗೆ ಮಂಡಿಸುವಾಗ ಅನುಸರಿಸಬೇಕಾದ ಮಾನದಂಡಗಳು, ಶಾಖೆಗೆ ಅನುಮತಿ ನೀಡುವಾಗ ಸಂಯುಕ್ತ ಸಹಕಾರಿಯು ಪರಿಗಣಿಸುವ ಅಂಶಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳ ಕುರಿತು ಸಂಯುಕ್ತ ಸಹಕಾರಿಯು ನೀಡಿರುವ ಸುತ್ತೋಲೆಗೆ ಅಗತ್ಯ ಬದಲಾವಣೆಗಳನ್ನು ಮಾಡಿ ಪರಿಷ್ಕೃತ ಮಾನದಂಡಗಳನ್ನು ಈ ಕೆಳಗಿನಂತೆ ರೂಪಿಸಲಾಗಿದೆ.

### ಶಾಖಾ ಅನುಮತಿ ನೀಡುವಾಗ ಪರಿಗಣಿಸಬೇಕಾದ ಮಾನದಂಡಗಳು ಮತ್ತು ಸಲ್ಲಿಸಬೇಕಾದ ದಾಖಲೆಗಳು.

### ಕ.ಸೌ.ಸ. ಅಧಿನಿಯಮ, 1997ರ ಕಲಂ 23(ಎ) ಮತ್ತು 53 (7) (ಎ) ಹಾಗೂ (ಎಚ್) ಅಡಿ

ಸಂಖ್ಯೆ : --    ದಿನಾಂಕ: --/--/----

ಶಾಖೆ ತೆರೆಯಲು ಅನುಮತಿ ನೀಡಲು ಮಾನದಂಡಗಳು

1. ಹಿಂದಿನ ಸತತ ಎರಡು ವರ್ಷ ಲಾಭದಲ್ಲಿರಬೇಕು.
2. ಶಾಖೆ ಆರಂಭಿಸಲು ಅನುಮತಿ ಕೋರಿಕೆ ಜೊತೆಯಲ್ಲಿ ಸಲ್ಲಿಸಬೇಕಾದ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರಬೇಕು.
3. ಈಗಾಗಲೇ ಶಾಖೆಗಳಿದ್ದಲ್ಲಿ ಶೇ.20ಕ್ಕಿಂತ ಹೆಚ್ಚು ಶಾಖೆಗಳು ನಷ್ಟದಲ್ಲಿರಬಾರದು.
4. ಓವರ್ ಡ್ಯೂ ಪ್ರಮಾಣವೂ ಸಾಲ ಮತ್ತು ಮುಂಗಡಗಳ ಶೇ.15ನ್ನು ಮೀರಿರಬಾರದು ಮತ್ತು ಸ್ವಂತ ಬಂಡವಾಳದ ಶೇ.50ನ್ನು ಮೀರಿರಬಾರದು.
5. ಪ್ರಸ್ತುತ ಇರುವ ಲಾಭವು ಪ್ರಸ್ತಾವಿತ ಶಾಖೆಯ ವೆಚ್ಚವನ್ನು ಭರಿಸಲು ಶಕ್ತವಾಗಿರಬೇಕು.
6. ಯಾವುದೇ ವಿಚಾರಣೆ ಬಾಕಿ ಇರಬಾರದು.
7. ಶಾಸನಬದ್ಧ ಕರ್ತವ್ಯಗಳನ್ನು ನಿಗದಿತ ಸಮಯದಲ್ಲಿ ಪೂರೈಸಿರಬೇಕು. (ಲೆಕ್ಕಪರಿಶೋಧನೆ, ಸಾಮಾನ್ಯ ಸಭೆ, ಚುನಾವಣೆ, ನಿಬಂಧಕರಿಗೆ/ಸಂಯುಕ್ತ ಸಹಕಾರಿಗೆ ವರದಿ ಸಲ್ಲಿಸುವುದು, ಸಂಯುಕ್ತ ಸಹಕಾರಿಗೆ ವಾರ್ಷಿಕ ಶುಲ್ಕ/ಶಿಕ್ಷಣ ನಿಧಿ ಸಲ್ಲಿಕೆ ಇತ್ಯಾದಿ)
8. ಶಾಖೆ ತೆರೆಯುವ ಪ್ರದೇಶದಲ್ಲಿ ಸಹಕಾರಿಯು ಕನಿಷ್ಠ 100 ಸದಸ್ಯರನ್ನು ಹೊಂದಿರತಕ್ಕದ್ದು.
9. ಪ್ರತಿ ಶಾಖೆಗೆ ಇರಬೇಕಾದ ಸ್ವಂತ ಬಂಡವಾಳ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೂ.30 ಲಕ್ಷ, ಜಿಲ್ಲಾ ಕೇಂದ್ರಗಳಿಗೆ ರೂ.20 ಲಕ್ಷ, ಇತರೆ ಕೇಂದ್ರಗಳಿಗೆ ರೂ.10 ಲಕ್ಷ)

**ಶಾಖಾ ಅನುಮತಿಗೆ ಪರಿಗಣಿಸಬಹುದಾದ ಅಂಶಗಳು.**

1. ಮೊದಲ ಐದು ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ –

1) ಪ್ರತಿ ಶಾಖೆಗೆ ಇರಬೇಕಾದ ಸ್ವಂತ ಬಂಡವಾಳವು ಮಾನದಂಡಗಳಲ್ಲಿ ನಿಗದಿಪಡಿಸುವ ಮೊತ್ತದ ಶೇ.50 ಆಗಿರತಕ್ಕದ್ದು.

2) ನೋಂದಣಿಯಾಗಿ ಮೂರು ವರ್ಷ ಪೂರ್ಣಗೊಂಡಿರುವ ಸಹಕಾರಿಗೆ ಸಂಬಂಧಿಸಿದಂತೆ ಹಿಂದಿನ ಆರ್ಥಿಕ ವರ್ಷದಲ್ಲಿ ಲಾಭದಲ್ಲಿರತಕ್ಕದ್ದು.

3) ಮೇಲ್ಕಂಡ ಮಾನದಂಡಗಳ ಉಳಿದ ಅಂಶಗಳು ಯಥಾವತ್ತಾಗಿ ಅನ್ವಯವಾಗತಕ್ಕದ್ದು.

2. ಆರರಿಂದ ಇಪ್ಪತ್ತೈದರವರೆಗಿನ ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ, ಈ ಮೇಲ್ಕಂಡ ಎಲ್ಲ ನಿಬಂಧನೆಗಳು ಯಥಾವತ್ತಾಗಿ ಅನ್ವಯವಾಗತಕ್ಕದ್ದು.

3. ಇಪ್ಪತ್ತಾರರಿಂದ ಐವತ್ತರವರೆಗಿನ ಶಾಖೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ – ಮೇಲ್ಕಂಡ ಎಲ್ಲ ಮಾನದಂಡಗಳೊಂದಿಗೆ, ಸಂಯುಕ್ತ ಸಹಕಾರಿಯು ನೀಡಿರುವ ಆರ್ಥಿಕ ಸಬಲತೆಯ ಮಾನದಂಡಗಳನ್ನು ಪೂರ್ಣವಾಗಿ ಪಾಲಿಸಿರತಕ್ಕದ್ದು.

4. ಇ ಸ್ಟಾಂಪಿಂಗ್ ಸೇರಿದಂತೆ ಯಾವುದೇ ಸೇವಾ ಚಟುವಟಿಕೆಗಳ ಉದ್ದೇಶಕ್ಕಾಗಿ ಮಾತ್ರ ಆರಂಭಿಸುವ ಶಾಖೆಗಳಿಗೆ ಅನುಮತಿ ನೀಡುವಾಗ ಸೇವಾ ಚಟುವಟಿಕೆ ಹೊರತುಪಡಿಸಿ ಪತ್ತಿನ ಚಟುವಟಿಕೆ ಸೇರಿದಂತೆ ಸಹಕಾರಿಯ ಇನ್ನಿತರ ಚಟುವಟಿಕೆ ನಡೆಸದಿರುವ ನಿಬಂಧನೆಯೊಂದಿಗೆ ಈ ಮಾನದಂಡಗಳಿಂದ ವಿನಾಯತಿ ನೀಡುವ ಅಧಿಕಾರ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಕ್ಷಮವಾಗಿರುತ್ತದೆ.

5. ಒಂದು ಸಹಕಾರಿಗೆ ಯಾವುದೇ ಸಹಕಾರ ವರ್ಷದಲ್ಲಿ ಐದಕ್ಕಿಂತ ಹೆಚ್ಚು ಶಾಖೆಗೆ ಅನುಮತಿ ನೀಡತಕ್ಕದ್ದಲ್ಲ ಹಾಗೂ ಸಹಕಾರಿಯ ಒಟ್ಟೂ ಶಾಖೆಗಳ ಸಂಖ್ಯೆಯು ಗರಿಷ್ಠ ಐವತ್ತನ್ನು ಮೀರತಕ್ಕದ್ದಲ್ಲ.

6. ಯಾವುದೇ ಪ್ರದೇಶದಲ್ಲಿ ಸೌಹಾರ್ದ ಸಹಕಾರಿಗಳು ಅಥವಾ ಸೌಹಾರ್ದ ಸಹಕಾರಿಯ ಶಾಖೆಗಳು ಇಲ್ಲದಿದ್ದಲ್ಲಿ, ಅಂತಹ ಪ್ರದೇಶಗಳಿಗೆ ಸಂಬಂಧಿಸಿದಂತೆ ಮೇಲಿನ ಯಾವುದೇ ನಿಬಂಧನೆಗಳಿಂದ ವಿನಾಯಿತಿ ನೀಡಿ ಶಾಖೆ ತೆರೆಯಲು ಅನುಮತಿ ನೀಡುವ ಅಧಿಕಾರ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಸಕ್ಷಮವಾಗಿರುತ್ತದೆ.

7. ಸಂಯುಕ್ತ ಸಹಕಾರಿಯು ಅನುಮತಿ ಪತ್ರ ನೀಡಿದ ದಿನಾಂಕದಿಂದ ಆರು ತಿಂಗಳ ಒಳಗೆ ಕಾರ್ಯಾರಂಭ ಮಾಡದ ಶಾಖೆಗಳ ಅನುಮತಿ ರದ್ದುಗೊಂಡಿದೆ ಎಂದು ಭಾವಿಸತಕ್ಕದ್ದು.

**ಶಾಖೆ ತೆರೆಯಲು ಅನುಮತಿ ಕೋರುವ ಪತ್ರದ ಜೊತೆ ಸಲ್ಲಿಸಬೇಕಾದ ಮಾಹಿತಿ/ದಾಖಲೆಗಳು**

1. ಶಾಖೆ ತೆರೆಯುಲು ಉದ್ದೇಶಿಸಿರುವ ಸ್ಥಳದ ವಿವರ.
2. ಸಹಕಾರಿಯ ಒಟ್ಟು ಸದಸ್ಯರ ಸಂಖ್ಯೆ.
3. ಸಹಕಾರಿಯ ಹಿಂದಿನ ಎರಡು ವರ್ಷಗಳ ಲೆಕ್ಕಪರಿಶೋಧಿತ ಆಸ್ತಿ–ಜವಾಬ್ದಾರಿ ತಃಖ್ತೆ, ಲಾಭ–ಹಾನಿ ತಃಖ್ತೆ ಮತ್ತು ಜಮಾ–ಖರ್ಚು ತಃಖ್ತೆ(ಶೆಡ್ಯೂಲುಗಳ ಸಹಿತ).
4. ಹಿಂದಿನ ಎರಡು ವರ್ಷಗಳಲ್ಲಿ ಸದಸ್ಯರಿಗೆ ಹಂಚಿಕೆ ಮಾಡಿರುವ ಲಾಭಾಂಶ.
5. ಹಿಂದಿನ ಎರಡು ವರ್ಷಗಳ ಓವರ್‌ಡ್ಯೂ ಪ್ರಮಾಣ.
6. ಸ್ವಂತ ಬಂಡವಾಳ (ಪಾವತಿಯಾದ ಶೇರು ಬಂಡವಾಳ + ಎಲ್ಲಾ ರೀತಿಯ ಮೀಸಲು ನಿಧಿಗಳು – ಕೂಡಿಬಿದ್ದ ನಷ್ಟಗಳು).
7. ಯಾವುದೇ ರೀತಿಯ ವಿಚಾರಣೆ ನಡೆಯುತ್ತಿದೆಯೇ? ಇದ್ದಲ್ಲಿ ವಿವರ.
8. ಈಗಿರುವ ಒಟ್ಟು ಶಾಖೆಗಳ ವಿವರ (ಪ್ರತಿ ಶಾಖೆಯ ವಿಳಾಸ, ಆರಂಭಿಸಿದ ದಿನಾಂಕ, ಹಿಂದಿನ ಎರಡು ವರ್ಷಗಳ ಲಾಭ/ ನಷ್ಟ, ಒಟ್ಟು ಸಿಬ್ಬಂದಿಗಳ ಸಂಖ್ಯೆ ಇತ್ಯಾದಿ ವಿವರಗಳು).
9. ಪ್ರಸ್ತಾವಿತ ಶಾಖೆಯನ್ನು ಆರಂಭಿಸಲು ಆಗಬಹುದಾದ ಬಂಡವಾಳ ವೆಚ್ಚ (ಕಛೇರಿ ಶೇವಣಿ, ಪೀಠೋಪಕರಣಗಳು, ಯಂತ್ರೋಪಕರಣಗಳು ಇತ್ಯಾದಿ).
10. ಪ್ರಸ್ತಾವಿತ ಶಾಖೆಯ ಮುಂದಿನ ಎರಡು ವರ್ಷಗಳ ಅಂದಾಜು ಖರ್ಚು–ವೆಚ್ಚಗಳು (ಸಿಬ್ಬಂದಿ ವೆಚ್ಚ, ಬಾಡಿಗೆ, ವಿದ್ಯುತ್, ದೂರವಾಣಿ, ಸ್ಟೇಷನರಿ ಇತ್ಯಾದಿ).
11. ಪ್ರಸ್ತಾವಿತ ಶಾಖೆಯ ಮುಂದಿನ ಎರಡು ವರ್ಷದ ಅಂದಾಜು ವ್ಯವಹಾರ.
12. ಪ್ರಸ್ತಾವಿತ ಶಾಖೆಯ ಸ್ಥಾನದಿಂದ ಈಗಿರುವ ಹತ್ತಿರದ ಶಾಖೆಗೆ ಇರುವ ದೂರ.
13. ಶಾಖೆ ಆರಂಭಿಸಲು ಅನುಮತಿ ಪಡೆದ ಸಾಮಾನ್ಯ ಸಭೆಯ ನೋಟೀಸ್ ಮತ್ತು ನಡವಳಿಗಳ ದೃಢೀಕೃತ ಪ್ರತಿಗಳು.

ಈ ಮಾನದಂಡಗಳನ್ನು ನನ್ನ ಮೊಹರು ಮತ್ತು ಸಹಿಯೊಂದಿಗೆ ಇಂದು ಅಂದರೆ ** ** **** ರಂದು ನೀಡಲಾಗಿದೆ.

## ಸಂಯುಕ್ತ ಸಹಕಾರಿಯ ಪ್ರಕಟಣೆ ಪುಸ್ತಕಗಳ ವಿವರ

| ಕ್ರ.ಸಂ. | ಪುಸ್ತಕದ ಹೆಸರು | ಬೆಲೆ |
|---|---|---|
| 1 | ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 | 100/– |
| 2 | The Karnataka Souharda Sahakari Act 1997 | 75/– |
| 3 | ಸೌಹಾರ್ದ ಸಹಕಾರಿ ಮಾರ್ಗದರ್ಶಿ | 15/– |
| 4 | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಉಪವಿಧಿ | 30/– |
| 5 | ಸೌಹಾರ್ದ ಪತ್ತಿನ ಸಹಕಾರಿ ಮಾದರಿ ಉಪವಿಧಿ | 25/– |
| 6 | ಸೌಹಾರ್ದ ಸಹಕಾರಿಗಳ ಮಾದರಿ ಸಾಲ ಮತ್ತು ಠೇವಣಾತಿ ನಿಯಮಗಳು | 20/– |
| 7 | ಸೌಹಾರ್ದ ಸಹಕಾರಿಗಳಿಗಾಗಿ ನೌಕರರ ಮಾದರಿ ಸೇವಾ ನಿಯಮಗಳು | 15/– |
| 8 | ಸೌಹಾರ್ದ ಸಹಕಾರಿಗಳಿಗಾಗಿ ಮಾಹಿತಿ ಕೈಪಿಡಿ | 15/– |
| 9 | ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾ ನಿಯಮಗಳು | 25/– |
| 10 | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಾಕರ ಕೈಪಿಡಿ | 15/– |
| 11 | ಕರ್ನಾಟಕ ರಾಜ್ಯದ ವಿಶಿಷ್ಠ ಸಹಕಾರ ಸಂಸ್ಥೆಗಳು | 40/– |
| 12 | Special Co-opearative Societies of Karnataka | 25/– |
| 13 | ಇ–ಸ್ಟಾಂಪಿಂಗ್ ಮಾಹಿತಿ ಕೈಪಿಡಿ | 50/– |
| 14 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯದ ತೀರ್ಪುಗಳು ಸಾರಾಂಶ | 100/– |
| 15 | ಸಹಕಾರ ಸಂಸ್ಥೆಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು | 50/– |
| 16 | Karnataka High Court Judgements Related to Co-operative Sector | 200/– |
| 17 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ಹಕ್ಕು ಕಾಯ್ದೆಯನ್ವಯ ನೀಡಲಾದ ನ್ಯಾಯಾಲಯಗಳ ತೀರ್ಪುಗಳ ಸಾರಂಶ | 100/– |
| 18 | ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ನ್ಯಾಯಾಲಯಗಳ ತೀರ್ಪುಗಳ ಸಾರಂಶ ಭಾಗ – 2 | 100/– |
| 19 | ಸಹಕಾರಿಗಳಿಗೆ ಉಪಯುಕ್ತವಾದ ಮಾದರಿಗಳ ಕೈಪಿಡಿ | 50/– |
| 20 | ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಸಂಬಂಧಿತ ತೀಪುಗಳು | 120/– |
| 21 | Karnataka High Court Judgements Related to Co-operative Sector Vol -2 | 400/– |
| 22 | Supreme Court Judgement Related to Co-operative Sector Volume - 1 | 150/– |
| 23 | Supreme Court Judgement Related to Co-operative Sector Volume - 2 | 500/– |
| 24 | ಸ್ವಾಭಿಮಾನಿ ಸಹಕಾರಿ ವಾರ್ಷಿಕ ಚಂದಾ 1 ವರ್ಷಕ್ಕೆ | 100/– |
| 25 | ಸಹಕಾರ ಮತ್ತು ಬ್ಯಾಂಕಿಂಗ್ ಮೆನೆಜಮೆಂಟ್ ಡಿಪ್ಲೋಮಾ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಉತ್ತರಗಳು | 300/– |
| 26 | ವಿಷಯ–01 – ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ | 250/– |
| 27 | ವಿಷಯ–02 – ಸಹಕಾರಿ ಪತ್ತು ನಿರ್ವಹಣೆ | 250/– |
| 28 | ವಿಷಯ–03 – ಬ್ಯಾಂಕಿಂಗ್ ಮೂಲ ಮಾಹಿತಿ | 250/– |
| 29 | ವಿಷಯ–04 – ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು | 250/– |
| 30 | ವಿಷಯ–05 – ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ | 250/– |
| 31 | ವಿಷಯ–06 – ಮಾಹಿತಿ ತಂತ್ರಜ್ಞಾನ | 250/– |
| 32 | ಸಾಲ ವಸೂಲಾತಿ ಹಾಗೂ ದಾಖಲಾತಿಗಳ ನಿರ್ವಹಣೆ ಮತ್ತು ಭಾರತದ ಸಂವಿಧಾನ, ಅರ್ಥ, ಆಶಯ ಹಾಗೂ ಪ್ರಮುಖ ಅಂಶಗಳು | 150/– |

# ಉದ್ಘಾಟನೆ




## ಸಹಕಾರದಿಂದ ಶೋಷಣೆ ಮುಕ್ತ ಸಮಾಜ ನಿರ್ಮಾಣ ಸಾಧ್ಯ – ಗುರುನಾಥ್ ಜ್ಯಾಂತಿಕರ್

**ಬೀದರ** : ಸಹಕಾರ ಕ್ಷೇತ್ರದಿಂದ ಮಾತ್ರ ಶೋಷಣೆ ಮುಕ್ತ ಸಮಾಜ ನಿರ್ಮಾಣದ ಸಾಧ್ಯವಿದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಅಭಿಪ್ರಾಯಪಟ್ಟರು.

ದಿನಾಂಕ 12–07–2020 ರಂದು ಬೀದರ ನಗರದ ಶಿವನಗರದಲ್ಲಿ ಕರ್ನಾಟಕ ಲಿಂಗಾಯತ ಪತ್ತಿನ ಸೌಹಾರ್ದ ಸಹಕಾರಿ ನಿ, ಬೀದರ ಇದನ್ನು ಉದ್ಘಾಟಿಸಿ ಮಾತನಾಡಿದರು. ಸಹಕಾರ ಕ್ಷೇತ್ರ ವಿಶಾಲವಾದ ಕ್ಷೇತ್ರವಾಗಿದೆ ರೈತರು, ಕುಲಿಕಾರ್ಮಿಕರು, ವ್ಯಾಪಾರಿಗಳು, ಮಹಿಳೆಯರು ಸೇರಿದಂತೆ ಎಲ್ಲರೂ ಜತೆಗೂಡಿ ಕೆಲಸ ಮಾಡಿದಲ್ಲಿ ಸಮೃದ್ಧ ಮತ್ತು ಶೋಷಣ ಮುಕ್ತ ಸಮಾಜ ಕಟ್ಟಬಹುದಾಗಿದೆ. ಸಹಕಾರ ಸಂಸ್ಥೆಗಳ ಯಶಸ್ಸು ಅದರ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ ಅವಲಂಬಿಸಿದೆ ಈ ಎರಡು ಜನರು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವಂತೆ ಸಲಹೆ ನೀಡಿದರು.

ಸಹಕಾರಿಗಳು ಕಾಲ ಕಾಲಕ್ಕೆ ತರಬೇತಿ ಮಾರ್ಗದರ್ಶನ ಪಡೆಯುವ ಮೂಲಕ ಗುಣಮಟ್ಟದ ಸಹಕಾರಿಗಳಾಗಿ ಕಾರ್ಯನಿರ್ವಹಿಸಿ ಜಿಲ್ಲೆಗೆ ಮಾದರಿ ಸೌಹಾರ್ದ ಸಹಕಾರಿಯಾಗಿ ಸದಸ್ಯರ ಮೆಚ್ಚುಗೆಗೆ ಪಾತ್ರವಾಗಲಿ ಎಂದು ಶುಭ ಹಾರೈಸಿದರು.

ಸಭೆಯಲ್ಲಿ ಉಪಸ್ಥಿತರಿದ ಗ್ರಾಮೀಣ ಕೈಗಾರಿಕೆಗಳ ಇಲಾಖೆಯ ಉಪನಿರ್ದೇಶಕರಾದ ಶ್ರೀ ರಮೇಶ ಮಠಪತಿ ಮಾತನಾಡಿ ಸಹಕಾರದ ಬೇರುಗಳು ಬಸವಣ್ಣನವರ ಕಾಯಕ, ದಾಸೋಹ ತತ್ವದಲ್ಲಿ ಅಡಗಿದೆ ಎಲ್ಲ–ರಿಗಾಗಿ ನಾನು, ಎಲ್ಲರೂ ನನಗಾಗಿ ಎನ್ನುವುದು ಸಹಕಾರದ ಮೂಲ ಮಂತ್ರವಾಗಿದೆ ಎಂದು ತಿಳಿಸಿದರು.

ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಹಿರಿಯರಾ ಶ್ರೀ ಮಾಣಿಕಪ್ಪ ಗೋರನಾಳೆ ವಹಿಸಿದರು. ವೇದಿಕೆಯ ಮೇಲೆ ಬಸವಗಿರಿಯ ಲಿಂಗಾಯತ ಮಹಾಮಠದ ಪ್ರಭುದೇವರು ಸಾನಿಧ್ಯ ವಹಿಸಿದರು. ಸಹಕಾರ ಇಲಾಖೆಯ ಸಹಕಾರ ಅಭಿವೃದ್ಧಿ ಅಧಿಕಾರಿ ಬಿ.ಎಚ್.ಸಂಗಮ್ ಸಹಕಾರಿಗಳಾದ ಶ್ರೀ ಬಸವರಾಜ ಶೇರಿಕಾರ, ಸದಸ್ಯರು, ಸಿಬ್ಬಂದಿವರ್ಗ ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತವನ್ನು ವೈಜೀನಾಥ ಹುಣಚಕೇರಿ, ನಿರೂಪಣೆಯನ್ನು ಹಾವಯ್ಯ ಸ್ವಾಮಿ ನಡೆಸಿಕೊಟ್ಟರು, ಬಸವಕಿರಣ ವಂದಿಸಿದರು.



**ಮಂಡ್ಯ** : ದಿನಾಂಕ 03.07.2020 ರಂದು ಮಂಡ್ಯ ತಾಲ್ಲೂಕು ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಪ್ರಥಮ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಉದ್ಘಾಟನೆಯನ್ನು ಶ್ರೀ ನಂದೀಶ್, ಮುಖ್ಯ ಪ್ರವರ್ತಕರು ನೇರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ಎ.ಸಿ ರಮೇಶ್ ರವರು ಹಾಗೂ ಎಲ್ಲಾ ಪ್ರವರ್ತಕರು ಉಪಸ್ಥಿತರಿದ್ದರು.




**ಚಾಮರಾಜನಗರ** : ದಿನಾಂಕ 06.07.2020ರಂದು ಸಾಮಾಜಿಕ ಅಂತರದಲ್ಲಿ ಶ್ರೀ ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಸರ್ವಸದಸ್ಯರ ಮಹಾಸಭೆಯ ಉದ್ಘಾಟನೆಯನ್ನು ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ ರವರು ನೇರವೇರಿಸಿದರು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಹಕಾರಿ ಅಧ್ಯಕ್ಷರಾದ ಶ್ರೀಬಾಬು ರಾಮಸಮುದ್ರ ವಹಿಸಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರು ಉಪಸ್ಥಿತರಿದ್ದರು.



**ಮಂಗಳೂರು** : ದಿನಾಂಕ 08/07/2020 ರಂದು ಮಿರಾಕಲ್ಸ್ ಆಫ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ನಿಯಮಿತ "ಕ್ರಿಸ್ಟಲ್ ಆರ್ಕ್" ಕೆನರಾಬ್ಯಾಂಕ್ ಮುಂಭಾಗ, ಬಲ್ಮಠ ರಸ್ತೆ ಮಿಲಾಗ್ರಿಸ್ ಮಂಗಳೂರು ಇದರ ನೂತನ ಕಛೇರಿಯ ಉದ್ಘಾಟನೆಯನ್ನು ವಂದನೀಯ ಗುರುಗಳು ಡಾ॥ ಆಲೋಶಿಯಸ್ ಪಾವ್ಲ್ ಡಿ'ಸೋಜರವರ ಅಮೃತ ಹಸ್ತದಿಂದ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ರೆ. ಫಾದರ್ ಜೋಸೆಫ್ ಜೆರಾಲ್ಡ್ ಲೋಬೋ, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ಇಕ್ಬಾಲ್ ಸಹಕಾರಿಯ ಉಪಾಧ್ಯಕ್ಷರು ಸಿರಾಜುದ್ದೀನ್ ಶೇಖಾ, ಸಹಕಾರಿಯ ಸಿಬ್ಬಂದಿಗಳು ಹಾಗೂ ಸದಸ್ಯರು, ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಗ್ರಾಹಕರಿಗೆ ಸಹಕಾರಿಯ ಅಧ್ಯಕ್ಷರಾದ ಜ್ಯೂಸ್ ಪಾಲ್ ಬಿ ವೇಗಸ್‌ರವರು ಧನ್ಯವಾದ ತಿಳಿಸಿದರು.

## 5ನೇ ವಾರ್ಷಿಕ ಸಾಮಾನ್ಯ ಸಭೆ




**ಚಾಮರಾಜನಗರ** : ದಿನಾಂಕ 24.07.2020 ರಂದು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ 2019-20ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಸಾಮಾಜಿಕ ಅಂತರ, ಸ್ಯಾನಿಟೈಜರ್ ಮತ್ತು ಮಾಸ್ಕ್ ಧರಿಸಿ ನಡೆಸಲಾಯಿತು. ಸದಸ್ಯರಿಗೆ ಶೇ.10% ಡಿವಿಡೆಂಡ್ ನೀಡಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಬಾಲಸುಬ್ರಮಣ್ಯ, ಉಪಾಧ್ಯಕ್ಷರಾದ ಶ್ರೀ ಸಿ.ಪಿ ಪದ್ಮಪ್ರಸಾದ್ ಮತ್ತು ನಿರ್ದೇಶಕರಾದ ಚಿದಾನಂದ ಗಣೇಶ್, ಆಡಳಿತ ಮಂಡಲಿ ಸದಸ್ಯರು ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಂಕೀರ್ತನ್ ಉಪಸ್ಥಿತರಿದ್ದರು.



**ಮುಲ್ಕಿ** : ಶ್ರೀ ಬಪ್ಪನಾಡು ಸೌಹಾರ್ದ ಸಹಕಾರಿ (ನಿ.) ಇದರ ಮುಲ್ಕಿ ಸ್ಥಳಾಂತರಿತ ಶಾಖೆಯ ಉದ್ಘಾಟನೆಯನ್ನು ಶಾಸಕರಾದ ಶ್ರೀ ಉಮಾನಾಥ ಕೋಟ್ಯಾನ್ ಇವರು ನೆರವೇರಿಸಿದರು ಹಾಗೂ 'ಇ-ಸ್ಟಾಂಪಿಂಗ್' ಸೇವೆ ಹಾಗೂ ನಗದು ಪತ್ರವನ್ನು ಧರ್ಮದರ್ಶಿ ಶ್ರೀಹರಿಕೃಷ್ಣ ಪುನರೂರು ಇವರು ಬಿಡುಗಡೆ ಗೊಳಿಸಿದರು.

ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿದ ಶಾಸಕರಾದ ಶ್ರೀ ಉಮಾನಾಥ ಕೋಟ್ಯಾನ್‌ರವರು ಇನ್ನೂ ಹೆಚ್ಚಿನ ವ್ಯವಹಾರವನ್ನು ಮಾಡಿ ಜಿಲ್ಲೆಯಾದ್ಯಂತ ಶಾಖೆಯನ್ನು ಹೊಂದಿ ಜಿಲ್ಲೆಯ ಜನರಿಗೆ ಹೆಚ್ಚಿನ ಸೇವೆಯನ್ನು ನೀಡುವಂತಾಗಲಿ ಎಂದು ಶುಭಹಾರೈಸಿದರು. ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು ಮಾತನಾಡಿ ಸಹಕಾರಿಯಿಂದ ಸದಸ್ಯರು ಹೆಚ್ಚಿನ ಸೇವೆಯನ್ನು ಪಡೆದು ಹೆಚ್ಚಿನ ಠೇವಣಿಯನ್ನು ಹೂಡಿಕೆ ಮಾಡಿ ಸಂಸ್ಥೆಯೊಂದಿಗೆ ಸಹಕಾರಿಯು ಉನ್ನತಮಟ್ಟದಲ್ಲಿ ಬೆಳೆಯುವಂತಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂಪತ್ ಕಾರ್ನಾಡ್ ಇವರು ಮಾತನಾಡಿ ಸಹಕಾರಿಯಲ್ಲಿ ಸದಸ್ಯರ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ಮುಲ್ಕಿ ಮತ್ತು ಹಳೆಯಂಗಡಿ ಶಾಖೆಯಲ್ಲಿ 'ಇ-ಸ್ಟಾಂಪಿಂಗ್' ಮತ್ತು 'ಆರ್.ಟಿ.ಸಿ' ಸೇವೆಯನ್ನು ನೀಡುತ್ತಿದ್ದು ಸದಸ್ಯರು ಮತ್ತು ಸಾರ್ವಜನಿಕರು ಇದರ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ವಿನಂತಿಸಿದರು ಹಾಗೂ ಕೊರೋನಾ ಸಾಂಕ್ರಮಿಕ ಕಾಯಿಲೆಯಿಂದ ಇಡೀ ವಿಶ್ವದ ಆರ್ಥಿಕ ಪರಿಸ್ಥಿತಿಯು ಕಷ್ಟಕರವಾಗಿದ್ದು ಈ ಸಮಯದಲ್ಲಿ ಸಹಕಾರಿಯಲ್ಲಿ ಸಾಲ ಪಡೆದ ಸದಸ್ಯರ ಜಾಮೀನು ಸಾಲ ಮತ್ತು ಸ್ವ-ಸಹಾಯ ಸಂಘದ ಸದಸ್ಯರ ಸಾಲಗಳಿಗೆ ಶೇ2% ಬಡ್ಡಿಯನ್ನು ಕಡಿತಮಾಡಲಾಗಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. ಈ ಸೌಲಭ್ಯವು ದಿನಾಂಕ 31.08.2020ರವರೆಗೆ ಜಾರಿಯಲ್ಲಿರುತ್ತದೆ. ಮಾನ್ಯ ಸದಸ್ಯರು ಇನ್ನೂ ಹೆಚ್ಚಿನ ಸೇವೆಯನ್ನು ನಮ್ಮ ಸಹಕಾರಿಯಲ್ಲಿ ಪಡೆದು ಸಹಕಾರಿಯ ಬೆಳವಣಿಗೆಯಲ್ಲಿ ಸಹಕಾರಿಯಾಗಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಹಕಾರಿ ನಿರ್ದೇಶಕರಾದ ಕಸ್ತೂರಿ ಪಂಜ, ಸುನೀಲ್ ಆಳ್ವ, ಸತೀಶ್ ಅಂಚನ್, ಜಯಾನಂದ ಎ.ರಾವ್, ಶೈಲೇಶ್ ಕುಮಾರ್, ರಮಾನಾಥ ಪೈ., ಶ್ಯಾಮ್ ಪ್ರಸಾದ್, ರಾಮಚಂದ್ರ ಶೆಣೈ, ಅರುಣ್ ಭಂಡಾರಿ, ಶಕುಂತಳ ವಿ.ಬಂಗೇರ, ಉಪಸ್ಥಿತರಿದ್ದರು.

ಕಾರ್ಯಕ್ರಮ ನಿರೂಪಣೆ ಮತ್ತು ಸ್ವಾಗತವನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿ ನವೀನ್ ಕುಮಾರ್ ನೆರವೇರೆಸಿದರು ಹಾಗೂ ಉಪಾಧ್ಯಕ್ಷರಾದ ಉಮೇಶ್ ಕೆ. ಪಂಜರವರು ವಂದನಾರ್ಪಣೆಗೈದರು.

# ಸನ್ಮಾನ



**ಕೊಪ್ಪಳ:** ರಾಯಚೂರು ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಜಿ. ಶ್ರೀಧರ್ ರವರು ನಾಮನಿರ್ದೇಶನ ಗೊಂಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಮತ್ತು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಗಳ ವತಿಯಿಂದ ಸನ್ಮಾನಿಸಲಾಯಿತು.



**ಕೊಪ್ಪಳ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್ ರವರು ರಾಯಚೂರು ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನ ಮಂಡಳಿಯ ಸದಸ್ಯರಾಗಿ ನಾಮ ನಿರ್ದೇಶನ ಗೊಂಡಿರುವ ಹಿನ್ನೆಲೆಯಲ್ಲಿ ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿ ವತಿಯಿಂದ ಅಭಿನಂದನಾ ಮತ್ತು ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ವರ್ಗದವರು, ಪಿಗ್ಮಿ ಏಜೆಂಟರು ಮತ್ತು ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಕೃಷ್ಣ ರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ ರವರು ಸಹಕಾರಿಯ ಪರವಾಗಿ ಶುಭವನ್ನು ಹಾರೈಸಿದರು.

# ಆನ್‌ಲೈನ್ ಕಲಿಕೆಗಾಗಿ 'ಸುಕೋ ವಿದ್ಯಾ-ಸೇತು' ಸಾಲ ಯೋಜನೆ



**ಬಳ್ಳಾರಿ :** 'ಕೋವಿಡ್-19' ನಿಂದಾಗಿ ಬದಲಾದ ಕ್ಲಾಸ್‌ರೂಂ ಬೋಧನಾ ಮತ್ತು ಕಲಿಕಾ ಪದ್ಧತಿಯಲ್ಲಿ ಆನ್‌ಲೈನ್ ಶಿಕ್ಷಣಕ್ಕೆ ವಿದ್ಯಾರ್ಥಿಗಳಿಗೆ ಅಗತ್ಯವಾಗಿರುವ ಲ್ಯಾಪ್‌ಟಾಪ್ ಖರೀದಿಸಲು ಸುಕೋ ಬ್ಯಾಂಕ್ 'ಸುಕೋ ವಿದ್ಯಾ-ಸೇತು' ಸಾಲ ಯೋಜನೆಯನ್ನು ಜಾರಿ ಮಾಡಿದೆ.

ಸುಕೋ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಾದ ಪರಿಮಳಾಚಾರ್ಯ ಎಸ್. ಅಗ್ನಿಹೋತ್ರಿ ಅವರು ಪತ್ರಿಕಾ ಪ್ರಕಟಣೆ ನೀಡಿ, 'ಸುಕೋ ವಿದ್ಯಾ-ಸೇತು' ಸಾಲ ಯೋಜನೆಯಲ್ಲಿ ಶೇ. 14ರ ಬಡ್ಡಿದರದಲ್ಲಿ ಲ್ಯಾಪ್ ಟಾಪ್ ಖರೀದಿ ಮೊತ್ತದ ಶೇ. 100 ರಷ್ಟು ಹಣವನ್ನು ಬ್ಯಾಂಕ್ ಸಾಲವಾಗಿ ನೀಡುತ್ತದೆ. 'ಸುಕೋ ವಿದ್ಯಾ-ಸೇತು' ಸಾಲ ಯೋಜನೆಯು ವಿದ್ಯಾರ್ಥಿ- ಪೋಷಕ ಸ್ನೇಹಿ ಹಾಗೂ ಆನ್‌ಲೈನ್ ಕಲಿಕಾ ಪೂರಕ ಯೋಜನೆ ಎಂದರು.

ಗ್ರಾಹಕರ ಆರ್ಥಿಕ ವ್ಯವಸ್ಥೆಗೆ ಅನುಕೂಲವಾಗಿ ಪ್ರತಿದಿನ, ವಾರಕ್ಕೊಮ್ಮೆ ಮತ್ತು ತಿಂಗಳಿಗೊಮ್ಮೆ ಹಣ ಮರುಪಾವತಿಸುವ ಸುಲಭ ಕಂತುಗಳನ್ನು ಹೊಂದಿರುವ ಯೋಜನೆಗೆ ಇದಾಗಿದೆ. ಕನಿಷ್ಠ ಆರು ತಿಂಗಳಿಂದ ಎರಡು ವರ್ಷಗಳ ಅವಧಿಯವರೆಗೆ ಸಾಲದ ಹಣ ಮರು ಪಾವತಿ ಮಾಡುವ ಸೌಲಭ್ಯವನ್ನು ಈ ಯೋಜನೆ ಹೊಂದಿದೆ. ವಿದ್ಯಾರ್ಥಿಗಳು – ಪೋಷಕರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು. ಈ ಯೋಜನೆ ಅಡಿ ಲ್ಯಾಪ್‌ಟಾಪ್ ಖರೀದಿಸುವ ವಿದ್ಯಾರ್ಥಿಗೆ ಮೈಕ್ ಸಮೇತ ಹೆಡ್‌ಫೋನ್ ಅನ್ನು ನೀಡಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ವಿವರಗಳಿಗಾಗಿ ಸಮೀಪದ ಸುಕೋ ಶಾಖೆಗೆ ಭೇಟಿ ನೀಡಿ ಅಥವಾ 18001235560 – 18001215560 ಗೆ ಕರೆ ಮಾಡಿ ಮಾಹಿತಿ ಪಡೆಯಲು ಅವರು ಕೋರಿದ್ದಾರೆ.

# ಕೋರೊನಾ ವೈರಸ್ (ಕೋವೀಡ್-19) ವಿರುದ್ಧ ಹೋರಾಡಲು ರಾಜ್ಯದ ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯಚಟುವಟಿಕೆಗಳು ಹಾಗೂ ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಿರುವ ದೇಣಿಗೆ ಮತ್ತು ಆಶಾ ಕಾರ್ಯಕರ್ತೆಯರಿಗೆ ನೀಡಿದ ಗೌರವ ಧನ



**ಧಾರವಾಡ :** ಮಿಲ್ಲತ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಳ್ನಾವರ, ಧಾರವಾಡ ಸಹಕಾರಿಯಿಂದ ಕೊವೀಡ್–19 ಸಮಯದಲ್ಲಿ ರೂ 4.00.000/– ಮೌಲ್ಯದ ಆಹಾರಧ್ಯಾನದ ಕಿಟ್‌ಗಳನ್ನು 510 ಫಲಾನುಭವಿಗಳಿಗೆ ವಿತರಿಸಲಾಯಿತು.



**ಸಿಂದಗಿ :** ಶ್ರೀ ಗಜಾನನ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಹಕಾರಿಯಿಂದ 21 ಅಶಾ ಕಾರ್ಯಕರ್ತೆಯರಿಗೆ ಒಬ್ಬರಿಗೆ 3000/– ದಂತೆ ಒಟ್ಟು 30.000/– ರೂ ಗಳ ಚೆಕ್ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಆರ್.ಡಿ. ಕುಲಕರ್ಣಿ, ಉಪಾಧ್ಯಕ್ಷ ಸಂಜೀವ ಪೋತದಾರ, ನಿರ್ದೇಶಕರಾದ ಶ್ರೀ ಶರದ ನಾಡಗೌಡ, ಎ.ಕೆ. ಕುಲಕರ್ಣಿ, ಪಂಕಜಾ ಮಿರ್ಜಿಕರ, ಎಸ್.ಎಸ್ ಸೋಮಜಾಜಿ, ವ್ಯವಸ್ಥಾಪಕ ಎ.ಸಿ. ಜೋಷಿ, ಲೀಲಾವತಿಗೌಡ, ಎಂ.ಎಸ್ ರಾಠೋಡ. ಜೆ.ಕೆ. ಚಿಕರೆಡ್ಡಿ, ವೀರೇಂದ್ರ ಪವಾಡಿ, ರಾಜು ಸಂಶೀಕರ, ಶಿವಶಂಕರ ಹದರಿ, ಶಿವು ಶಿವಶಿಂಗೇರ, ಆನಂದ ಕುಲಕರ್ಣಿ, ಪ್ರಸನ್ನಪಟ್ಟಣಶೆಟ್ಟಿ, ರಾಮು ಜೋಷಿ, ಶ್ರೀನಾಥ ಜೋಷಿ, ಶ್ರೀನಿವಾಸ ಜೋಷಿ, ಅನೀಲ ಜೋಷಿ, ಪವನ ಕುಲಕರ್ಣಿ, ಶ್ವೇತಾ ದೇಶಪಾಂಡೆ ಉಪಸ್ಥಿತರಿದ್ದರು.

---

**ಕಲಬುರಗಿ :** ಗುಲಬರ್ಗಾ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸದರಿ ಸಹಕಾರಿಯ ವತಿಯಿಂದ ಕೊರೋನಾ ವೈರಸ್ ಹಿನ್ನಲೆಯಿಂದ ಕಲಬುರಗಿ ಜಿಲ್ಲಾಡಾಳಿತಕ್ಕೆ 1000 ಮಾಸ್ಕ್ ಮತ್ತು 10 ಲೀಟರ್ ಸ್ಯಾನೀಟೈಸರ್ ನೀಡಲಾಯಿತು.



**ರಾಯಚೂರು :** ದಿನಾಂಕ 12.06.2020 ರಂದು ಶ್ರೀ ಗುರು ರಾಘವೇಂದ್ರ ಪತ್ತಿನ ಸೌಹಾರ್ದ ಸಹಕಾರಿ ನಿ. ಮಾನವಿ ಈ ಸಹಕಾರಿಯು 5 ಜನ ಆಶಾ ಕಾರ್ಯಕರ್ತೆಯಾರಿಗೆ ತಲಾ 3000 ಸಾವಿರ ದಂತೆ 15,000 ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಕೊಪ್ಪ :** ದಿನಾಂಕ 04.07.2020 ರಂದು ಸಹಕಾರಿಯ ಸಭಾಂಗಣದಲ್ಲಿ ನಡೆದ ಮಣಿಪಾಲ್ ಹೆಲ್ತ್ ಕಾರ್ಡ್ ಪ್ರಕಟಣೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಎಸ್ ಎನ್ ವಿಶ್ವನಾಥ್ ಹಾಗೂ ಮಣಿಪಾಲ್ ಸಂಸ್ಥೆಯ ಶ್ರೀ ಅನಿಲ್ ನಾಯಕ್, ಶ್ರೀ ಮೋಹನ್ ಶೆಟ್ಟಿ ಹಾಗೂ ಯಡಗೆರೆ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಸುಧೀರ್ 2020ನೇ ಸಾಲಿನ ಆರೋಗ್ಯ ಕಾರ್ಡ್ ಅನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಯಿತು.

---

**ಕೊಪ್ಪ :** ದಿನಾಂಕ 29/06/2020 ರಂದು ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಕೊಪ್ಪ ತಾಲ್ಲೂಕಿನ ಮೂರು ಮಂದಿ ಆಶಾಕಾರ್ಯಕರ್ತೆಯರಿಗೆ ಪ್ರೋತ್ಸಾಹಧನವಾಗಿ ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀಯುತ ನಟರಾಜ್ ಡಿ.ಜಿ ಹಾಗೂ ಎಲ್ಲಾ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



**ಉತ್ತರ ಕನ್ನಡ :** ಮುರ್ಕುಂಡೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿಯಮಿತ, ನೆಲ್ಲಿಕೇರಿ ಸಹಕಾರಿಯಿಂದ ಕೊರೋನಾ ವೈರಸ್ ಸಮಯದಲ್ಲಿ ಕಾರ್ಯನಿರ್ವಹಿಸಿದ 4 ಜನ ಆಶಾ ಕಾರ್ಯಕರ್ತೆರಿಗೆ ಒಬ್ಬರಿಗೆ ರೂ. 3000/– ದಂತೆ 12.000/– ರೂ ಗಳನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಘವೇಂದ್ರ ಪಾಂಡುರಂಗ ನಾಯಕ್, ನಿರ್ದೇಶಕರುಗಳಾದ ಶ್ರೀ ಸಂತೋಷ್ ಮಾರುತಿ ಶೇಟ್, ಶ್ರೀ ಪ್ರಧಾನ್ ಗಣಪತಿ ನಾಯಕ ಹಾಗೂ ವ್ಯವಸ್ಥಾಪಕರು ಪ್ರೋತ್ಸಾಹಧನದ ಚೆಕ್ ನೀಡಿ ಗೌರವಿಸಿಲಾಯಿತು.



**ಶಿವಮೊಗ್ಗ:** ಜೀವನ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಸಾಗರ ಸದರಿ ಸಹಕಾರಿ ವತಿಯಿಂದ ಇಬ್ಬರು ಆಶಾ ಕಾರ್ಯಕರ್ತೆಯರಿಗೆ ತಲಾ 3000 ಸಾವಿರ ದಂತೆ ಒಟ್ಟು ರೂ. 6000/– ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಕೊಪ್ಪಳ:** ಜ್ಯೋತಿಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ, ಕೊಪ್ಪಳ ಸಹಕಾರಿಯ ವತಿಯಿಂದ ಇಬ್ಬರು ಆಶಾ ಕಾರ್ಯಕರ್ತೆಯರಿಗೆ ತಲಾ 3000 ಸಾವಿರ ದಂತೆ ಒಟ್ಟು ರೂ. 6000/– ಗೌರವ ಧನ ನೀಡಿ ಸನ್ಮಾನಿಸಲಾಯಿತು.




**ಶಿವಮೊಗ್ಗ:** ದಿನಾಂಕ 09.07.2020 ರಂದು ಶ್ರೀ ಸಮೀರ ವಿವಿಧೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸದರಿ ಸಹಕಾರಿ ವತಿಯಿಂದ ಶಿವಮೊಗ್ಗ ನಗರದ 30ನೇ ವಾರ್ಡಿನ ಆಶಾ ಕಾರ್ಯಕರ್ತರಾದ ಶ್ರೀಮತಿ ಮಮತ ಎಂ. ಇವರಿಗೆ ಸನ್ಮಾನಿಸಿ ಮತ್ತು ಅವರಿಗೆ ಪ್ರೋತ್ಸಾಹ ಧನವಾಗಿ 3000 ಸಾವಿರ ಚೆಕ್‌ನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುರಾಜ್ ಹೆಚ್ ಮತ್ತು ನಿರ್ದೇಶಕರಾದ ವಿಜಯೇಂದ್ರ. ಎ.ವಿ, ಪ್ರಕಾಶ್.ಬಿ, ಮುರಳಿಧರ ಕೆ.ವಿ. ಕಾರ್ಯದರ್ಶಿಯಾದ ಭಾರತೀಶ ಹೆಚ್.ಆರ್. ಮತ್ತು ಸಿಬ್ಬಂದಿ ಚೇತನ ಇವರುಗಳು ಉಪಸ್ಥಿತರಿದ್ದರು.



**ಶಿವಮೊಗ್ಗ :** ಶ್ರೀ ಅಂಬ್ರಿಣಿ ವಿದ್ಯೆಶ ಸೌಹಾರ್ದ ಸಹಕಾರಿಯಿಂದ 3 ಜನ ಆಶಾ ಕಾರ್ಯಕರ್ತರಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಯು ಶಿವಾನಂದ ಭಂಡಾರ್ಕರ್ ಗೌರವ ಧನ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಟಿ. ಶಿವರಾಜ್ ಮತ್ತು ನಿರ್ದೇಶಕರಾದ ಜಿ. ಆರ್. ರಾಘವೇಂದ್ರ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಕೆ. ಹೆಚ್. ಸುಧೀಂದ್ರ ಮತ್ತು ಸಿಬ್ಬಂದಿಗಳದ ಪ್ರಕಾಶ್ ಎಸ್.ಜಿ, ಚೇತನ್ ಜಿ. ಎ, ಉಮಾ ನಾಗರಾಜ್, ವಿನಾಯಕ .ಎಂ ಮತ್ತು ನವೀನ್ ಉಪಸ್ಥಿತರಿದ್ದರು.

**ಬ್ಯಾಕೋಡು :** ಪೂಜ್ಯಶ್ರೀ ನಾರಾಯಣಗುರು ಸೌಹಾರ್ದ ಸಹಕಾರಿ ನಿ., ಬ್ಯಾಕೋಡು ಸಹಕಾರಿ ವತಿಯಿಂದ ಆಶಾ ಕಾರ್ಯಕರ್ತೆಗೆ 3000/– ರೂಗಳ ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಶಿವಮೊಗ್ಗ :** ಕಲಾವಿದರ ಸೌಹಾರ್ದ ಸಹಕಾರಿ ಶಿವಮೊಗ್ಗ ವತಿಯಿಂದ ದಿನಾಂಕ 10.07.2020ರಂದು ಶ್ರೀಮತಿ ಎಸ್.ಪಲ್ಲವಿ ಆಶಾ ಕಾರ್ಯಕರ್ತೆ ಇವರಿಗೆ 3000/– ಗೌರವ ಧನ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ತಾರಾಪ್ರಸಾದ್, ನಿರ್ದೇಶಕರಾದ ರೇಣುಕಮ್ಮ, ಶ್ರೀ ವಿಜಯ ಭಾಸ್ಕರ್, ಶ್ರೀ ಕೃಷ್ಣಮೂರ್ತಿ, ಜಯಮ್ಮ, ಶ್ರೀ ಪ್ರಹ್ಲಾದರಾವ್,ಎಸ್.ಜಿ. ಆನಂದ್ ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಪಿ.ವಿ. ಕಿಣಿ ಉಪಸ್ಥಿತರಿದ್ದರು.



**ಶಿವಮೊಗ್ಗ :** ಸಿರಿ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿಮಿಟೆಡ್ ಶಿವಮೊಗ್ಗ ಸಹಕಾರಿ ವತಿಯಿಂದ ಶಿವಮೊಗ್ಗ ತಾಲ್ಲೂಕಿನ ಆಶಾ ಕಾರ್ಯಕರ್ತರಾದ ಶ್ರೀಮತಿ ಪದ್ಮ ಡಿ, ಶ್ರೀಮತಿ ಸುಮಿತ್ರ, ಶ್ರೀಮತಿ ಸುನಿತಾ ಇವರಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗರಾಜ್ ಎಸ್ ಎಸ್ ಹಾಗೂ ಆಡಳಿತ ಮಂಡಳಿಯವರು ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಬೆಳಗಾವಿ :** ನಿಡಸೋಸಿ ಹಾಗೂ ನಿಡಸೋಸಿವಾಡಿ ಗ್ರಾಮಗಳ ಸೌಹಾರ್ದ ಸಹಕಾರಿ ನಿ., ವತಿಯಿಂದ ಶ್ರೀ ಮ.ನಿ.ಜ ಪಂಚಮ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಗಳು ಸಿದ್ದ ಸಂಸ್ಥಾನ ಮಠ ನಿಡಸೋಸಿ ಇವರ ಆಶೀರ್ವಾದ ದೊಂದಿಗೆ 7 ಜನ ಆಶಾ ಕಾರ್ಯಕರ್ತೆರಿಗೆ ತಲಾ ರೂ. 3000 ದಂತೆ 21.000 ಸಾವಿರ ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಕೊಪ್ಪಳ :** ದಿನಾಂಕ 10.07.2020 ರಂದು ಶ್ರೀ ಗುರು ಕಣ್ವ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿ ವತಿಯಿಂದ 4 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000/– ದಂತೆ ಒಟ್ಟು 12.000/– ಗೌರವ ಧನ ನೀಡಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್ ಗುರುರಾಜ, ಉಪಾಧ್ಯಕ್ಷರಾದ ಶ್ರೀ ಶಶಿಧರ್ ಎಮ್. ಕೆ. ಹಾಗೂ ನಿರ್ದೇಶಕರಾದ ಶ್ರೀ ಪ್ರಭುಗೌಡ ಪಾಟೀಲ್, ಎಚ್.ಎಮ್ ದೇಶಪಾಂಡೆ, ವಾಸುದೇವಾಚಾರ ಜೆ. ಶರಣಪ್ಪ ಮೇಣದಾಳ, ವಿ. ಜಿ. ಹೀರೇಮಠ, ವೀರೇಶ ಕೆ.ಜಿ, ಗಂಗಾಧರ ಕಟ್ಟಿಮನಿ, ಪೂರ್ಣಿಮಾ ಜಿ.ಕೆ, ಸಹಕಾರಿ ಇಲಾಖೆಯ ಸಿಬ್ಬಂದಿಗಳಾದ ಪ್ರದೀಪ ಘಂಟಿ, ವೆಂಕಾರೆಡ್ಡಿ, ಸಹಕಾರಿ ಯೂನಿಯನ್ ಸಿಬ್ಬಂದಿಗಳಾದ ರಾಜಶೇಖರ ಹೊಸಮನಿ ಹಾಗೂ ಸಹಕಾರಿಯ ಸಿಬ್ಬಂದಿಗಳಾದ ರಶ್ಮಿ ಜಿ. ಬಿಸರಳ್ಳಿ, ನವೀನಕುಮಾರ, ಮಹಿಬುದ್ ಸಾಬ್, ವೀರೇಶ್ ಎಸ್.ಕೆ. ಉಪಸ್ಥಿತರಿದ್ದರು.



**ಉತ್ತರ ಕನ್ನಡ :** ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ. ಸಿದ್ದಾಪುರ ಸಹಕಾರಿ ವತಿಯಿಂದ 6 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 1500/– ರಂತೆ ರೂ. 9000 ಪ್ರೋತ್ಸಾಹಧನ ನೀಡಿ ಸನ್ಮಾನಿಸಲಾಯಿತು.



ದಿನಾಂಕ 23.06.2020 ರಂದು ಅಂಕಿತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಹಕಾರಿ ವತಿಯಿಂದ ಅಶಾ ಕಾರ್ಯಕರ್ತೆಯರಿಗೆ ರೂ 3000/– ಪ್ರೋತ್ಸಾಹಧನ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಲಿ ಸದಸ್ಯರು ಉಪಸ್ಥಿತರಿದ್ದರು.



**ಶಿವಮೊಗ್ಗ :** ದಿನಾಂಕ 12.07.2020 ರಂದು ಸಿಯಾನ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಗರ ಸಹಕಾರಿ ವತಿಯಿಂದ 2 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000 ಸಾವಿರ ದಂತೆ 6000 ರೂ ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಶಿವಮೊಗ್ಗ :** ದಿನಾಂಕ 11–7–2020 ರಂದು ವಿಪ್ರ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ವತಿಯಿಂದ 3 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000 ದಂತೆ 9000 ರೂ ಗೌರವ ಧನ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರು ಹಾಗೂ ಸಂಯುಕ್ತ ಸಹಕಾರಿಯ ಶ್ರೀ ಶಶಿಕುಮಾರ್ ಉಪಸ್ಥಿತರಿದ್ದರು.



**ಬೆಳಗಾವಿ :** ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಾಗನೂರ ವತಿಯಿಂದ ದಿನಾಂಕ 11.07.2020 ರಂದು ಕೊರೋನಾ ನಿಯಂತ್ರಣಕ್ಕೆ ಶ್ರಮಿಸಿದ 7 ಜನ ಆಶಾ ಕಾರ್ಯಕರ್ತೆಯರಿಗೆ ಸಹಕಾರಿಯಿಂದ ತಲಾ 3000/–ರೂ ದಂತೆ 21000 ಸಾವಿರ ರೂ ಗೌರವ ಧನವನ್ನು ಸಹಕಾ–ರಿಯ ಅಧ್ಯಕ್ಷರಾದ ಶ್ರೀ ಬಸವರಾಜ ತಡಸನವರ ರವರು ವಿತರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಶಿವಮೊಗ್ಗ :** ದಿನಾಂಕ 11.07.2020 ರಂದು ಸ್ತ್ರೀ ಬಂಧು ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ವತಿಯಿಂದ ಗ್ರಾಮೀಣ ಭಾಗದಲ್ಲಿ ಸೇವೆ ಮಾಡುತ್ತಿರುವ 13 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000/ ದಂತೆ, 39000 ಸಾವಿರ ರೂ ಗೌರವ ಧನ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಮುಖ್ಯಕಾರ್ಯನಿರ್ವಾಹರು, ನಿರ್ದೇಶಕರು, ವ್ಯವಸ್ಥಾಪಕರು, ಉಪಸ್ಥಿತರಿದ್ದರು.




**ಶಿವಮೊಗ್ಗ :** ಸಮ್ಮಿಲನ ಕೃಷಿ ಸಂಸ್ಕರಣ ಸೌಹಾರ್ದ ಸಹಕಾರಿ ನಿ., ಸಹಕಾರಿ ವತಿಯಿಂದ 1 ಜನ ಆಶಾಕಾರ್ಯಕರ್ತೆರಿಗೆ 3000 ರೂ ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಶಿವಮೊಗ್ಗ :** ಶ್ರೀ ನಾರಾಯಣ ಗುರು ಅಕ್ಷರಧಾಮ ಸೌಹಾರ್ದ ಸಹಕಾರಿ ನಿ., ಸಹಕಾರಿ ವತಿಯಿಂದ ಆಶಾಕಾರ್ಯಕರ್ತೆರಿಗೆ 3000 ರೂ ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಶಿವಮೊಗ್ಗ :** ಕೊಡಚಾದ್ರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿ ವತಿಯಿಂದ 2 ಜನ ಆಶಾ ಕಾರ್ಯಕರ್ತೆಯ–ರಿಗೆ ತಲಾ 3000 ಸಾವಿರ ದಂತೆ ಒಟ್ಟು 6000 ಸಾವಿರ ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಕೊಪ್ಪಳ :** ಶ್ರೀಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಹಳ್ಳಿ ಹಾಗೂ ಶ್ರೀಮಾತೋಶ್ರೀ ಪಬ್ಲಿಕ್ ಸ್ಕೂಲ್ ಬೇವಿನಹಳ್ಳಿ ಹಾಗೂ ಸಹಕಾರಿ ಇಲಾಖೆ ಕೊಪ್ಪಳ ಜಂಟಿ ಆಶ್ರಯದಲ್ಲಿ ಬೇವಿನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಕೊರೊನಾ ವಾರಿಯರ್ಸ್‌ಗಳಾದ ಆರೋಗ್ಯ ಇಲಾಖೆಯವರಿಗೆ, ಪಂಚಾಯತ್ ಕಾರ್ಯದರ್ಶಿಗಳಿಗೆ ಹಾಗೂ ಪಂಚಾಯತ್ ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ ವಿತರಣೆ ಹಾಗೂ ಸನ್ಮಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಪ್ರೋತ್ಸಾಹಧನ ವಿತರಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮುದ್ದಪ್ಪ ಜಿ ಇವರು ನಮ್ಮ ಸಂಸ್ಥೆಯು ಪ್ರಾರಂಭವಾದ ಎರಡು ವರ್ಷಗಳಿಂದ ನಿರಂತರವಾಗಿ ಸಾಮಾಜಿಕ ಸೇವೆಯನ್ನು ಮಾಡುತ್ತಾ ಬಂದಿದೆ. ಹೀಗಾಗಿ ನಾವು ಈ ದಿನ ಕೊರೋನ ವಾರಿಯರ್ಸ್‌ಗಳ ಸೇವೆಯನ್ನು ಗುರುತಿಸಿ ಅವರಿಗೆ ಸಹಕಾರಿ ಇಲಾಖೆಯ ಮನವಿಯಂತೆ ತಲಾ ಮೂರು ಸಾವಿರದಂತೆ 5 ಜನ ಆಶಾ ಕಾರ್ಯಕರ್ತೆಯರಿಗೆ 15.000 ಸಾವಿರ ಪ್ರೋತ್ಸಾಹಧನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಹಕಾರಿ ನಿರ್ದೇಶಕರುಗಳಾದ ಮಂಜುನಾಥ ಶಿವಮೂರ್ತಿ, ಶಣ್ಮುಖಪ್ಪ, ಬೆಳ್ಳೆಪ್ಪ, ಗವಿಸಿದ್ದಪ್ಪ, ನಾಗರಾಜ, ಮಾರುತಿ ಗ್ರಾಮದ ಗಣ್ಯರಾದ ಭೀಮಣ್ಣ, ಬಸವರಾಜ, ಮೈಲಾರಪ್ಪ, ಮುಕ್ಕಣ್ಣ, ಶ್ರೀ ಮಾತೋಶ್ರೀ ಸಿಬ್ಬಂದಿವರ್ಗ, ಸಹಕಾರಿಯ ಸದಸ್ಯರು ಮಾಸ್ಕ್‌ಧರಿಸಿ ಸಾಮಾಜಿಕ ಅಂತರ ಕಾಪಾಡಿಕೊಂಡು ಭಾಗವಹಿಸಿದ್ದರು.



**ಕೊಪ್ಪಳ :** ದಿನಾಂಕ 14.07.2020 ರಂದು ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿ ನಿ. ಗಿಣಿಗೇರಿ ಸಹಕಾರಿ ವತಿಯಿಂದ 2 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000 ಸಾವಿರ ದಂತೆ 6000 ರೂ ಗಳ ಗೌರವ ಧನ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಎಸ್ ಎಮ್ ಕಂಠಿಮಠ, ಪ್ರಾಥಮಿಕ ಆರೋಗ್ಯ ಇಲಾಖೆ ಸಹಾಯಕ ಕಾರ್ಯದರ್ಶಿ ಹಾಗೂ ಎಲ್ ರಾಧಾಬಾಯಿ, ಹಿರಿಯ ಆರೋಗ್ಯ ಸಹಾಯಕರು ಇವರು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಶರಣಪ್ಪ ಬಿ ಹ್ಯಾಟಿ ಇವರು ವಹಿಸಿದ್ದರು ಹಾಗೂ ಉಪಾಧ್ಯಕ್ಷರಾದ ಶ್ರೀ ಯಮನೂರಪ್ಪ ಗಂಟಿ, ನಿರ್ದೇಶಕರಾದ ಶ್ರೀ ಪುಟ್ಟಪ್ಪ ವಾರದ, ಶ್ರೀ ಡಾ. ಪಿ ಎಮ್ ಬಸವರಾಜ, ಶ್ರೀ ಬಸವರಾಜ ಗದ್ದಿ, ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




**ಶಿವಮೊಗ್ಗ :** ದಿನಾಂಕ 14.07.2020 ರಂದು ಕೃಷಿಕ್ ಸೌಹಾರ್ದ ಸಹಕಾರಿ ನಿಯಮಿತ ಸಾಗರ ಸಹಕಾರಿಯಿಂದ 2 ಜನ ಆಶಾ ಕಾರ್ಯಕರ್ತರಾದ ನಾಗರತ್ನ ಮತ್ತು ರೇಣುಕಾ ಇವರಿಗೆ ತಲಾ 3000 ಸಾವಿರದಂತೆ 6000 ಸಾವಿರ ರೂಗಳನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಯು ಹೆಚ್ ರಾಮಪ್ಪ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಸಮರ್ಥ ಎಂ ಎಲ್ ಇವರು ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಕೊಡಗು:** ದಿನಾಂಕ 11.07.2020 ರಂದು ಇಗ್ಗುತ್ತಪ್ಪ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಲಿ., ಸಹಕಾರಿ ವತಿಯಿಂದ ಕೊರೋನಾ ವಾರಿಯಸ್‌ಗಳಾದ 3 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000 ಸಾವಿರ ದಂತೆ 9000 ಸಾವಿರ ಗೌರವ ನೀಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ. ಸೋಮಯ್ಯ, ಸಹಕಾರ ಸಂಘಗಳ ಅಭಿವೃದ್ಧಿ ಅಧಿಕಾರಿಯಾದ ಮೇಕೆರಿರ ಎಸ್ ಮೋಹನ್, ನಿರ್ದೇಶಕರಾದ ಶ್ರೀ ಐನಂಡ ಕೆ ಮಂದಣ್ಣ, ಮುದ್ದಿಯಡ ಪ್ರಕಾಶ್, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿಗಳ ಉಪಸ್ಥಿತರಿದ್ದರು.



**ಕೊಪ್ಪಳ :** ಶ್ರೀ ಗಾನಯೋಗಿ ಪತ್ತಿನ ಸೌಹಾರ್ದ ಸಹಕಾರಿ ನಿ., ಇರಕಲ್ಲಗಡ, ಕೊಪ್ಪಳ ಸಹಕಾರಿಯ 3ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಕೋವಿಡ್–19ರ ವಿರುದ್ಧ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಸನ್ಮಾನ ಹಾಗು ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಮಯದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ವರ್ಗದವರು, ಮುಖ್ಯ ಕಾರ್ಯನಿರ್ವಾಹಕರು, ಪಿಗ್ಮಿ ಏಜೆಂಟರು ಉಪಸ್ಥಿತರಿದ್ದರು.



**ಶಿವಮೊಗ್ಗ :** ಸ್ನೇಹಜೀವಿ ಪತ್ತಿನ ಸೌಹಾರ್ದ ಸಹಕಾರಿ ನಿ., ಭದ್ರಾವತಿ ಸಹಕಾರಿ ವತಿಯಿಂದ ಭದ್ರಾವತಿ ನೆಹರು ನಗರ ಆರೋಗ್ಯ ಕೇಂದ್ರದ ಆಶಾ ಕಾರ್ಯಕರ್ತೆ ಶ್ರೀಮತಿ ಮೀನಾಕ್ಷಿ ಯವರಿಗೆ 3000 ಸಾವಿರ ಚೆಕ್ ನೀಡಿ ಸಹಕಾರಿಯ ಅಧ್ಯಕ್ಷರಾದ ವಿಜಯೇಂದ್ರ ಬಿ ಹಾಗೂ ಪದಾಧಿಕಾರಿಗಳಿಂದ ಸನ್ಮಾನಿಸಲಾಯಿತು.



**ಹೊಸನಗರ :** ಹೊಸನಗರ ಕೊಡಚಾದ್ರಿ ಸೌಹಾರ್ದ ಸಹಕಾರಿಯ ನಿ., ಸಹಕಾರಿ ವತಿಯಿಂದ ನಾಲ್ಕು ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000/– ದಂತೆ ಒಟ್ಟು 12000 ಸಾವಿರ ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಉತ್ತರ ಕನ್ನಡ :** ಶ್ರೀ ವಿನಾಯಕ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಸಿದ್ದಾಪುರ, ಉತ್ತರ ಕನ್ನಡ ಸಹಕಾರಿ ವತಿಯಿಂದ 6 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 1500/– ರಂತೆ ರೂ. 9000 ಸಾವಿರ ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಹೊಸನಗರ :** ಸುಮೇದ ಸೌಹಾರ್ದ ಸಹಕಾರಿ ಹೊಸನಗರ ಸಹಕಾರಿ ವತಿಯಿಂದ ಆಶಾ ಕಾರ್ಯಕರ್ತೆಗೆ 3000/– ರೂಗಳ ಗೌರವ ಧನ ನೀಡಿ ಸನ್ಮಾನಿಸಲಾಯಿತು.



**ಶಿವಮೊಗ್ಗ :** ಸಮೃದ್ ಸೌಹಾರ್ದ ವಿವಿದೋದ್ಧೇಶ ಸಹಕಾರಿ ನಿ., ಶಿವಮೊಗ್ಗ ಸಹಕಾರಿ ವತಿಯಿಂದ ಇಬ್ಬರು ಆಶಾ ಕಾರ್ಯಕರ್ತೆಯರಿಗೆ ತಲಾ 3000/– ದಂತೆ ಒಟ್ಟು 6000 ಸಾವಿರ ಗೌರವ ಧನ ನೀಡಿ ಸನ್ಮಾನಿಸಲಾಯಿತು.




**ಕೊಪ್ಪಳ :** ದಿನಾಂಕ 17/07/2020 ರಂದು ನೇಗಿಲಯೋಗಿ ಹಿರೇಬಗನಾಳ ಪತ್ತಿನ ಸೌಹಾರ್ದ ಸಹಕಾರಿ ನಿ; ಹಿರೇಬಗನಾಳ, ಕೊಪ್ಪಳ ಸಹಕಾರಿ ವತಿಯಿಂದ ಕೊರೋನಾ ಮಹಾಮಾರಿಯ ವಿರುದ್ಧ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಸನ್ಮಾನ ಮಾಡಿ ಪ್ರೋತ್ಸಾಹ ಧನವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು,ಸದಸ್ಯರು, ಪಿಗ್ಮಿ ಏಜೆಂಟರು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು. ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಶರಣಪ್ಪಾ ಹ್ಯಾಟಿರವರು ಉಪಸ್ಥಿತರಿದ್ದು ಸನ್ಮಾನ ಹಾಗು ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು.




**ಕೊಪ್ಪಳ :** ತತ್ವಮಸಿ ಪತ್ತಿನ ಸೌಹಾರ್ದ ಸಹಕಾರಿ ನಿ, ಹುಲಿಗಿ, ಕೊಪ್ಪಳ ಸಹಕಾರಿಯು ಕೊರೋನಾ ಮಹಾಮಾರಿಯ ವಿರುದ್ಧ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರಾದ ಶ್ರೀಮತಿ ಕೌಶಲ್ಯ ಹಾಗು ಶ್ರೀಮತಿ ಅನ್ನಪೂರ್ಣ. ಜೆ. ಅವರನ್ನು ಸನ್ಮಾನಿಸಿ ಪ್ರೋತ್ಸಾಹ ಧನವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು,ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಮತ್ತು ಪಿಗ್ಮಿ ಏಜೆಂಟರು ಉಪಸ್ಥಿತರಿದ್ದರು.




**ಕೊಪ್ಪಳ :** ಶ್ರೀ ಉದಯೋನ್ಮುಖ ಪತ್ತಿನ ಸೌಹಾರ್ದ ಸಹಕಾರಿ ನಿ; ದಿವಟರ್ ಸರ್ಕಲ್, ಕೊಪ್ಪಳ ಸಹಕಾರಿಯ ವತಿಯಿಂದ ಸಹಕಾರಿ ಇಲಾಖೆಯ ನಿರ್ದೇಶನದಂತೆ ಕೊರೋನಾ ವಾರಿಯರ್ಸ್‌ಗಳಾದ ಆಶಾಕಾರ್ಯಕರ್ತೆಯ–ರಿಗೆ ಸನ್ಮಾನ ಹಾಗು ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗು ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿವರ್ಗದವರು, ಪಿಗ್ಮೀ ಏಜೆಂಟರು ಮತ್ತು ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



**ಕೊಪ್ಪಳ :** ಗಂಗಾ ಕಾವೇರಿ ಪತ್ತಿನ ಸೌಹಾರ್ದ ಸಹಕಾರಿ ನಿ; ಇರಕಲ್ಲಗಡ, ಕೊಪ್ಪಳ ಸಹಕಾರಿಯ ವತಿಯಿಂದ ಆಶಾ ಕಾರ್ಯಕರ್ತೆಯರಿಗೆ ಸನ್ಮಾನ ಹಾಗು ಪ್ರೋತ್ಸಾಹ ಧನ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಯಲ್ಲಪ್ಪ ಕನಕಪ್ಪ ಬಸರಿಹಾಳ, ಉಪಾಧ್ಯಕ್ಷರಾದ ಶ್ರೀ ಚನ್ನಬಸಪ್ಪ, ಆಡಳಿತ ಮಂಡಳಿಯ ನಿರ್ದೇಶಕರು, ಸದಸ್ಯರು, ಸಿಬ್ಬಂದಿ ವರ್ಗದವರು, ಪಿಗ್ಮಿ ಏಜೆಂಟರು, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಕಾರ್ತಿಕ್ ಆಚಾರ್ ರವರು ಉಪಸ್ಥಿತರಿದ್ದರು.



**ಶಿವಮೊಗ್ಗ :** ಶ್ರೀ ಮಹಾದೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಇಂದಿರಾನಗರ ಸಹಕಾರಿ ವತಿಯಿಂದ ಶ್ರೀಮತಿ ಚಂದ್ರಮ್ಮ ಆಶಾ ಕಾರ್ಯಕರ್ತೆ ಸೂಳೇಬೈಲು ಇವರಿಗೆ ರೂ 3000/– ಪ್ರೋತ್ಸಾಹ ಧನ ವಿತರಸಲಾಯಿತು.

# ಸೌಹಾರ್ದ ಸಹಕಾರಿಗಳು ಕೋವಿಡ್–19 ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ, ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಹಾಗೂ ಆಶಾ ಕಾರ್ಯಕರ್ತೆರಿಗೆ ನೇರವಾಗಿ ಸಲ್ಲಿಸಿರುವ ಹಾಗೂ ಸಂಯುಕ್ತ ಸಹಕಾರಿ ಮೂಲಕ ಸಲ್ಲಿಸಿರುವ ವಿವರಗಳು.

- ರಾಜ್ಯದ ಸೌಹಾರ್ದ ಸಹಕಾರಿಗಳು ತಾವು ಕೋವಿಡ–19 ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ, ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಹಾಗೂ ಆಶಾ ಕಾರ್ಯಕರ್ತೆರಿಗೆ ನೇರವಾಗಿ ಅಥವಾ ಸಂಯುಕ್ತ ಸಹಕಾರಿಗೆ ತಾವು ಕಳುಹಿಸಿದ ಸೌಹಾರ್ದ ಸಹಕಾರಿಗಳ ವಿವರಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಈ ನಿಧಿಗೆ ತಾವು ಸಲ್ಲಿಸಿದ ವಿವರಗಳನ್ನು ಕಳುಹಿಸದಿರುವ ಸೌಹಾರ್ದ ಸಹಕಾರಿಗಳು ತಮ್ಮ ವಿವರಗಳನ್ನು ಸಂಯುಕ್ತ ಸಹಕಾರಿಗೆ ಕಳುಹಿಸಿದಲ್ಲಿ ಮುಂದಿನ ಸ್ವಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.
- ಇನ್ನೂ ತಮ್ಮ ವಂತಿಗೆಯನ್ನು ಕಳುಹಿಸದಿರುವ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಗೆ ತಮ್ಮ ವಂತಿಗೆಯನ್ನು ಕಳುಹಿಸಿದಲ್ಲಿ ಎಲ್ಲ ಮೊತ್ತವನ್ನು ಕ್ರೋಢಿಕರಿಸಿ ಮಾನ್ಯ ಸಹಕಾರ ಮಂತ್ರಿಗಳ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲ್ಲಿಸಲಾಗುವುದು.

| ಕ್ರ. ಸಂ | ಸದಸ್ಯತ್ವ ಸಂಖ್ಯೆ | ಸಹಕಾರಿಯ ಹೆಸರು | ಜಿಲ್ಲೆ | ಮೊತ್ತ | ಪರಿಹಾರ ನಿಧಿ |
|---|---|---|---|---|---|
| 1 | BGM-0060 | ಶ್ರೀ ಅಕ್ಕೋಳ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಅಕ್ಕೋಳ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 2 | BGM-1028 | ಶ್ರೀ ಇಂಗಳಿ ಮಹಾಲಕ್ಷ್ಮೀ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಇಂಗಳಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 3 | BGM-0129 | ಶ್ರೀ ಮಲ್ಲಿಕಾರ್ಜುನ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಬೆನಾಡಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 4 | BGM-0095 | ಶ್ರೀ ಛತ್ರಪತಿ ಶಿವಾಜಿ ಕ್ರೆಡಿಟ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಐನಾಪೂರ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 5 | BGM-0698 | ಶ್ರೀ ಶಾಂತಿಸಾಗರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಶಿರಗುಪ್ಪಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 6 | BGM-0518 | ಹಿಂದುಳಿದ ವರ್ಗಗಳ ಕರ್ಮವೀರಾ ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳ ಪತ್ತಿನ ಸೌಹಾರ್ದ ಸಹಕಾರಿ ನಿ., ಶಿರಗುಪ್ಪಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 7 | BGM-0308 | ಶ್ರೀ ಜಿನ್ನಪ್ಪಣ್ಣಾ ಚೌಗಲೆ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಶಿರಗುಪ್ಪಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 8 | BGM-1088 | ಶ್ರೀ ಐನಾಪೂರ ಧುರಿದೇವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಐನಾಪೂರ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 9 | BGM-0004 | ಶ್ರೀ ಅರಿಹಂತ ಕ್ರೆಡಿಟ ಸೌಹಾರ್ದ ಸಹಕಾರಿ ನಿ., ಬೋರಗಾಂವ | ಬೆಳಗಾವಿ | 54000 | ಆಶಾ ಕಾರ್ಯಕರ್ತೆಯರಿಗೆ |
| 10 | BGM-0684 | ಶ್ರೀ ಯಕ್ಸಂಬಾ ಜೀಜಾಮಾತಾ ಮಹಿಳಾ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 11 | BGM-0020 | ಶ್ರೀ ಪಾರ್ಶ್ವನಾಥ ಸೌಹಾರ್ದ ಸಹಕಾರಿ ನಿ., ಶಮನೆವಾಡಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 12 | BGM-0462 | ಶ್ರೀ ರೈತ ಸೌಹಾರ್ದ ಸಹಕಾರಿ ನಿ., ಮಲಿಕವಾಡ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 13 | BGM-0279 | ಶ್ರೀ ರೇಣುಕಾ ಸೌಹಾರ್ದ ಸಹಕಾರಿ ನಿ., ಸೌಂದತ್ತಿ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 14 | BGM-0074 | ಶ್ರೀ ಜೈಜೀನೇಂದ್ರ ಸೌಹಾರ್ದ ಸಹಕಾರಿ ನಿ., ಶಮನೆವಾಡಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 15 | BGM-0005 | ಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಮಾಂಜರಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 16 | BGM-0361 | ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಶಿರಗಾಂವ | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 17 | BGM-0389 | ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಕೃಷ್ಣಾ–ಕಿತ್ತೂರ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 18 | BGM-0964 | ಶ್ರೀ ಸಮ್ಮೇದ ಸೌಹಾರ್ದ ಸಹಕಾರಿ ನಿ., ಮಾಂಜರಿ | ಬೆಳಗಾವಿ | 3000 | ಆಶಾ ಕಾರ್ಯಕರ್ತೆಯರಿಗೆ |
| 19 | BEL-0001 | ವಿಕಾಸ್ ಸೌಹಾರ್ದ ಕೋ–ಆಪರೇಟೀವ್ ಬ್ಯಾಂಕ್ | ಬಳ್ಳಾರಿ | 300000 | ಆಶಾ ಕಾರ್ಯಕರ್ತೆಯರಿಗೆ |

| | | | | | |
|---|---|---|---|---|---|
| 20 | BEL-0007 | ನವಕರ್ನಾಟಕ ಸೌಹಾರ್ದ ಪತ್ತಿನ ಸಹಕಾರಿ ನಿ., | ಬಳ್ಳಾರಿ | 21,000 | ಆಶಾ ಕಾರ್ಯಕರ್ತೆಯರಿಗೆ |
| 21 | BEL-0010 | ಬಾಲಾಜಿ ವಿವಿದ್ಡೋದ್ದೇಶ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 15,000 | ಆಶಾ ಕಾರ್ಯಕರ್ತೆಯರಿಗೆ |
| 22 | BEL-0023 | ಶ್ರೀ ಗುರು ಬಸವೇಶ್ವರ ವಿವಿದ್ಡೋದ್ದೇಶ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 12,000 | ಆಶಾ ಕಾರ್ಯಕರ್ತೆಯರಿಗೆ |
| 23 | BEL-0026 | ಮಿತ್ರ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 3,000 | ಆಶಾ ಕಾರ್ಯಕರ್ತೆಯರಿಗೆ |
| 24 | BEL-0062 | ಗೌಳಿಗರ ವಿವಿದ್ಡೋದ್ದೇಶ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 30,000 | ಆಶಾ ಕಾರ್ಯಕರ್ತೆಯರಿಗೆ |
| 25 | BEL-0106 | ಶ್ರೀ ಗೌಮಿನಿ ಸೌಹಾರ್ದ ಪತ್ತಿನ ಸಹಕಾರಿ ನಿ., | ಬಳ್ಳಾರಿ | 12,000 | ಆಶಾ ಕಾರ್ಯಕರ್ತೆಯರಿಗೆ |
| 26 | BEL-0111 | ಶ್ರೀ ಶುಭಧನಲಕ್ಷ್ಮೀ ವಿವಿದ್ಡೋದ್ದೇಶ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 15,000 | ಆಶಾ ಕಾರ್ಯಕರ್ತೆಯರಿಗೆ |
| 27 | BEL-0158 | ಪ್ರಗತಿ ಕೃಷ್ಣ ಪತ್ತಿನ ಸೌಹಾರ್ದ ಸಹಕಾರಿ ನಿ, | ಬಳ್ಳಾರಿ | 12,000 | ಆಶಾ ಕಾರ್ಯಕರ್ತೆಯರಿಗೆ |
| 28 | BEL-0006 | ಗಾಯತ್ರಿ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 9,000 | ಆಶಾ ಕಾರ್ಯಕರ್ತೆಯರಿಗೆ |
| 29 | BEL-0116 | ಅಹನ ಪತ್ತಿನ ಸೌಹಾರ್ದ ಸಹಕಾರಿ ನಿ, | ಬಳ್ಳಾರಿ | 45,000 | ಆಶಾ ಕಾರ್ಯಕರ್ತೆಯರಿಗೆ |
| 30 | BEL-0002 | ಕೃತಿಕ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 16000 | ಆಶಾ ಕಾರ್ಯಕರ್ತೆಯರಿಗೆ |
| 31 | BEL-0003 | ಸಂಡೂರು ಪತ್ತಿನ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ., | ಬಳ್ಳಾರಿ | 90,000 | ಆಶಾ ಕಾರ್ಯಕರ್ತೆಯರಿಗೆ |
| 32 | BEL-0079 | ಶ್ರೀ ಸಾಯಿ ಕೀರ್ತನ ವಿವಿದ್ಡೋದ್ದೇಶ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 12,000 | ಆಶಾ ಕಾರ್ಯಕರ್ತೆಯರಿಗೆ |
| 33 | BEL-0080 | ಶ್ರೀ ಶಿವಲೀಲೆ ವಿವಿದ್ಡೋದ್ದೇಶ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 10,000 | ಆಶಾ ಕಾರ್ಯಕರ್ತೆಯರಿಗೆ |
| 34 | BEL-0068 | ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ., | ಬಳ್ಳಾರಿ | 300000 | ಆಶಾ ಕಾರ್ಯಕರ್ತೆಯರಿಗೆ |
| 35 | BEL-0103 | ಶಾಂತಿ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 12,000 | ಆಶಾ ಕಾರ್ಯಕರ್ತೆಯರಿಗೆ |
| 36 | BEL-0137 | ಮೇಘ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 75,000 | ಆಶಾ ಕಾರ್ಯಕರ್ತೆಯರಿಗೆ |
| 37 | BEL-0151 | ಮಿಲನ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 6,000 | ಆಶಾ ಕಾರ್ಯಕರ್ತೆಯರಿಗೆ |
| 38 | BEL-0168 | ಶ್ರೀ ಸಾಯಿ ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 15,000 | ಆಶಾ ಕಾರ್ಯಕರ್ತೆಯರಿಗೆ |
| 39 | BEL-0156 | ಶ್ರೀ ಶರಣ ಸಕ್ಕರೆ ಕರಡೀಶ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 15,000 | ಆಶಾ ಕಾರ್ಯಕರ್ತೆಯರಿಗೆ |
| 40 | BEL-0192 | ಸುವರ್ಣ ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 3,000 | ಆಶಾ ಕಾರ್ಯಕರ್ತೆಯರಿಗೆ |
| 41 | BEL-0190 | ಆದರ್ಶ ಪತ್ತಿನ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ., | ಬಳ್ಳಾರಿ | 60,000 | ಆಶಾ ಕಾರ್ಯಕರ್ತೆಯರಿಗೆ |
| 42 | BEL-0145 | ಮಲ್ಲಿಗೆ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 21,000 | ಆಶಾ ಕಾರ್ಯಕರ್ತೆಯರಿಗೆ |
| 43 | BEL-0056 | ಪಂಚಮಿತ್ರಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 10,000 | ಆಶಾ ಕಾರ್ಯಕರ್ತೆಯರಿಗೆ |
| 44 | BEL-0082 | ಶ್ರೀ ನಂದೀಶ್ವರ ವಿವಿದ್ಡೋದ್ದೇಶ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 30,000 | ಆಶಾ ಕಾರ್ಯಕರ್ತೆಯರಿಗೆ |
| 45 | BEL-0162 | ಪ್ರಣತಿ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 6,000 | ಆಶಾ ಕಾರ್ಯಕರ್ತೆಯರಿಗೆ |
| 46 | BEL-0095 | ವಿಷ್ಣು ವಿಲಾಸ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 30,000 | ಆಶಾ ಕಾರ್ಯಕರ್ತೆಯರಿಗೆ |
| 47 | BEL-0153 | ಸಿರುಗುಪ್ಪ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 15,000 | ಆಶಾ ಕಾರ್ಯಕರ್ತೆಯರಿಗೆ |
| 48 | BEL-0163 | ವಿಲಾಸ್ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 3,000 | ಆಶಾ ಕಾರ್ಯಕರ್ತೆಯರಿಗೆ |
| 49 | BEL-0086 | ಶಿವಸ್ನೇಹ ಪತ್ತಿನ ಸೌಹಾರ್ದ ಸಹಕಾರಿ ನಿ., | ಬಳ್ಳಾರಿ | 3,000 | ಆಶಾ ಕಾರ್ಯಕರ್ತೆಯರಿಗೆ |

| | | | | | |
|---|---|---|---|---|---|
| 50 | KWR-0005 | ಶಾಂತಿಕಾ ಸೌಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 15000 | ಆಶಾ ಕಾರ್ಯಕರ್ತೆಯರಿಗೆ |
| 51 | KWR-0017 | ಶ್ರೀ ವಿನಾಯಕ ಸೌಹಾರ್ದ ಕ್ರಡಿಟ್ ಕೋ–ಆಪ್ ಲಿ., | ಉತ್ತರ ಕನ್ನಡ | 9000 | ಆಶಾ ಕಾರ್ಯಕರ್ತೆಯರಿಗೆ |
| 52 | KWR-0125 | ಮುರ್ಕುಂಡೇಶ್ವರ ಸ್ವಹಾರ್ದ ಸಹಕಾರಿ ನಿ., ನೆಲ್ಲಿಕೇರಿ | ಉತ್ತರ ಕನ್ನಡ | 12000 | ಆಶಾ ಕಾರ್ಯಕರ್ತೆಯರಿಗೆ |
| 53 | HVR-0074 | ಶ್ರೀ ಹೊಳಿಸಾಲ ದುರ್ಗಾದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., | ಹಾವೇರಿ | 21000 | ಆಶಾ ಕಾರ್ಯಕರ್ತೆಯರಿಗೆ |
| 54 | HVR-0009 | ನವಚೇತನ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಹಾವೇರಿ | 15000 | ಆಶಾ ಕಾರ್ಯಕರ್ತೆಯರಿಗೆ |
| 55 | HVR-0088 | ಅಮೃತನಿಧಿ ಪತ್ತಿನ ಸೌಹಾರ್ದ ಸಹಕಾರಿ ನಿ., | ಹಾವೇರಿ | 3000 | ಆಶಾ ಕಾರ್ಯಕರ್ತೆಯರಿಗೆ |
| 56 | KWR-0016 | ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 15000 | ಆಶಾ ಕಾರ್ಯಕರ್ತೆಯರಿಗೆ |
| 57 | BGM-0908 | ಶಿಂಧೋಳಿ ಅರ್ಬನ್ ಕ್ರಡಿಟ್ ಸೌಹಾರ್ದ ಸಹಕಾರಿ ನಿ., | ಬೆಳಗಾವಿ | 6000 | ಆಶಾ ಕಾರ್ಯಕರ್ತೆಯರಿಗೆ |
| 58 | BGM-358 | ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಾಗನೂರ | ಬೆಳಗಾವಿ | 21000 | ಆಶಾ ಕಾರ್ಯಕರ್ತೆಯರಿಗೆ |
| 59 | HVR-0061 | ಶ್ರೀ ಬಾಲಾಜಿ ವಿವಿದ್ದೋದ್ದೇಶಗಳ ಸೌಹಾರ್ದ ಸಹಕಾರಿ ನಿ., | ಹಾವೇರಿ | 3000 | ಆಶಾ ಕಾರ್ಯಕರ್ತೆಯರಿಗೆ |
| 60 | HVR-0094 | ಶ್ರೀ ಭವಾನಿ ಕ್ಷೇಮಾಭಿವೃದ್ಧಿ ಸೌಹಾರ್ದ ಸಹಕಾರಿ ನಿ., | ಹಾವೇರಿ | 3000 | ಆಶಾ ಕಾರ್ಯಕರ್ತೆಯರಿಗೆ |
| 61 | HVR-0087 | ಮಿತ್ರರ ಸೌಹಾರ್ದ ಸಹಕಾರಿ ನಿ., | ಹಾವೇರಿ | 3000 | ಆಶಾ ಕಾರ್ಯಕರ್ತೆಯರಿಗೆ |
| 62 | HVR-0025 | ಕಿತ್ತೂರು ಚೆನ್ನಮ್ಮ ಪತ್ತಿನ ಸೌಹಾರ್ದ ಸಹಕಾರಿ ನಿ.,., | ಹಾವೇರಿ | 6000 | ಆಶಾ ಕಾರ್ಯಕರ್ತೆಯರಿಗೆ |
| 63 | HVR-0040 | ಶ್ರೀ ವಾಸವಿ ಪತ್ತಿನ ಸೌಹಾರ್ದ ಸಹಕಾರಿ ನಿ., | ಹಾವೇರಿ | 6000 | ಆಶಾ ಕಾರ್ಯಕರ್ತೆಯರಿಗೆ |
| 64 | HVR-0021 | ಶ್ರೀ ವೀರಶ್ವವ ಪತ್ತಿನ ಸೌಹಾರ್ದ ಸಹಕಾರಿ ನಿ., | ಹಾವೇರಿ | 6000 | ಆಶಾ ಕಾರ್ಯಕರ್ತೆಯರಿಗೆ |
| 65 | HVR-0106 | ಶ್ರೀ ಗುರುಮಾರ್ಕೇಂಢೇಶ್ವರ ಸೌಹಾರ್ದ ಸಹಕಾರಿ ನಿ., | ಹಾವೇರಿ | 3000 | ಆಶಾ ಕಾರ್ಯಕರ್ತೆಯರಿಗೆ |
| 66 | HVR-0084 | ಜಯಲಕ್ಷ್ಮೀ ಸೌಹಾರ್ದ ಸಹಕಾರಿ ನಿ., | ಹಾವೇರಿ | 3000 | ಆಶಾ ಕಾರ್ಯಕರ್ತೆಯರಿಗೆ |
| 67 | HVR-0081 | ಶ್ರೀ ಬನಶೀ ಸೌಹಾರ್ದ ಸಹಕಾರಿ ನಿ., | ಹಾವೇರಿ | 6000 | ಆಶಾ ಕಾರ್ಯಕರ್ತೆಯರಿಗೆ |
| 68 | HVR-0079 | ಶ್ರೀ ಶಿವಪ್ರಿಯಾ ಸೌಹಾರ್ದ ಸಹಕಾರಿ ನಿ., | ಹಾವೇರಿ | 3000 | ಆಶಾ ಕಾರ್ಯಕರ್ತೆಯರಿಗೆ |
| 69 | HVR-0069 | ಕಲ್ಪತರು ಗ್ರಾಮೀಣ ವಿವಿದ್ದೋಧ್ದೇಶಗಳ ಸೌಹಾರ್ದ ಸಹಕಾರಿ ನಿ., | ಹಾವೇರಿ | 3000 | ಆಶಾ ಕಾರ್ಯಕರ್ತೆಯರಿಗೆ |
| 70 | HVR-0010 | ಶ್ರೀ ಚನ್ನೇಶ ಪತ್ತಿನ ಸೌಹಾರ್ದ ಸಹಕಾರಿ ನಿ., | ಹಾವೇರಿ | 6000 | ಆಶಾ ಕಾರ್ಯಕರ್ತೆಯರಿಗೆ |
| 71 | HVR-0110 | ಶ್ರೀ ಅಕ್ಷಯ ಗ್ವಣಪತಿ ಸೌಹಾರ್ದ ಸಹಕಾರಿ ನಿ., | ಹಾವೇರಿ | 6000 | ಆಶಾ ಕಾರ್ಯಕರ್ತೆಯರಿಗೆ |
| 72 | HVR-0113 | ನವಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ನಿ., | ಹಾವೇರಿ | 6000 | ಆಶಾ ಕಾರ್ಯಕರ್ತೆಯರಿಗೆ |
| 73 | MYS-0011 | ಶ್ರೀ ಸರಸ್ವತಿ ಸೌಹಾರ್ದ ಸಹಕಾರಿ ನಿ., | ಮೈಸೂರು | 10000 | ಸಂಯುಕ್ತ ಸಹಕಾರಿ |
| 74 | GLB-0063 | ಶ್ರೀ ಶ್ರೀಶೈಲ ಪತ್ತಿನ ಸೌಹಾರ್ದ ಸಹಕಾರಿ ನಿ., | ಕಲಬುರಗಿ | 5000 | ಸಂಯುಕ್ತ ಸಹಕಾರಿ |
| 75 | KPL-0096 | ಕೊಪ್ಪಳ ಪತ್ತಿನ ಸೌಹಾರ್ದ ಸಹಕಾರಿ ನಿ; ಕೊಪ್ಪಳ | ಕೊಪ್ಪಳ | 9000 | ಆಶಾ ಕಾರ್ಯಕರ್ತೆಯರಿಗೆ |
| 76 | KPL-0074 | ನವತುಂಗಭದ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ | ಕೊಪ್ಪಳ | 9000 | ಆಶಾ ಕಾರ್ಯಕರ್ತೆಯರಿಗೆ |
| 77 | KPL-0033 | ಕೊಪ್ಪಳ ತಾಲ್ಲೂಕ ವೀರರಾಣಿ ಕಿತ್ತೂರ ಚೆನ್ನಮ್ಮ ಸೌಹಾರ್ದ ಪತ್ತಿನ ಸಹಕಾರಿ ನಿ; ಕೊಪ್ಪಳ | ಕೊಪ್ಪಳ | 12000 | ಆಶಾ ಕಾರ್ಯಕರ್ತೆಯರಿಗೆ |
| 78 | KPL-0087 | ಶ್ರೀ ಮಾರುತೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ; ಕೊಪ್ಪಳ | ಕೊಪ್ಪಳ | 3000 | ಆಶಾ ಕಾರ್ಯಕರ್ತೆಯರಿಗೆ |

# ನಗದು ಹಿಂಪಡೆತದ ಮೇಲೆ ಟಿಡಿಎಸ್ ಕಡಿತ
## ದಿನಾಂಕ 01-07-2020ರಿಂದ ಆದಾಯ ತೆರಿಗೆ ಕಲಂ 194ಎನ್ ರ ಬದಲಾವಣೆಗಳು

– ಸಿಎ॥ ಬಿ.ವಿ.ರವೀಂದ್ರನಾಥ್, ಸಾಗರ

ಬಹುಶಃ ನೆನಪಿರಬಹುದು ನಿಮಗೆ, ಕೇಂದ್ರ ಸರ್ಕಾರವು ನಗದು ವ್ಯವಹಾರಗಳನ್ನು ಕಡಿಮೆ ಮಾಡಲು ಆದಾಯ ತೆರಿಗೆ ಕಾಯ್ದೆಯಲ್ಲಿ 194ಎನ್ ಎಂಬ ಕಲಂ ಅನ್ನು ಸೇರಿಸಿ ದಿನಾಂಕ 01–09–2019ರಿಂದ ಜಾರಿಗೆ ತಂದಿತು. ಈ ಕಲಂ ಪ್ರಕಾರ ಯಾವುದೇ ಬ್ಯಾಂಕ್ ಅಥವಾ ಬ್ಯಾಂಕಿಂಗ್ ವ್ಯವಹಾರವನ್ನು ಮಾಡುತ್ತಿರುವ ಸಹಕಾರಿ ಸಂಸ್ಥೆಗಳು (ಅಂದರೆ ಸಹಕಾರಿ ಬ್ಯಾಂಕುಗಳು) ಅಥವಾ ಅಂಚೆ ಕಛೇರಿಗಳು ಯಾವುದೇ ಒಬ್ಬ ವ್ಯಕ್ತಿಗೆ ವಾರ್ಷಿಕವಾಗಿ ರೂ. 1 ಕೋಟಿಗೆ ಮೀರಿ ನಗದು ಪಾವತಿಸಿದರೆ, ಒಂದು ಕೋಟಿ ರೂಗಳಿಗೆ ಮೀರಿದ ನಗದು ಪಾವತಿಯ ಮೇಲೆ ಶೇ 2ರಷ್ಟು ತೆರಿಗೆಯನ್ನು ಕಡಿತ ಮಾಡಬೇಕು.

ಆದರೆ ಈ ನಿಯಮವು ಸರ್ಕಾರಕ್ಕೆ ಅಥವಾ ಬ್ಯಾಂಕ್‌ಗಳಿಗೆ ಅಥವಾ ಬ್ಯಾಂಕಿಂಗ್ ವ್ಯವಹಾರವನ್ನು ಮಾಡುತ್ತಿರುವ ಸಹಕಾರಿ ಸಂಸ್ಥೆಗಳಿಗೆ (ಅಂದರೆ ಸಹಕಾರಿ ಬ್ಯಾಂಕುಗಳಿಗೆ) ಅಥವಾ ಅಂಚೆ ಕಛೇರಿಗಳಿಗೆ ಅಥವಾ ಕೇಂದ್ರ ಸರ್ಕಾರವು ಆರ್‌ಬಿಐ ಜೊತೆಗೆ ಸಮಾಲೋಚಿಸಿದ ನಂತರ ಅಧಿಕೃತ ಗೆಜೆಟ್‌ನಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳಿಗೆ ಮಾಡುವ ಪಾವತಿಗಳಿಗೆ ಅನ್ವಯಿಸುವುದಿಲ್ಲ. ಅದರಂತೆ, ಕೇಂದ್ರ ಸರ್ಕಾರವು ಆರ್‌ಬಿಐ ಜೊತೆಗೆ ಸಮಾಲೋಚಿಸಿ ದಿನಾಂಕ 20–09–2019ರ 70/2019 ಆದಾಯ ತೆರಿಗೆ ಅಧಿಸೂಚನೆಯ ಪ್ರಕಾರ ಕೃಷಿ ಉತ್ಪಾದನಾ ಮಾರುಕಟ್ಟೆ ಸಮಿತಿಯಡಿಯಲ್ಲಿ ಕಾರ್ಯನಿರ್ವಹಿಸುವ ದಲ್ಲಾಳಿಗಳು ಅಥವಾ ವ್ಯಾಪಾರಸ್ಥರು ತಮ್ಮ ಖಾತೆಯಿಂದ ಪಡೆಯುವ ನಗದಿಗೆ ಈ ನಿಯಮದ ವಿನಾಯಿತಿಯನ್ನು ನೀಡಿರುತ್ತದೆ. ಇಲ್ಲಿ ಗಮನಿಸುವ ಅಂಶ ಏನೆಂದರೆ, ಈ ಅಧಿಸೂಚನೆಯ ಪ್ರಕಾರ ಕೃಷಿಕರಿಗೆ ಅವರ ಮಾಲುಗಳ ಸಂಬಂಧ ದಲ್ಲಾಳಿಗಳು ಅಥವಾ ವ್ಯಾಪಾರಸ್ಥರು ನೀಡುವ ಪಾವತಿಗಳಿಗೆ ಮಾತ್ರ ಈ ಅಧಿಸೂಚನೆಯಡಿಯಲ್ಲಿ ವಿನಾಯತಿ ಇರುತ್ತದೆಯೆ ಹೊರತು ಇನ್ನಿತರೆ ಪಾವತಿಗಳಿಗೆ ಇರುವುದಿಲ್ಲ.

ಕೇಂದ್ರ ಸರ್ಕಾರವು ಮೇಲ್ಕಂಡ ಕಲಂ ಅನ್ನು 2020ರ ವಿತ್ತೀಯ ಕಾಯ್ದೆಯ ಮೂಲಕ ದಿನಾಂಕ 01–07–2020ರಿಂದ ಜಾರಿಗೆ ಬರುವಂತೆ ಬದಲಾಯಿಸಿದೆ. ಬದಲಾಗಿರುವ ಕಲಂ ಕೆಳಕಾಣಿಸಿದಂತಿದೆ.

**194N. Payment of certain amounts in cash.**

**Every person, being, —**

i) a banking company to which the Banking Regulation Act, 1949 (10 of 1949) applies (including any bank or banking institution referred to in section 51 of that Act);

ii) a co-operative society engaged in carrying on the business of banking; or

iii) a post office,

who is responsible for paying any sum, being the amount or the aggregate of amounts, as the case may be, in cash exceeding one crore rupees during the previous year, to any person (herein referred to as the recipient) from one or more accounts maintained by the recipient with it shall, at the time of payment of such sum, deduct an amount equal to two per cent of such sum, as income-tax:

Provided that in case of a recipient who has not filed the returns of income for all of the three assessment years relevant to the three previous years, for which the time limit of file return of income under sub-section (1) of section 139 has expired, immediately preceding the previous year in which the payment of the sum is made to him, the provision of this section shall apply with the modification that—

i) the sum shall be the amount or the aggregate of amounts, as the case may be, in cash exceeding twenty lakh rupees during the previous year; and

ii) the deduction shall be—

(a) an amount equal to two per cent of the sum where the amount or aggregate of amounts, as the case may be, being paid in cash exceeds twenty lakh rupees during the previous year but does not exceed one crore rupees; or

(b) an amount equal to five per cent of the sum where the amount or aggregate of amounts, as the case may be, be-

ing paid in cash exceeds one crore rupees during the previous year:

ಯಾವುದೇ ಒಬ್ಬ ವ್ಯಕ್ತಿಯು ಆರ್ಥಿಕ ವರ್ಷದಲ್ಲಿ ತನ್ನ ಖಾತೆಯಿಂದ ನಗದು ರೂಪದಲ್ಲಿ ಹಿಂಪಡೆಯುವ ಹಣದ ಮೊತ್ತ ಒಂದು ಕೋಟಿ ರೂಗಳನ್ನು ಮೀರಿದರೆ ಅಂತಹ ಮೊತ್ತದ ಮೇಲೆ ಶೇ 2ರಷ್ಟು ತೆರಿಗೆಯನ್ನು ಕಡಿತಮಾಡಲಾಗುವುದು.

ಆದರೆ ಯಾವುದೇ ಒಬ್ಬ ವ್ಯಕ್ತಿಯು ಕಲಂ 139(1)ರ ಪ್ರಕಾರ ಸತತವಾಗಿ ಕಳೆದ 3 ವರ್ಷಗಳಲ್ಲಿ ಆದಾಯ ತೆರಿಗೆಯ ವರದಿಯನ್ನು ಸಲ್ಲಿಸದಿದ್ದಲ್ಲಿ ಅಂತಹ ವ್ಯಕ್ತಿ ತನ್ನ ಖಾತೆಗಳಿಂದ ನಗದನ್ನು ಹಿಂಪಡೆಯುತ್ತಿದ್ದಲ್ಲಿ ಕೆಳಕಂಡಂತೆ ಮೂಲದಲ್ಲಿ ತೆರಿಗೆಯನ್ನು ಕಡಿತಮಾಡಲಾಗುತ್ತದೆ.

ಗಮನಿಸಿ : ಆದಾಯ ತೆರಿಗೆ ಕಾಯ್ದೆ ಕಲಂ.2(31)ರಲ್ಲಿ 'ವ್ಯಕ್ತಿ' ಯ ಬಗ್ಗೆ ವಿವರಣೆ ನೀಡಲಾಗಿದೆ. 'ವ್ಯಕ್ತಿ' ಎನ್ನುವ ಪರಿಭಾಷೆಯಲ್ಲಿ ಸಹಕಾರ ಸಂಸ್ಥೆಗಳು ಸೇರುವುದರಿಂದ ಸಹಕಾರಿ ಸಂಸ್ಥೆಗಳ ನಗದು ಹಿಂಪಡೆತಕ್ಕೆ ಟಿಡಿಎಸ್ ಅನ್ವಯವಾಗುತ್ತದೆ.

| ವಾರ್ಷಿಕ ನಗದು ಹಿಂಪಡೆತ | 20,00,000ವರೆಗೆ | 20,00,000ರಿಂದ 1,00,00,000 | 1,00,00,000 ಮೇಲ್ಪಟ್ಟು |
|---|---|---|---|
| ದರ | 0 % | 2 % | 5 % |

**ಉದಾಹರಣೆಗೆ :**

**o ಕಳೆದ ಮೂರು ವರ್ಷಗಳ ಆದಾಯ ತೆರಿಗೆ ವರದಿ ಸಲ್ಲಿಸಿದವರಿಗೆ**

| # | ನಗದು ಹಿಂಪಡೆತ | ಹೆಚ್ಚುವರಿ ಹಿಂಪಡೆತ | ಶೇ | ಟಿಡಿಎಸ್ | ಒಟ್ಟು ಟಿಡಿಎಸ್ |
|---|---|---|---|---|---|
| 1 | 20,00,000 | 0 | 0% | 0 | 0 |
| 2 | 55,00,000 | 0 | 0% | 0 | 0 |
| 3 | 1,50,00,000 | 50,00,000 | 2% | 1,00,000 | 1,00,000 |

**o ಕಳೆದ ಮೂರು ವರ್ಷಗಳ ಆದಾಯ ತೆರಿಗೆ ವರದಿ ಸಲ್ಲಿಸದವರಿಗೆ**

| # | ನಗದು ಹಿಂಪಡೆತ | ಹೆಚ್ಚುವರಿ ಹಿಂಪಡೆತ | ಶೇ | ಟಿಡಿಎಸ್ | ಒಟ್ಟು ಟಿಡಿಎಸ್ |
|---|---|---|---|---|---|
| 1 | 20,00,000 | 0 | 0% | 0 | 0 |
| 2 | 55,00,000 | 35,00,000 | 2% | 70,000 | 70,000 |
| 3 | 1,50,00,000 | 20,00,000 | 0% | 0 | |
| | | 80,00,000 | 2% | 1,60,000 | |
| | | 50,00,000 | 5% | 2,50,000 | 4,10,000 |

- ಈ ಹೊಸ ತಿದ್ದುಪಡಿಯ ಹಿನ್ನೆಲೆಯಲ್ಲಿ ಬ್ಯಾಂಕುಗಳು ತಮ್ಮಲ್ಲಿ ವ್ಯವಹರಿಸುವವರಿಗೆ ಯಾವ ದರದಲ್ಲಿ ತೆರಿಗೆ ಕಡಿತ ಮಾಡಬೇಕು ಎಂಬುದನ್ನು ನಿಶ್ಚಯಿಸಲು ನಗದು ಹಿಂಪಡೆದವರ ಹಿಂದಿನ ಮೂರು ವರ್ಷಗಳ ಆದಾಯ ತೆರಿಗೆ ವರದಿ ಸಲ್ಲಿಸಿದ ಬಗ್ಗೆ ವಿವರ ಸಂಗ್ರಹಿಸಬೇಕಿರುತ್ತದೆ.
- ಈ ಪ್ರಕ್ರಿಯೆಯಲ್ಲಿ ಗ್ರಾಹಕರಿಗೆ ಅನಾನುಕೂಲ ಆಗದ ರೀತಿಯಲ್ಲಿ ಮಾಹಿತಿ ಸಂಗ್ರಹಿಸಲು ಬ್ಯಾಂಕುಗಳಿಗೆ ಕೇಂದ್ರೀಯ ನೇರ ತೆರಿಗೆ ಮಂಡಳಿಯು (CBDT) ತನ್ನ ಜಾಲತಾಣದಲ್ಲಿ ಅನುಕೂಲ ಮಾಡಿಕೊಟ್ಟಿದೆ.
- ಈ ಅನುಕೂಲತೆಯಿಂದಾಗಿ ಯಾವುದೇ ಬ್ಯಾಂಕು ತಮ್ಮ ಗ್ರಾಹಕರನ್ನು ಕೇಳದೆಯೇ ಅವರಿಗೆ ಅನ್ವಯಿಸುವ ತೆರಿಗೆ ದರವನ್ನು ನಿರ್ಧರಿಸಬಹುದಾಗಿರುತ್ತದೆ.

**ಗಮನಿಸಬೇಕಾದ ಪ್ರಮುಖ ಅಂಶಗಳು :**

- ಈ ಹೊಸ ಕಲಂ ದಿ: 01–09–2019ರಿಂದ ಜಾರಿಗೆ ಬಂದಿರುವುದಾದರೂ 2019–20ನೇ ಸಾಲಿಗೆ ಅನ್ವಯಿಸುವ ಪ್ರಾವಧಾನದ ಲೆಕ್ಕಾಚಾರಗಳು ದಿ: 01–04–2019ರಿಂದಲೇ ಆರಂಭವಾಗುತ್ತದೆ.
- ಈಗ ಮಾಡಿರುವ ತಿದ್ದುಪಡಿಗಳು ದಿ: 01–07–2020ರಿಂದ ಜಾರಿಗೆ ಬರುವುದಾದರೂ ತಿದ್ದುಪಡಿಯಾದ ಲೆಕ್ಕಾಚಾರಗಳು ದಿ: 01–04–2020ರಿಂದಲೇ ಆರಂಭವಾಗುತ್ತದೆ.
- ಇದು ಸಹಕಾರ ಸಂಸ್ಥೆಗಳೂ ಸೇರಿದಂತೆ ಬ್ಯಾಂಕೇತರ ಎಲ್ಲ ವ್ಯಕ್ತಿಗಳಿಗೂ ಸಮಾನವಾಗಿ ಅನ್ವಯ.
- ಸಹಕಾರ ಸಂಸ್ಥೆಗಳು ತಾವು ವ್ಯವಹರಿಸುವ ಸಹಕಾರೀ (ಡಿಸಿಸಿ) ಬ್ಯಾಂಕೂ ಸೇರಿದಂತೆ ಯಾವುದೇ ಬ್ಯಾಂಕಿನಿಂದ ಪಡೆಯುವ ನಗದು ಹಿಂಪಡೆತಗಳಿಗೆ ಅನ್ವಯ
- ಬೇರರ್ ಚೆಕ್, ಕ್ರಾಸ್ ಮಾಡದ ಚೆಕ್, ಸೆಲ್ಫ್ ಚೆಕ್ ಇತ್ಯಾದಿಗಳ ಮೂಲಕ ಮಾಡಿದರೂ ನಗದು ಹಿಂಪಡೆತ ಎಂದು ಪರಿಗಣನೆಯಾಗಬಹುದು.
- ನಿಗದಿಪಡಿಸಿದ ಮಿತಿಯನ್ನು ಮೀರಿದ ಮೊತ್ತಗಳಿಗೆ ಮಾತ್ರ ತೆರಿಗೆ ಕಡಿತ ಮಾಡಲಾಗುವುದು. ಪೂರ್ಣ ಹಿಂಪಡೆತಗಳಿಗೆ ಅಲ್ಲ

37ನೇ ಪುಟಕ್ಕೆ.....

# ಶಿಸ್ತು, ಕಾರ್ಯಕ್ಷಮತೆ, ಸಮಯ ಪಾಲನೆ, ಉದ್ಯೋಗ ಸೃಷ್ಟಿ ಇದು ಮುಂಬೈನ ಡಬ್ಬಾವಾಲಾಗಳ ವೈಶಿಷ್ಟತೆ

– ಶ್ರೀ ಶಂಕರ್ ಎಸ್

1890ನೇ ಇಸವಿಯಿಂದ ಮುಂಬೈ ನಗರದಲ್ಲಿ ಡಬ್ಬಾವಾಲಗಳು ಬಿಳಿ ಉಡುಪಿನಲ್ಲಿ ಮತ್ತು ಸಾಂಪ್ರದಾಯಿಕ ಗಾಂಧಿ ಕ್ಯಾಪ್ ಧರಿಸಿ, ಸುಮಾರು 5,000 ಡಬ್ಬಾವಾಲಗಳು 2,00,000 ಜನರಿಗೆ ಅವರ ಹಸಿವನ್ನು ಈಡೇರಿಸುವಲ್ಲಿ ಸಹಕಾರಿಸುತ್ತ ಬಂದಿದ್ದಾರೆ. ಮುಂಬೈ ಮಹಾನಗರದ ಮನೆಗಳಲ್ಲಿ ಬೇಯಿಸಿದ ಆಹಾರವನ್ನು ಅವರವರ ಕಚೇರಿಗೆ ತಲುಪಿಸುವ ವ್ಯವಸ್ಥೆಯನ್ನು ಒಂದು ಶತಮಾನಕ್ಕೂ ಹೆಚ್ಚು ಕಾಲ ಸೇವೆ ನೀಡಿರುತ್ತಾರೆ.

**ಯಾರು ಈ ಡಬ್ಬಾವಾಲಾಗಳು? ಏನಿವರ ಕೆಲಸ? ಇವರ ಕೆಲಸದಲ್ಲಿ ಅದೆಂಥ ಅದ್ಭುತವೆನಿಸುವ ಸಂಗತಿಗಳಿವೆ? ಇವರಿಂದ ನಾವು ಕಲಿಯುವಂಥದ್ದೇನಿದೆ? ಇವರೇಕೆ ಇಂದು ಹೆಚ್ಚು ಪ್ರಸ್ತುತರಾಗುತ್ತಾರೆ? ನಿಜಕ್ಕೂ ನೀವು ಡಬ್ಬಾವಾಲಾಗಳ ವಿಸ್ಮಯಕಾರಿ ತಿಳಿಯೋಣ.**

ಮುಂಬೈ ನಗರದ ಮನೆಯಲ್ಲಿ ಅಡುಗೆ ಮಾಡಿ ಡಬ್ಬಾದಲ್ಲಿ ಕಟ್ಟಿಟ್ಟರೆ ಅದನ್ನು 40–50 ಕಿ.ಮೀ. ದೂರದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಮಧ್ಯಾಹ್ನದ ಊಟದ ಸಮಯಕ್ಕೆ ವಿತರಿಸಿ ಅನಂತರ ಸಾಯಂಕಾಲ ನಾಲ್ಕು ಗಂಟೆಯೊಳಗೆ ವಾಪಸು ಅವರವರ ಮನೆಗಳಿಗೆ ಡಬ್ಬಾಗಳನ್ನು ಹಿಂತಿರುಗಿಸುವವರೇ ಡಬ್ಬಾವಾಲಾಗಳು. ಇಷ್ಟೇ ಅವರ ಕೆಲಸ. ಮೇಲ್ನೋಟಕ್ಕೆ ತೀರಾ ಸರಳ ಕೆಲಸ ಎನಿಸಬಹುದು. ಮುಂಬೈ ಮಹಾನಗರ ಪಾಲಿಕೆಯಲ್ಲಿ ಕೆಲಸಮಾಡುವವರು ಬೆಳಿಗ್ಗೆ ಹತ್ತು ಗಂಟೆಗೆ ಆರಂಭವಾಗುವ ಕಚೇರಿಗೆ ತಲುಪಲು ಬೆಳಿಗ್ಗೆ ಏಳು ಗಂಟೆಗೆ ಮನೆ ಬಿಡಬೇಕು. ಆಗಲೇ ಊಟದ ಡಬ್ಬಾ ಒಯ್ಯಲು ಸಾಧ್ಯವಿಲ್ಲ. ಮನೆಯವರು ಡಬ್ಬಾ ಕಟ್ಟಿ ಕೊಡಬಹುದು. ಆದರೆ ರೈಲಿನಲ್ಲಿನ ಜನಜಂಗುಳಿಯಿಂದ ಡಬ್ಬಾ ಸುರಕ್ಷಿತವಾಗಿ ಕಚೇರಿ ತಲುಪುವುದೆಂದು ಹೇಳಲು ಆಗುವುದಿಲ್ಲ. ಒಮ್ಮೆ ತಲುಪಿದರೂ ಊಟ ತಣಿದು ಹೋಗುವುದ–ರಿಂದ ತಿನ್ನಲು ಆಗುವುದಿಲ್ಲ. ಡಬ್ಬಾವಾಲಾಗಳು ಹುಟ್ಟಿಕೊಂಡಿದ್ದೇ ಇದಕ್ಕಾಗಿ. ಬೆಳಗ್ಗೆ 10 ಗಂಟೆಗೆ ಡಬ್ಬಾವಾಲಾ ಬಂದು ನಿಮ್ಮ ಮನೆ ಬಾಗಿಲು ಬಡಿಯುತ್ತಾನೆ. ಮನೆ ಒಂದನೆ ಮಹಡಿಯಲ್ಲಿರಲಿ, ಹದಿನೆಂಟನೆ ಮಹಡಿಯಲ್ಲಿರಲಿ. ಆತ ಬಾಗಿಲು ಬಡಿದರೆ ಆಗ ಹತ್ತು ಗಂಟೆಯೇ ಆಗಿರುತ್ತದೆ. ಕಪ್ಪು ಬಣ್ಣದ ಸ್ವಸ್ತಿಕ್ ಚಿಹ್ನೆ, ಒಂದು ರೂಪಾಯಿ ಗಾತ್ರದ ಕೆಂಪುಬಣ್ಣದ ಗುರುತು ಅದಕ್ಕೊಂದು ಹಳದಿ ಗೀಟು ಹಾಕಿದ ಡಬ್ಬಾವನ್ನು ಆತ ಎತ್ತಿಕೊಂಡು ಹತ್ತಾರು ಕಿ.ಮೀ. ಸುತ್ತಿ, ಹೀಗೆ ನೂರಾರು ಮಹಡಿ ಹತ್ತಿ ಇಳಿದು ಡಬ್ಬಾಗಳನ್ನು ಸಂಗ್ರಹಿಸಿ ಅವೆಲ್ಲವುಗಳನ್ನು ಸೈಕಲ್‌ನಲ್ಲಿ ಹೇರಿಕೊಂಡು ಮತ್ತೆ ಏಳೆಂಟು ಕಿ.ಮೀ. ಸೈಕಲ್ ತುಳಿದು ಹತ್ತಿರದ ರೈಲು ನಿಲ್ದಾಣಕ್ಕೆ ತಲುಪಿಸುತ್ತಾನೆ. ಅಲ್ಲಿ ಆತನಿಗಾಗಿ ಎರಡನೆ ಡಬ್ಬಾವಾಲಿ ಕಾದಿರುತ್ತಾನೆ. ಅಷ್ಟೊತ್ತಿಗೆ ರೈಲು ನಿಲ್ದಾಣಕ್ಕೆ ಬೇರೆ ಬೇರೆಯವರು ಸಂಗ್ರಹಿಸಿದ



ಸಾವಿರಾರು ಡಬ್ಬಾಗಳು ಬಂದಿರುತ್ತವೆ. ಅವೆಲ್ಲವುಗಳನ್ನು ಸೇರಿಸಿಕೊಂಡು ಆತ ರೈಲು ಬರುತ್ತಿದ್ದಂತೆ ಅದರೊಳಗೆ ತುಂಬುತ್ತಾನೆ. ಸಾವಿರಾರು ಡಬ್ಬಾಗಳನ್ನು ಲೋಡ್ ಮಾಡಲು ಅವನಿಗಿರುವುದು ಕೇವಲ ಎರಡೇ ನಿಮಿಷ! ಅಲ್ಲಿ ಮೂರನೇಯವರು ನಿಂತಿರುತ್ತಾನೆ. ಅಷ್ಟೊತ್ತಿಗೆ ಬೇರೆ ಬೇರೆ ಕಡೆಗಳಿಂದ ಲಕ್ಷಾಂತರ ಊಟದ ಡಬ್ಬಾಗಳು ಬಂದು ಅಲ್ಲಿ ಸೇರಿರುತ್ತವೆ. ಡಬ್ಬಾದ ಮೇಲಿರುವ ಬಣ್ಣ, ಗೀಟು, ಚಿಹ್ನೆಗಳಿಂದ ಕೂಡಿರುತ್ತದೆ. ಅವನು ಕೆಲಸ ಮಾಡುವ ಜಾಗಕ್ಕೆ ಮಧ್ಯಾಹ್ನ ಒಂದು ಗಂಟೆಯಾಳಗೆ ಡಬ್ಬಾ ತಲುಪಿರುತ್ತದೆ. ಕೆಲವೊಮ್ಮೆ ಒಂದೊಂದು ಡಬ್ಬಾ ನಾಲ್ಕು–ಐದು ರೈಲುಗಳನ್ನು ಹತ್ತಿ ಇಳಿಯುವುದುಂಟು. ಆರೇಳು ಮಂದಿಯ ಕೈಗಳನ್ನು ದಾಟಿ ಹೋಗುವುದುಂಟು. ಅದೆಷ್ಟೇ ದೂರವಿರಲಿ, ಅದೆಷ್ಟೇ ಮಂದಿಯ ಕೈಗಳನ್ನು ದಾಟಲಿ, ಡಬ್ಬಾ ಸೇರಬೇಕಾದ ವ್ಯಕ್ತಿ ಎಂಥ ಕಿರಿದಾದ ಓಣಿಯಲ್ಲಿ ಕುಳಿತಿರಲಿ, ಐವತ್ತನೆ ಮಹಡಿಯಲ್ಲಿ ಕುಳಿತಿರಲಿ, ಆತ ಟ್ಯಾಕ್ಸಿ ಚಾಲಕನಾಗಿರಲಿ, ರಣರಣ ಬಿಸಿಲಿಗೆ ಊರಿಗೆ ಊರೇ ಬೆಂದೇಳಲಿ, 'ಸಾರಿ ಸರ್, ಇಂದು ಐದು ನಿಮಿಷ ಲೇಟಾಯ್ತು' ಎಂದು ಮುಖ ಕೆಳಗೆ ಮಾಡಿ ಹೇಳುವುದಿಲ್ಲ. ಡಬ್ಬಾ ಅದಲು–ಬದಲಾಯಿತೆಂದು ಮುಖ ಕೆಳಗೆ ಹಾಕುವುದಿಲ್ಲ. ಆತನಿಗೆ ನೆಪ ಹೇಳಿಗೊತ್ತಿಲ್ಲ. ಇದು ಇಂದು – ನಿನ್ನೆಯ ಕತೆಯಲ್ಲ. ಸುಮಾರು ನೂರು ವರ್ಷಗಳಿಂದ ಡಬ್ಬಾವಾಲಾಗಳು ಈ ರೀತಿಯ ಅಚ್ಚು ಕಟ್ಟು ಸೇವೆಯಲ್ಲಿ ನಿರತರಾಗಿದ್ದಾರೆ.

ಸುಮಾರು ಐದು ಸಾವಿರ ಡಬ್ಬಾವಾಲಾಗಳು ಪ್ರತಿನಿತ್ಯ ಎರಡು ಲಕ್ಷ ಮಂದಿಗೆ 'ಡಬ್ಬಾಸೇವೆ' ಮಾಡುತ್ತಿದ್ದಾರೆ. ಅಚ್ಚರಿಯ ಸಂಗತಿಯೆಂದರೆ ಈ ಆರು ಸಾವಿರ ಮಂದಿಯಲ್ಲಿ ಯಾರೂ ಹೆಚ್ಚು ಕಲಿತವರಲ್ಲ. ಬಹುತೇಕ ಮಂದಿ ಅನಕ್ಷರಸ್ಥರು. ಯಾವ ಡಬ್ಬಾದ ಮೇಲೂ ವಿಳಾಸವಿರುವುದಿಲ್ಲ. ಕೇವಲ

ಸಂಕೇತಗಳೇ ವಿಳಾಸ. ಆಧುನಿಕ ತಂತ್ರಜ್ಞಾನದ ಬಳಕೆಯಿಲ್ಲ. ಬಾರ್‌ಕೋಡ್ ಪದ್ಧತಿ ಗೊತ್ತಿಲ್ಲ. ಕಂಪ್ಯೂಟರ್ ಬಳಸುವುದಂತೂ ದೂರವೇ ಉಳಿಯಿತು. ತಲೆಗೊಂದು ಗಾಂಧಿ ಟೋಪಿ ಬಿಟ್ಟರೆ ಅವರಿಗೊಂದು ಸಮವಸ್ತ್ರವೂ ಇಲ್ಲ. ಆದರೆ ಸೇವೆ ಮಾತ್ರ ಅನುಪಮ! ನಾನ್‌ವೆಜ್ ಡಬ್ಬಾವನ್ನು ವೆಜ್ ಸೇವಿಸುವವರ ಮುಂದೆ ಇಟ್ಟ ನಿದರ್ಶನ ಇಲ್ಲವೇ ಇಲ್ಲ ಡಬ್ಬಾ ಬರಲೇ ಇಲ್ಲ ಎಂಬ ದೂರುಗಳಿಲ್ಲ. ಕಳೆದು ಹೋಯಿತೆಂಬ ಪುಕಾರುಗಳಿಲ್ಲ. ತಡವಾಯಿತೆಂಬ ಸಣ್ಣ ಅಪಸ್ವರವೂ ಇಲ್ಲ.

ಡಬ್ಬಾವಾಲಾಗಳ ಸಂಘ ತಾವು ಮಾಡುವ ಸೇವೆಗೆ ಒಬ್ಬ ವ್ಯಕ್ತಿಯಿಂದ ತಿಂಗಳಿಗೆ ಪಡೆಯುವುದಾದರೂ ಕೇವಲ 8 ರಿಂದ 10 ಸಾವಿರ ರೂಪಾಯಿ. ಪ್ರಾಯಶಃ ಇಷ್ಟೊಂದು ಸೇವೆ ಜಗತ್ತಿನಲ್ಲಿಯೇ ಇರಲಿಕ್ಕಿಲ್ಲ. ತಲುಪಿಸುವುದಿಷ್ಟೇ ಅಲ್ಲ, ಖಾಲಿ ಡಬ್ಬಿಯನ್ನು ವಾಪಸ್ ಮನೆಗೆ ತಲುಪಿಸುವ ಹೊಣೆಯೂ ಅವರದೇ. ಡಬ್ಬಾವಾಲಾಗಳು ಒಂದೇ ಒಂದು ದಿನ ಮುಷ್ಕರ ಹೂಡಿಲ್ಲ. ಜಾಸ್ತಿ ಹಣಪೀಕಬೇಕೆಂದು ಬೇಡಿಕೆ ಸಲ್ಲಿಸುವುದಿಲ್ಲ. ಡಬ್ಬಾವಾಲಾಗಳ ಸಂಘ ನಿರ್ಧರಿಸಿದಷ್ಟೆ ಹಣವನ್ನು ಕೊಟ್ಟರಾಯಿತು. ಹೆಂಡತಿ ಗಂಡನಿಗೆ ಹೇಳಬೇಕಾದ್ದನ್ನು ಒಂದು ಚೀಟಿ ಬರೆದು ಡಬ್ಬಾದಲ್ಲಿಟ್ಟರೆ ಊಟದ ಜತೆಗೆ ಅದನ್ನು ನೀಡುತ್ತಾರೆ. ಗ್ರಾಹಕರ ವಸ್ತುಗಳನ್ನು ಕಂಪನಿಗಳು ಎರಡು ತಾಸಿನೊಳಗೆ ತಮ್ಮ ಸ್ಯಾಂಪಲ್‌ಗಳನ್ನು ಮೂರು ಲಕ್ಷ ಗ್ರಾಹಕರಿಗೆ ತಲುಪಿಸಬೇಕಾದರೆ ನೋಡುವುದು ಡಬ್ಬಾವಾಲಾಗಳನ್ನೇ. ಅಪ್ಪಿ ತಪ್ಪಿ ಡಬ್ಬಾವಾಲಾನ ಸೈಕಲ್ ಅಥವಾ ತಳ್ಳುಗಾಡಿ ಲೈನ್‌ಜಂಪ್ ಮಾಡಿದರೆ ಪೊಲೀಸ್ ಹಿಡಿದು ಹಿಂಸಿಸುವುದಿಲ್ಲ. ಟಿಕೆಟ್ ತರಲಿಲ್ಲವೆಂದು ರೈಲಿನಲ್ಲಿ ಟಿಸಿ ಪೀಡಿಸುವುದಿಲ್ಲ. ಹಾಗಂತ ಡಬ್ಬಾವಾಲಾ ಲೈನನ್ನೂ ಜಂಪ್ ಮಾಡೊಲ್ಲ. ಟಿಕೆಟ್ ಇಲ್ಲದೇ ಪ್ರಯಾಣ ಮಾಡೋಲ್ಲ. ಮುಂಬೈ ಜನಜಂಗುಳಿಯಲ್ಲಿ ಹಾಗೂ ಜನಜೀವನದಲ್ಲಿ ಡಬ್ಬಾವಾಲಾಗಳಿಗೆ ಒಂದು ವಿಶೇಷ ಸ್ಥಾನಮಾನ. ಅವರೆಂದೂ ತಮ್ಮ ಕೆಲಸವನ್ನು ಡಬ್ಬಾ ವಿತರಣೆಯೆಂದು ಭಾವಿಸಿಲ್ಲ. ಅವರ ಪಾಲಿಗೆ ಇದು ಉದರ ಸೇವೆ. ಡಬ್ಬಾವಾಲಾಗಳು ದಿನಕ್ಕೆ ಮೂರು ಪಾಳಿಗಳಲ್ಲಿ 24 ಗಂಟೆಯೂ ಸೇವೆಗೆ ಲಭ್ಯ. ಯಾವುದೇ ಡಬ್ಬಾವಾಲಿ ಕೇಳಿ. ಆತ ತನ್ನ ಕೆಲಸದ ಬಗ್ಗೆ ಗೊಣಗುವುದಿಲ್ಲ. ಕೈ ತುಂಬಾ ಹಣ ಸಿಗದಿದ್ದರೂ ಪರವಾಗಿಲ್ಲ, ತನ್ನ ಕೆಲಸದ ಬಗ್ಗೆ ಕೀಳರಿಮೆ ಇಲ್ಲ. ಆತನ ಮಗನನ್ನು ಕೇಳಿ. ತಾನು ಡಬ್ಬಾವಾಲಿಯ ಮಗನೆಂದು ಆತ ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಅಪ್ಪ ಆರಾಮಿಲ್ಲದೇ ಮಲಗಿದರೆ ಮಗ ಡಬ್ಬಾ ಹೊರಲು ಸಿದ್ಧನಾಗಿರುತ್ತಾನೆ. 'ನಾವು ಡಬ್ಬಾವಾಲಿಗಳು' ಎಂದು ಅವರು ಗರ್ವದಿಂದ ಹೇಳಿಕೊಳ್ಳುತ್ತಾರೆ.

ಬಹುರಾಷ್ಟ್ರೀಯ ಕಂಪನಿಗಳ ಹೊಡೆತ, ಸ್ವಿಗ್ಗಿ, ಜೊಮಾಟೊ, ಉಬರ್ ಹಾಗೂ ಫಾಸ್ಟ್ ಫುಡ್‌ಗಳ ಪೈಪೋಟಿ, ತಂತ್ರಜ್ಞಾನದ ಕೊರತೆಯ ನಡುವೆಯೂ ಡಬ್ಬಾವಾಲಾಗಳನ್ನು ಕದಲಿಸಲು ಆಗುತ್ತಿಲ್ಲ. ಒಬ್ಬ ಡಬ್ಬಾವಾಲಿ ಸಂಕಷ್ಟಕ್ಕೆ ಸಿಲುಕಿದರೆ ಇಡೀ ಸಮೂಹವೇ ತಕ್ಷಣ ನೆರವಿನ ಹಸ್ತ ಚಾಚುತ್ತದೆ. ಡಬ್ಬಾವಾಲಾಗಳು ಶಿಸ್ತು, ಕಾರ್ಯಕ್ಷಮತೆ, ಸಮಯ ಪಾಲನೆ, ಸರಳ ಸಂಘಟನೆ, ಅದ್ಭುತ ಆಡಳಿತ ನಿರ್ವಹಣೆಯ ಮೂಲಕ ಡಬ್ಬಾವಾಲಾಗಳು ರೂಪುಗೊಂಡಿದ್ದಾರೆ. ಇದೇ ರೀತಿಯಾಗಿ ಸಹಕಾರಿ ಸಂಸ್ಥೆಗಳು ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವಲ್ಲಿ ರೂಪುಗೊಂಡರೆ ಸಹಕಾರಿಯು ಹೆಚ್ಚಿನ ಲಾಭ ಪಡೆದು ದೇಶದಲ್ಲಿ ಮಾದರಿ ಸಹಕಾರಿ ಸಂಸ್ಥೆಯಾಗಬಹುದಾಗಿದೆ.

.....35ನೇ ಪುಟದಿಂದ

- ನಗದು ಹಿಂಪಡೆತದ ಕಾರಣಗಳು ಮುಖ್ಯವಲ್ಲ
- ಕೆಳಕಾಣಿಸಿದವರಿಗೂ ಸಮಾನವಾಗಿ ಅನ್ವಯಿಸುತ್ತದೆ
    - ಹೊಸದಾಗಿ ವ್ಯವಹಾರ ಪ್ರಾರಂಭಿಸಿದವರು
    - ತೆರಿಗೆ ಮಿತಿಯೊಳಗಿರುವವರು
    - ನಷ್ಟದ ಕಾರಣ ವರದಿ ಸಲ್ಲಿಕೆ ಮಾಡದವರು
- ಒಂದು ಬ್ಯಾಂಕಿನ ಎಲ್ಲ ಖಾತೆಗಳಿಂದ ಒಟ್ಟು ನಗದು ಹಿಂಪಡೆತಕ್ಕೆ ಅನ್ವಯ. ಒಂದು ಶಾಖೆ ಯಾ ಒಂದು ಖಾತೆ ಎಂಬುದಲ್ಲ
- ಒಂದು ಆರ್ಥಿಕ ವರ್ಷದಲ್ಲಿ ಪಡೆದ ಹಿಂಪಡೆತಗಳ ಮೊತ್ತಕ್ಕೆ ಅನ್ವಯ. ಒಂದು ದಿನ ಯಾ ಒಮ್ಮೆ ಎಂದಿಲ್ಲ
- ಈ ಕಲಂ ಸಹಕಾರಿಯು ತನ್ನ (ಬ್ಯಾಂಕ್/ಅಂಚೆ ಕಛೇರಿ) ಖಾತೆಯಿಂದ ನಗದು ಹಿಂಪಡೆಯುವುದಕ್ಕೆ ಅನ್ವಯವಾಗುತ್ತದೆಯೇ ಹೊರತು, ಸಹಕಾರಿಯ ಸದಸ್ಯನು ಸಹಕಾರಿಯಲ್ಲಿನ ತನ್ನ ಖಾತೆಯಿಂದ ಹಿಂಪಡೆವ ನಗದು ವ್ಯವಹಾರಕ್ಕಲ್ಲ.
- ತೆರಿಗೆ ಕಡಿತ ಮಾಡಿದಲ್ಲಿ ತೆರಿಗೆ ಕಡಿತದ ಪ್ರಮಾಣ ಪತ್ರ ನೀಡಲಾಗುವುದು. ತೆರಿಗೆ ಕಟಾವು ಮಾಡಿಸಿಕೊಂಡ ವ್ಯಕ್ತಿಯು ತನ್ನ ತೆರಿಗೆ ವರದಿ ಸಲ್ಲಿಸಿ ಈ ತೆರಿಗೆ ಮೊತ್ತವನ್ನು ಹಿಂಪಡೆಯಬಹುದು.

**ಸಾರಾಂಶ :** ಯಾವುದೇ ಸಹಕಾರಿ ಸಂಸ್ಥೆಗಳು (ಪಟ್ಟಣ ಸಹಕಾರ ಬ್ಯಾಂಕುಗಳನ್ನು ಹೊರತುಪಡಿಸಿ) ಆರ್ಥಿಕ ವರ್ಷದಲ್ಲಿ ತನ್ನ ಖಾತೆಯಿಂದ ನಗದು ರೂಪದಲ್ಲಿ ಹಿಂಪಡೆಯುವ ಹಣದ ಮೊತ್ತ ಒಂದು ಕೋಟಿ ರೂಗಳನ್ನು ಮೀರಿದರೆ ಅಂತಹ ಮೊತ್ತದ ಮೇಲೆ ಶೇ.2ರಷ್ಟು ತೆರಿಗೆಯನ್ನು ಕಡಿತ ಮಾಡಲಾಗುವುದು. ಆದರೆ, ಒಂದು ವೇಳೆ ಸಹಕಾರಿ ಸಂಸ್ಥೆಯು ಕಲಂ 139(1)ರ ಪ್ರಕಾರ ಸತತವಾಗಿ ಕಳೆದ 3 ವರ್ಷಗಳಲ್ಲಿ ಆದಾಯ ತೆರಿಗೆಯ ವರದಿಯನ್ನು ಸಲ್ಲಿಸದಿದ್ದಲ್ಲಿ, ಇಪ್ಪತ್ತು ಲಕ್ಷ ರೂಪಾಯಿಯಿಂದ ಒಂದು ಕೋಟಿಯವರೆಗಿನ ನಗದು ಹಿಂಪಡೆತಕ್ಕೆ ಶೇ.2 ಹಾಗೂ ಒಂದು ಕೋಟಿ ಮೇಲ್ಪಟ್ಟ ನಗದು ಹಿಂಪಡೆತಕ್ಕೆ ಶೇ.5 ಮೂಲದಲ್ಲಿ ತೆರಿಗೆಯನ್ನು ಕಡಿತ (ಟಿಡಿಎಸ್) ಮಾಡಲಾಗುತ್ತದೆ.

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-4)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-4)



– ಶ್ರೀ ಯಶವಂತ ಡೋಂಗ್ರೆ

**ಎಸ್‌ಡಿಜಿ 4: ಗುಣಮಟ್ಟದ ಶಿಕ್ಷಣವು ಎಲ್ಲರನ್ನೂ ಒಳಗೊಂಡಂತೆ ಮತ್ತು ಸಮಾನ ಅವಕಾಶಗಳ ನೆಲೆಯಲ್ಲಿ ದೊರೆಯುವಂತೆ ಮತ್ತು ಜೀವನದುದ್ದಕ್ಕೂ ಕಲಿಕೆಯ ಅವಕಾಶಗಳು ದೊರೆಯುವಂತೆ ಮಾಡುವುದು**

**(Ensure inclusive and equitable quality education and promote lifelong learning opportunities for all)**

ಎಸ್‌ಡಿಜಿ 4ರಲ್ಲಿ ಸುಸ್ಥಿರ ಅಭಿವೃದ್ಧಿಯ ಪ್ರಾಥಮಿಕ ಅಗತ್ಯಗಳಲ್ಲೊಂದಾದ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಗುರಿಗಳನ್ನು ಗೊತ್ತುಪಡಿಸಲಾಗಿದೆ. 2030ರ ವೇಳೆಗೆ ಎಲ್ಲಾ ಹುಡುಗಿಯರು ಮತ್ತು ಹುಡುಗರು ಗುಣಮಟ್ಟದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಉಚಿತವಾಗಿ ಮತ್ತು ನ್ಯಾಯಸಮ್ಮತವಾಗಿ ಪಡೆಯುವಂತಾಗಬೇಕು. ಹಾಗೆಯೇ ಉನ್ನತ ಶಿಕ್ಷಣ ಬಯಸುವ ಪ್ರತಿಯೊಬ್ಬ-ರಿಗೂ ವಿಶ್ವವಿದ್ಯಾನಿಲಯ ಸೇರಿದಂತೆ ಉತ್ತಮ ಗುಣಮಟ್ಟದ ತಾಂತ್ರಿಕ, ವೃತ್ತಿಪರ ಮತ್ತು ಕಲಾ ಪ್ರಕಾರಗಳ ಶಿಕ್ಷಣ ದೊರೆಯುವಂತಾಗಬೇಕು ಮತ್ತು ಈ ಎಲ್ಲ ಪ್ರಕಾರಗಳಿಗೆ ಸಂಬಂಧಿಸಿದ ಸೂಕ್ತ ಕೌಶಲ್ಯಾಭಿವೃದ್ಧಿಯೂ ನಡೆಯಬೇಕೆಂದು ಈ ಗುರಿಯಲ್ಲಿ ತಿಳಿಸಲಾಗಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಎಲ್ಲ ಬಗೆಯ ಲಿಂಗ, ಪ್ರಾದೇಶಿಕ ಅಥವ ಇನ್ನಾವುದೇ ರೀತಿಯ ತಾರತಮ್ಯಗಳನ್ನು ನಿವಾರಿಸುವುದು, ಶಿಕ್ಷಣದ ಮೂಲಕ ಜಾಗತಿಕ ಪೌರತ್ವವನ್ನು ಸಾಧ್ಯವಾಗಿಸುವುದು, ಶಿಕ್ಷಿತ ಜನರಲ್ಲಿ ಸುಸ್ಥಿರ ಜೀವನಶೈಲಿಯನ್ನು ಉತ್ತೇಜಿಸುವುದು, ಶಿಕ್ಷಕರ ತರಬೇತಿಯನ್ನು ಹೆಚ್ಚಿಸುವುದು ಮತ್ತು ಪರಿಣಾಮಕಾರಿಯಾಗಿಸುವುದು, ಶಿಕ್ಷಣ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ವಿನಿಮಯವನ್ನು ವೃದ್ಧಿಸುವುದು ಮುಂತಾದುವುಗಳಮೇಲೆ ಎಸ್‌ಡಿಜಿ 3 ಒತ್ತು ನೀಡುತ್ತದೆ.

ಉತ್ತಮ ಗುಣಮಟ್ಟದ ಶಿಕ್ಷಣದ ಮೇಲೆ ಹೂಡಿಕೆ ಮಾಡುವುದರ ಮೂಲಕ ಮಾನವ ಬಂಡವಾಳವನ್ನು (ಹ್ಯುಮನ್ ಕ್ಯಾಪಿಟಲ್) ಉನ್ನತೀಕರಿಸುವುದು ಸುಸ್ಥಿರ ಅಭಿವೃದ್ಧಿ ಸಾಧನೆಗೆ ಅಡಿಪಾಯವಾಗಿದೆ. ಜಗತ್ತಿನಾದ್ಯಂತ ಸರಕಾರಗಳು ಮತ್ತು ಖಾಸಗಿ ವಲಯದ ಎಲ್ಲ ಪ್ರಯತ್ನದ ನಡುವೆಯೂ ಎಲ್ಲರಿಗೂ ಎಲ್ಲ ಮಟ್ಟದ ಶಿಕ್ಷಣ ದರೊರೆಯುವಂತೆ ಮಾಡುವುದು ಸಾಧ್ಯವಾಗಿಲ್ಲ. ಜಗತ್ತಿನಲ್ಲಿ ಶಿಕ್ಷಣಕ್ಕೆ ಅರ್ಹರಾಗಿರುವ ಜನಸಂಖ್ಯೆಯಲ್ಲಿ ಶೇಕಡ 91 ಜನರಿಗೆ ಪ್ರಾಥಮಿಕ ಶಿಕ್ಷಣ, ಶೇಕಡ 84 ಜನರಿಗೆ ಪ್ರೌಢ ಶಿಕ್ಷಣ ಮತ್ತು ಶೇಕಡ 60 ಜನರಿಗೆ ಮಾತ್ರ ಉನ್ನತ ಶಿಕ್ಷಣ ಲಭ್ಯವಿದೆ ಎಂಬುದು ಇತ್ತೀಚಿನ ಅಂಕಿ ಅಂಶಗಳಿಂದ ತಿಳಿಯುತ್ತದೆ. ಸುಮಾರು 61 ದಶಲಕ್ಷ ಮಕ್ಕಳನ್ನೂ ಸೇರಿದಂತೆ ಒಟ್ಟಾರೆಯಾಗಿ ತಮ್ಮ ವಯೋಮಾನಕ್ಕೆ ತಕ್ಕ ಶಿಕ್ಷಣ ಪಡೆಯಲು ಸಾಧ್ಯವಾಗದಿರುವವರ ಸಂಖ್ಯೆ ಸುಮಾರು 263 ದಶಲಕ್ಷ ಎಂದು ಅಂದಾಜು ಮಾಡಲಾಗಿದೆ. ಲಿಂಗ, ವಸತಿ ಪ್ರದೇಶ, ಜನಾಂಗ/ಜನಾಂಗೀಯತೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳಿಂದಾಗಿ ಈ ಅಸಮಾನತೆ ನೆಲೆಸಿದೆ. ಆಫ್ರಿಕದ ಹಲವು ದೇಶಗಳು ಮತ್ತು ದಕ್ಷಿಣ ಏಶ್ಯಾ ದೇಶಗಳಲ್ಲಿ ಈ ಸಮಸ್ಯೆ ಅತ್ಯಂತ ತೀವ್ರವಾಗಿದೆ ಎನ್ನುವುದೂ ಅಂಕಿಅಂಶಗಳಿಂದ ತಿಳಿಯುತ್ತದೆ. ಭಾರತದ ಪರಿಸ್ಥಿತಿಯನ್ನು ನೋಡಿದಾಗ ನಮ್ಮ ದೇಶವು ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಜಗತ್ತಿನ ಸರಾಸರಿಗೆ ಸನಿಹದಲ್ಲಿದ್ದರೂ, ಪ್ರೌಢ ಶಿಕ್ಷಣ ಮತ್ತು ಉನ್ನತ ಶಿಕ್ಷಣಗಳೆರಡರಲ್ಲೂ ಬಹಳ ಹಿಂದಿರುವುದು ಗಮನಕ್ಕೆ ಬರುತ್ತದೆ. ಆದುದರಿಂದ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಮಾಡುವ ಜವಾಬ್ದಾರಿ ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಬಹುಮುಖ್ಯವಾಗಿದೆ.

## ಸಹಕಾರಿ ಕ್ಷೇತ್ರದ ಪಾತ್ರ :

ಶಿಕ್ಷಣ ಮತ್ತು ಮಾಹಿತಿ ಸಹಕಾರಿ ಕ್ಷೇತ್ರದ ಮೂಲ ತತ್ವಗಳಲ್ಲೊಂದು. ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ಕಾರ್ಮಿಕ-ರಿಗೆ ಮತ್ತು ಎಲ್ಲ ರೀತಿಯ ಪಾಲುದಾರರಿಗೆ (ಸ್ಟೇಕ್‌ಹೋಲ್ಡರ್ಸ್) ಸೂಕ್ತ ಶಿಕ್ಷಣ ಮತ್ತು ಮಾಹಿತಿ ನೀಡಲು ಬದ್ಧರಾಗಿರುತ್ತವೆ. ಆದುದರಿಂದ ಶಿಕ್ಷಣ ಕ್ಷೇತ್ರ ಸಹಕಾರಿಗಳಿಗೆ ಹೊಸತೇನಲ್ಲ. ಈಗಾಗಲೇ ಬಹುತೇಕ ಎಲ್ಲ ಸಹಕಾರ ಸಂಸ್ಥೆಗಳು ವಿಶೇಷವಾಗಿ ಸಹಕಾರಿ ಯುನಿಯನ್/ಮಹಾಮಂಡಳಗಳು ವಿವಿಧ ಬಗೆಯ ಶಿಕ್ಷಣ/ತರಬೇತಿಗಳನ್ನು ನಡೆಸುತ್ತಲೇ ಬಂದಿವೆ. ಪ್ರತಿ ಸಹಕಾರಿ ಸಂಸ್ಥೆಯು ತಮ್ಮ ಲಾಭಾಂಶದಲ್ಲಿ ಒಂದು ಭಾಗವನ್ನು ಶಿಕ್ಷಣ ನಿಧಿಗಾಗಿ ನೀಡುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಅಂತೆಯೇ ಸಹಕಾರಿ ಸಂಸ್ಥೆಗಳು ತಮ್ಮ ಶಿಕ್ಷಣ ನೀಡಿಕೆಯ ತತ್ವದನುಸಾರ, ತಮಗಿರುವ ಅನುಭವ

ಮತ್ತು ತಮ್ಮ ಲಾಭದ ಒಂದಂಶವನ್ನು ಶಿಕ್ಷಣಕ್ಕೆ ವಿನಿಯೋಗಿಸುವ ಸಂಪ್ರದಾಯದ ಲಾಭವನ್ನು ತಮ್ಮ ಕಾರ್ಯಕ್ಷೇತ್ರದ ಪ್ರದೇಶದ ಇಡೀ ಸಮುದಾಯಕ್ಕೆ ನೀಡಲು ಕ್ರಮ ಕೈಗೊಂಡಲ್ಲಿ ಅದು ಎಸ್‌ಡಿಜಿ 4ರ ಗುರಿತಲುಪಲು ಸಹಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ತಮ್ಮ ಪ್ರದೇಶದ ಸಾಮಾನ್ಯ ನಾಗರೀಕರಿಗೆ ಶಿಕ್ಷಣ ಸೌಲಭ್ಯವನ್ನು ಆಸ್ಥೆಯಿಂದ ಒದಗಿಸುತ್ತಿರುವ ಹಲವು ಸಹಕಾರಿ ಪ್ರಯತ್ನಗಳನ್ನು ಜಗತ್ತಿನಾದ್ಯಂತ ನೋಡಬಹುದು. ಸಹಕಾರಿ ಮಾದರಿಯ ಶಾಲಾ ಕಾಲೇಜುಗಳಿಂದ ಹಿಡಿದು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣವನ್ನು ನೀಡುತ್ತಿರುವ ಸಹಕಾರಿ ವಿದ್ಯಾಸಂಸ್ಥೆಗಳು ಹಲವಿವೆ. ಗ್ವಾಟೆಮಾಲಾದಲ್ಲಿ ಮಹಿಳೆಯರೇ ಆರಂಭಿಸಿರುವ ಕರಕುಶಲ ಸಹಕಾರಿ ಸಂಘವಾದ ಯುಪಿಅವಿಐಎಂ, 1994ರಲ್ಲಿ ತನ್ನ ಸದಸ್ಯರ ಮಕ್ಕಳಿಗಾಗಿ ಶಿಶುವಿಹಾರವೊಂದನ್ನು ಆರಂಭಿಸಿತು. ಇಂದು ಅದು ದೇಶದ ಅತ್ಯುತ್ತಮ ಮಾಂಟೆಸರಿ ಶಾಲೆಗಳಲ್ಲಿ ಒಂದಾಗಿದ್ದು, ಸದಸ್ಯರ ಮಕ್ಕಳಿಗೆ ಕಡಿಮೆ ಶುಲ್ಕ ಮತ್ತು ಸದಸ್ಯರಲ್ಲದವರಿಗೆ ಹೆಚ್ಚಿನ ಶುಲ್ಕ ವಿಧಿಸುತ್ತಾ, ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ನೀಡುತ್ತಿದೆ. ರಾಹ್–ಎ–ರೋಶ್ದ್, ಇರಾನ್‌ನ ಟೆಹರಾನ್‌ನಲ್ಲಿರುವ ದೇಶದ ಮೊದಲ ಮತ್ತು ಅತಿದೊಡ್ಡ ಸಹಕಾರಿ ಶಾಲೆಯಾಗಿದೆ. 1985ರಲ್ಲಿ ಶಿಶುವಿಹಾರವಾಗಿ ಆರಂಭವಾದ ಈ ಶಾಲೆ ಇಂದು ದೇಶದಲ್ಲಿ ಹೆಣ್ಣು ಮಕ್ಕಳಿಗೆ ಪ್ರೌಢಶಾಲೆಯವರೆಗಿನ ಶಿಕ್ಷಣ ನೀಡುವ ಪ್ರಮುಖ ಸಂಸ್ಥೆಯಾಗಿದೆ. ಸುಮಾರು 2400 ವಿದ್ಯಾರ್ಥಿಗಳಿರುವ ಈ ಶಾಲೆ ಶಿಕ್ಷಣದ ಜೊತೆಗೇ ಸಹಕಾರಿ ಪ್ರರ್ಯಾಯದ ಬಗ್ಗೆ ಯುವಜನರಿಗೆ ತಿಳಿಹೇಳುವ ಹಾಗೂ ಲಿಂಗ ಸಮಾನತೆ ಮತ್ತು ಮಹಿಳೆಯರ ಆರ್ಥಿಕ ಸಬಲೀಕರಣದಂತಹ ಚಟುವಟಿಕೆಗಳಲ್ಲಿ ನಿರತವಾಗಿದೆ. ಇಂಗ್ಲೆಂಡ್‌ನಲ್ಲಿ 2006ರ ಶಿಕ್ಷಣ ಮತ್ತು ತಪಾಸಣೆ ಕಾಯ್ದೆ ಜಾರಿಗೆ ಬಂದಾಗಿನಿಂದ ನೂರಾರು ಸಹಕಾರಿ ಶಾಲೆಗಳನ್ನು ಸ್ಥಾಪಿಸಲಾಗಿದೆ. ಈ ಶಾಲೆಗಳು ಸಹಕಾರಿ ತತ್ವಗಳ ನೆಲೆಯಲ್ಲಿ, ಪೋಷಕರು, ಸಿಬ್ಬಂದಿ, ವಿದ್ಯಾರ್ಥಿಗಳು, ಸ್ಥಳೀಯ ಸಮುದಾಯದ ಇತರರನ್ನು ಸದಸ್ಯರನ್ನಾಗಿ ಹೊಂದಿ, ಉತ್ತಮ ಆಡಳಿತ ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಹೆಸರುವಾಸಿಯಾಗಿವೆ. 'ಕೋಟ್ ಡಿ ಐವೋರ್'ನಲ್ಲಿರುವ ಕೋಕೋ ಮತ್ತು ಕಾಫಿ ಮಾರಾಟ ಸಹಕಾರ ಸಂಘವಾದ 'ಕೋಆಪರೇಟಿವ್ ಅಗ್ರಿಕೋಲ್ ಕವೊಕಿವಾ ಡುಹಾತ್ ಸಸಂದ್ರ'ವು ಬಾಲ ಕಾರ್ಮಿಕರ ರಕ್ಷಣೆಗಾಗಿ ಶಾಲೆಯನ್ನು ತೆರೆದಿದ್ದು ಸುಮಾರು 1800 ಬಾಲ ಕಾರ್ಮಿಕರನ್ನು ರಕ್ಷಿಸಿ ಶಿಕ್ಷಣ ನೀಡಿದೆ. ತಾಂಜೇನಿಯಾದ ಉತ್ತರ ಕಿಲಿಮಂಜಾರೊ ಪ್ರದೇಶದ ಕಿಲಿಮಂಜಾರೋ ಸ್ಥಳೀಯ ಸಹಕಾರಿ ಒಕ್ಕೂಟವು ಎಚ್‌ಐವಿ/ಏಡ್ಸ್ ಪೀಡಿತರ ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿವೇತನಗಳನ್ನು ಆರಂಭಿಸಿದೆ. ಈ ವಿದ್ಯಾರ್ಥಿವೇತನಕ್ಕೆ ಒಕ್ಕೂಟವು ತನ್ನ ಲಾಭದ ಒಂದಂಶವನ್ನು ನೀಡುವುದರ ಜೊತೆಗೆ ಆರ್ಥಿಕವಾಗಿ ಸಧೃಢವಾಗಿರುವ ಸದಸ್ಯರು ದೇಣಿಗೆ ನೀಡುವುದನ್ನೂ ಪ್ರೋತ್ಸಾಹಿಸುತ್ತದೆ. ಕೆನಡದ ಒಟ್ಟಾವದಲ್ಲಿರುವ ವೈಓಎಮ್ ಸಹಕಾರಿ ಕೇಂದ್ರವು 35 ವರ್ಷಗಳಿಂದ ಬೌದ್ಧಿಕ ವಿಕಲಾಂಗತೆ ಹೊಂದಿರುವ ಮಕ್ಕಳಿಗೆ ಜೀವನ ಕೌಶಲ್ಯ ಮತ್ತು ವೃತ್ತಿ ತರಬೇತಿ ಕೇಂದ್ರವನ್ನು ನಡೆಸುತ್ತಿದೆ. ಬಹುಷ: ಶಿಕ್ಷಣ ಕ್ಷೇತ್ರಕ್ಕೆ ಬಹುದೊಡ್ಡ ಕಾಣಿಕೆ ನೀಡುತ್ತಿರುವ ಸಂಸ್ಥೆಯೆಂದರೆ ಸ್ಪೇನ್‌ನ ಮಾಂಡ್ರೆಗಾನ್ ಸಹಕಾರಿ ಸಮೂಹ. ಸುಮಾರು 266 ಅಂಗಸಂಸ್ಥೆಗಳ ಒಕ್ಕೂಟವಾದ ಮಾಂಡ್ರೆಗಾನ್ ಸಹಕಾರಿಯು ಸುಮಾರು ಒಂದು ಲಕ್ಷ ಕೆಲಸಗಾರರನ್ನು ಹೊಂದಿದ್ದು ಕೈಗಾರಿಕೆ, ಹಣಕಾಸು, ಚಿಲ್ಲರೆ ವ್ಯಾಪಾರ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದೆ. ಶಿಕ್ಷಣ ಕ್ಷೇತ್ರಕ್ಕೆ ಕೊಡುಗೆಯಾಗಿ ತನ್ನದೇ ವಿಶ್ವವಿದ್ಯಾನಿಲಯವನ್ನು ಆರಂಭಿಸಿರುವ ಮಾಂಡ್ರೆಗಾನ್ ಸಹಕಾರಿಯು ವೈದ್ಯಕೀಯ, ತಂತ್ರಜ್ಞಾನ, ಮಾನವಿಕ, ವ್ಯವಹಾರ ಅಧ್ಯಯನ ಮತ್ತು ಆಹಾರ ವಿಜ್ಞಾನಗಳಿಗೆ ಸಂಬಂಧಿಸದಂತೆ ಪದವಿ ಶಿಕ್ಷಣವನ್ನು ನೀಡುತ್ತಿದೆ. ಜೊತೆಗೆ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು ಹಾಗೂ ಆವಿಷ್ಕಾರ (ಇನ್ನೊವೇಶನ್) ಕೇಂದ್ರಗಳನ್ನು ಆರಂಭಿಸಿ ಅದರ ಮೂಲಕ ಯುವಜನರಿಗೆ ಜ್ಞಾನಾಧಾರಿತ ವ್ಯವಹಾರಗಳನ್ನು ಆರಂಭಿಸಲು ಸಹಕರಿಸುತ್ತಿದೆ.

ಭಾರತದಲ್ಲಿಯೂ ಸಹಕಾರಿ ಸಂಘಟನೆಗಳು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಹಲವು ಉದಾಹರಣೆಗಳಿವೆ. ಬಹುತೇಕ ಎಲ್ಲಾ ರಾಜ್ಯ ಸಹಕಾರಿ ಮಹಾಮಂಡಳಗಳು ಮತ್ತು ಕೆಲವು ನಿರ್ದಿಷ್ಟ ಕ್ಷೇತ್ರಕ್ಕೆ ಸಂಬಂಧಿಸಿದ ಮಹಾಮಂಡಳಗಳು (ಉದಾಹರಣೆಗೆ ಸಹಕಾರಿ ಬ್ಯಾಂಕಿಂಗ್ ಮಹಾಮಂಡಳ) ಸಹಕಾರ ಅಥವಾ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಡಿಪ್ಲೊಮ ಶಿಕ್ಷಣವನ್ನು ನೀಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಹಾಗೆಯೇ ರಾಷ್ಟ್ರೀಯ ಸಹಕಾರಿ ಯೂನಿಯನ್‌ನ ಅಂಗ ಸಂಸ್ಥೆಗಳು ಹಲವು ಸಹಕಾರಿ ವ್ಯವಸ್ಥಾಪನಾ ಸಂಸ್ಥೆಗಳನ್ನು ನಡೆಸುತ್ತಿದ್ದು ಇವುಗಳು ವಿಷಯವಾರು ತರಬೇತಿಯ ಜೊತೆಗೆ ಸಹಕಾರಿ ವಿಷಯದಲ್ಲಿ ಡಿಪ್ಲೊಮ ಶಿಕ್ಷಣ ಮತ್ತು ಹಲವು ವಿಶ್ವವಿದ್ಯಾನಿಲಯಗಳ ಸಂಯೋಜನೆ ಪಡೆದು ಎಂಬಿಎ ಪದವಿ ಶಿಕ್ಷಣವನ್ನೂ ನಡೆಸುತ್ತಿವೆ. ಇದಲ್ಲದೆ ಕೆಲವು ದೊಡ್ಡ ಸಹಕಾರಿ ಸಂಘಗಳು ಪ್ರತ್ಯೇಕವಾಗಿ ಟ್ರಸ್ಟ್‌ಗಳನ್ನು ಆರಂಭಿಸಿ ಅದರ ಮೂಲಕ ಶಾಲಾ ಕಾಲೇಜುಗಳನ್ನು ಆರಂಭಿಸಿವೆ (ಉದಾಹರಣೆಗೆ ಮಹಾರಾಷ್ಟ್ರದ ವಾರ್ಣ ಸಹಕಾರಿ ಸಮೂಹ). ಇನ್ನು ಕೆಲವು ಸಹಕಾರಿ ಸಂಘಗಳು (ಉದಾಹರಣೆಗೆ ಕೃಷಿಕ್ ಭಾರತಿ ಸಹಕಾರಿ ಸಂಸ್ಥೆ) ತಮ್ಮ ಸಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಗವಾಗಿ ಶಾಲಾ ಕಾಲೇಜುಗಳಿಗೆ ಆರ್ಥಿಕ ಸಹಾಯ ನೀಡುವುದು, ತರಗತಿ ಕೊಠಡಿಗಳನ್ನು ನಿರ್ಮಿಸಿಕೊಡುವುದು, ಗ್ರಂಥಾಲಯಗಳಿಗೆ ಪುಸ್ತಕಗಳನ್ನು ನೀಡುವುದು ಇಂತಹುವುಗಳ ಮೂಲಕ

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 40
Licensed to post without Prepayment License No. PMG BG/WPP-384/2020-2022.

ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಕೊಂಡಿವೆ. ಆರೋಗ್ಯ ಕ್ಷೇತ್ರದಲ್ಲಿದ್ದಂತೆ ಶಿಕ್ಷಣ ಕ್ಷೇತ್ರದಲ್ಲಿಯೂ ಸಹಕಾರಿ ಸಂಸ್ಥೆಗಳು ನೇರವಾಗಿ ತೊಡಗಿಕೊಂಡಿರುವ ಉದಾಹರಣೆ ಕೇರಳ ರಾಜ್ಯದಲ್ಲಿ ಕಾಣುತ್ತದೆ. ಕೇರಳದಲ್ಲಿ ಸಹಕಾರಿ ಕಾಯಿದೆಯಡಿಯಲ್ಲಿ ನೋಂದಾಯಿಸಲ್ಪಟ್ಟ ಒಂದು ನೂರಕ್ಕಿಂತ ಹೆಚ್ಚು 'ಸಹಕಾರಿ ಶಿಕ್ಷಣ ಸಂಸ್ಥೆಗಳು' ಕೆಲಸ ನಿರ್ವಹಿಸುತ್ತಿದ್ದು ಇವುಗಳಲ್ಲಿ ಪ್ರಾಥಮಿಕ ಶಾಲೆಗಳಿಂದ ಹಿಡಿದು ವೃತ್ತಿಪರ ಪದವಿಗಳನ್ನು ನೀಡುತ್ತಿರುವ ಸಂಸ್ಥೆಗಳಿವೆ (ಉದಾಹರಣೆಗೆ ಕೋಆಪರೇಟಿವ್ ಪಬ್ಲಿಕ್ ಸ್ಕೂಲ್, ಪಡುಕ್ಕಾಡ್, ವೈಯೂರ್, ತ್ರಿಶೂರ್ – co-operativepublicschool.org ; ಕೋಆಪರೇಟಿವ್ ಸ್ಕೂಲ್ ಆಫ್ ಲಾ, ಇಡುಕಿ - csl.ac.in; ಕೋಆಪರೇಟಿವ್ ಅಕಾಡೆಮಿ ಫಾರ್ ಪ್ರೊಫೆಶನಲ್ ಎಜುಕೇಶನ್, ತಿರುವನಂತಪುರಂ - capekerala.org ಇತ್ಯಾದಿ)

ಮೇಲಿನಂತಹ ಹಲವು ಉದಾಹರಣೆಗಳು ಲಭ್ಯವಿದ್ದರೂ, ಶಿಕ್ಷಣ ಕ್ಷೇತ್ರದಲ್ಲಿ 2030ರೊಳಗೆ ಸಾಧಿಸಬೇಕಾದ ಗುರಿಗಳ ಹಿನ್ನೆಲೆಯಲ್ಲಿ ನೋಡಿದರೆ ಸಹಕಾರಿ ಸಂಘಗಳು ಶಿಕ್ಷಣ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಸಕ್ರಿಯವಾಗಬೇಕಾದ ಅಗತ್ಯವಿದೆ. ಕೇವಲ ಸಹಕಾರಿ ಶಿಕ್ಷಣ ಮಾತ್ರವಲ್ಲದೆ ಸಾಮಾನ್ಯ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕಾರಿ ಸಂಘಗಳು ನೆರವು ನೀಡಬೇಕಾಗಿದೆ. ಇಂತಹ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಸಹಕಾರಿ ಸಂಘಟನೆಗಳು ಕೆಳಗೆ ತಿಳಿಸಿರುವಂತೆ ಕ್ರಮ ಕೈಗೊಳ್ಳಬಹುದಾಗಿದೆ.

1. ಸಹಕಾರಿ ಸಂಸ್ಥೆಗಳು ಪ್ರತಿವರ್ಷ ತಮ್ಮ ಲಾಭಾಂಶದ ಒಂದಂಶವನ್ನು ಅಗತ್ಯವಿರುವ ಸ್ಥಳೀಯ ಶಿಕ್ಷಣ ಸಂಸ್ಥೆಗಳಿಗೆ ಧನಸಹಾಯದ ರೂಪದಲ್ಲಿ ನೀಡಬಹುದು
2. ಬಡ ವಿದ್ಯಾರ್ಥಿಗಳಿಗೆ ಶಿಷ್ಯವೇತನಗಳನ್ನು ನೀಡುವುದರ ಮೂಲಕ ಕಲಿಕೆಯ ಸಾಧ್ಯತೆಗಳನ್ನು ಹೆಚ್ಚಿಸಬಹುದು
3. ಹೊಸ ಶಿಕ್ಷಣ ಸಂಸ್ಥೆಗಳು ಆರಂಭವಾಗುವಾಗ ಸಹಕಾರಿ ಸಾಂಸ್ಥಿಕ ರಚನೆಯ ಮೂಲಕ ಮಾಡುವಂತೆ ಪ್ರೇರೇಪಿಸಬಹುದು
4. ದೊಡ್ಡ ಸಹಕಾರಿ ಸಂಘಗಳು ಅಥವ ಹಲವು ಸಹಕಾರಿ ಸಂಘಗಳು ಒಟ್ಟಾಗಿ ಸ್ಥಳೀಯ ಅಗತ್ಯಗಳ ಅನುಸಾರ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಬಹುದು
5. ಅಗತ್ಯದ ಆಧಾರದಲ್ಲಿ ಯಾವುದಾದರೊಂದು ಶಿಕ್ಷಣ ಸಂಸ್ಥೆಯನ್ನು ದತ್ತು ಸ್ವೀಕರಾರ ಮಾಡಿ ಆ ಶಾಲೆಯ ಅಭಿವೃದ್ಧಿಗೆ ದೂರಗಾಮೀ ನೆಲೆಯಲ್ಲಿ ಸಹಕರಿಸಬಹುದು
6. ಸಹಕಾರೀ ಸಂಸ್ಥೆಗಳ ಸದಸ್ಯರಿಗೆ ಮತ್ತು ಸಿಬ್ಬಂದಿಗೆ ವೃತ್ತಿಪರತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅಗತ್ಯ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳಿಗೆ ವಿಶ್ವವಿದ್ಯಾನಿಲಯಗಳ ಸಂಯೋಜನೆ ಪಡೆದು ನಡೆಸಬಹುದು
7. ದೂರ ಶಿಕ್ಷಣ ಮತ್ತು ಆನ್‌ಲೈನ್ ಶಿಕ್ಷಣ ಕಾರ್ಯಕ್ರಮಗಳನ್ನು ಆರಂಭಿಸಬಹುದು
8. ಸಹಕಾರೀ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಗತ್ಯವಿರುವ ಮಾನವ ಸಂಪನ್ಮೂಲವನ್ನು ವೃದ್ಧಿಪಡಿಸಲು ಅಗತ್ಯವಾದ ಕಿರು ಅವಧಿ ಮತ್ತು ದೀರ್ಘಾವಧಿ ಕೋರ್ಸ್‌ಗಳನ್ನು ಆರಂಭಿಸಬಹುದು
9. ಸಹಕಾರಿ ಸಂಘಗಳ ಸದಸ್ಯರುಗಳು ಸೇರಿ ಅನಕ್ಷರಸ್ಥರಿಗೆ ಶಿಕ್ಷಣ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು
10. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರಕಾರವು ಆಗಿಂದಾಗ್ಗೆ ಚಾಲ್ತಿಗೆ ತರುವ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬಹುದು.

ಎಲ್ಲರೂ ಶಿಕ್ಷಿತರಾಗುವುದು ಮತ್ತು ಆಯಾ ಸಂದರ್ಭದ ಅಗತ್ಯಗಳ ಅನುಸಾರ ಉತ್ತಮ ಶಿಕ್ಷಣ ಎಲ್ಲರಿಗೂ ಸಿಗುವಂತಾಗುವುದು ಸುಸ್ಥಿರ ಅಭಿವೃದ್ಧಿಯ ಅಗತ್ಯಗಳಲ್ಲೊಂದು. ಈ ಸಂಬಂಧದ ಗುರಿಯನ್ನು ತಲುಪಲು ಸಹಕಾರಿ ಸಂಸ್ಥೆಗಳು ಪ್ರಾಥಮಿಕ ನೆಲೆಯಲ್ಲಿ ಮತ್ತು ಮಹಾಮಂಡಳಗಳ ನೆಲೆಯಲ್ಲಿ ಪ್ರಯತ್ನಮಾಡಬೇಕು. ಭಾರತದಂತಹ ದೇಶದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಧಿಸಬೇಕಾದುದು ಇನ್ನೂ ಬಹಳಷ್ಟಿದೆ. ಸಹಕಾರಿ ಸಂಘಟನೆಗಳಿಗೆ ಶಿಕ್ಷಣ ಪ್ರಾಥಮಿಕ ತತ್ವಗಳ ಭಾಗವಾಗಿರುವುದರಿಂದ, ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತಮ್ಮ ದೇಣಿಗೆ ನೀಡುವುದು ಎಲ್ಲ ಸಕಾರಿಗಳ ಕರ್ತವ್ಯವಾಗಿದೆ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010